

ಅಖಿಲ ಭಾರತ ಪತ್ರಿಕೆ
ಮಾರ್ಚ್ 2020

# ವೈವಿಧ್ಯತೆಯಲ್ಲಿ ಏಕತೆ

ಬೆಲೆ : 15/-



ಅವಳ ಆರ್ಣವದ ಪವನಗಳು ಅವನ ಸಾಹಸದ ನೌಕೆಯನ್ನು
ಪ್ರೋತ್ಸಾಹದಲ್ಲಿ ಮುನ್ನುಗ್ಗುವಂತೆ ಬೆಂಬಲಿಸಿ ಸತತವದನು
ವಿಶ್ವದಾರ್ಣವದ ಘೋಷ–ಘೋಷಗಳು ಅನವರತ ನಾದ ತುಂಬಿ
ಅವ ಚಲಿಸಿದತ್ತ ಅನುರಣನ ನಿತ್ಯ ಅಲೆಯಲೆಯ ಎದೆಯ ತುಂಬಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 1 ಪುಟ 72)**

**ಅಖಿಲ ಭಾರತ ಪತ್ರಿಕೆ**

**ಮಾರ್ಚ್ 2020**

ಸಂಪುಟ: 30 ಸಂಚಿಕೆ: 03


## ಪರಿವಿಡಿ


**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 343.
ಫೋನ್: 94487 74920
editorabpbng@yahoo.com



**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


### "ವೈವಿಧ್ಯತೆಯಲ್ಲಿ ಏಕತೆ"

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಭೂಮಿ ಮತ್ತು ಮಾನವೀಯತೆಗಾಗಿ ಶ್ರೀಮಾತೆಯ ಪ್ರಣಾಳಿಕೆ** 5
ಅನು: ನಾಗಜ್ಯೋತಿ ಯಲಿವಾರ

**ವಿಭಜನೆ ಹಾಗೂ ಅನಿಯಮಿತತನದ ಶಮನ** 9
ಅನು: ಪ್ರೊ. ವೀರಭದ್ರಪ್ಪ ಕೆ.

**ಐಕ್ಯತೆಯ ಮರುಶೋಧನೆ** 18
ಅನು: ಡಾ॥ ಮಹಾದೇವ ಸಕ್ರಿ

**ಸಮಗ್ರ ಯೋಗ** 28
ಅನು: ಡಾ॥ ಬಲಭೀಮ ಭೀಡ

**ಶ್ರೀ ಅರವಿಂದರು – ಶತಮಾನದ ನೋಟ** 42
(ಮುಂದುವರೆದ ಭಾಗ – 2)
– ಶ್ರೀ ನವನೀತ ರಾಮಚಂದ್ರರಾಯರು

**ವಾರ್ತಾಪತ್ರ** 54

## ಸಂಪಾದಕರ ಟಿಪ್ಪಣಿ

ಯುದ್ಧಗಳು, ಸಂಘರ್ಷಗಳು ಮತ್ತು ಹೋರಾಟಗಳು ವಾಸ್ತವದಲ್ಲಿರುವ ನೈಜ ಆಯಾಮವಾಗಿದೆ. ಆದರೆ ಭವಿಷ್ಯದಲ್ಲಿ ಮಾನವನ 'ಒಗ್ಗೂಡುವಿಕೆಯನ್ನು' ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಏಕೆಂದರೆ ವಿಶ್ವವು ಯಾವಾಗಲೂ ಸಂಯೋಗದಲ್ಲಿ ಏಕಾತ್ಮವಾಗಿರುವದನ್ನೇ ಆಶಿಸುತ್ತದೆ. ಇದು ಅದರ ಆಂತರ್ಯದಲ್ಲಿ ರಹಸ್ಯವಾಗಿಯೇ ಇರುತ್ತದೆ. ಆದರೆ ಬಾಹ್ಯದಲ್ಲಿ ನಾವು ವಿಭಿನ್ನತೆಗಳನ್ನು, ವಿವಿಧತೆಯನ್ನು ಜೊತೆಗೆ ಬಿಡಿ–ಬಿಡಿಯಾಗಿಯೇ ಇರುವದನ್ನು ಕಾಣುತ್ತೇವೆ. ಈ ವೈವಿಧ್ಯತೆಗಳೂ ಒಂದು ಘನವಾದ ಉದ್ದೇಶದ ಸಲುವಾಗಿಯೇ ರೂಪಿಸಲ್ಪಟ್ಟಿರುತ್ತವೆ. ವೈವಿಧ್ಯತೆಯಲ್ಲಿ ಏಕತೆಯನ್ನು ರೂಪಿಸುವದಕ್ಕಾಗಿಯೇ ಈ ವ್ಯವಸ್ಥೆಯು ನಿಯತಿಗೊಳಿಸಲ್ಪಟ್ಟಿರುತ್ತದೆ. ಈ ಸೃಷ್ಟಿಯ ಘನ ಉದ್ದೇಶವೂ ಇದೇ ಆಗಿರುವಂತೆ ತೋರುತ್ತದೆ. ಏಕತೆಯನ್ನು ಹೊಂದುವದರ ಸಲುವಾಗಿಯೇ ಈ ಅನಂತಾನಂತ ರೂಪಾಂತರಣಗಳ ವೈವಿಧ್ಯತೆ ರೂಪಿಸಲ್ಪಟ್ಟಿದೆ. ಆದರೆ ನಮ್ಮ ಆಂತರ್ಯದ ಅವಕಾಶದಲ್ಲಿಯೇ, ಮಹಾ–ಮಹಾ ಯುದ್ಧದ ಹಾಗೂ ಸಂಘರ್ಷಗಳ ಮೂಲಕವೇ ನಾವು ಹೋರಾಟವನ್ನು ಮುಂದುವರೆಸಿ, ಇಲ್ಲಿರುವ ದ್ವೇಷ, ತ್ವೇಷ, ಸ್ವಾರ್ಥ ಮತ್ತು ಅಂಜಿಕೆಗಳ ವಿರುದ್ಧ ನಮ್ಮ ಹೋರಾಟವನ್ನು ಮಾಡುವದೇ ಈ 'ಏಕತೆಯ ಆತ್ಯಂತಿಕ' ರಹಸ್ಯವಾಗಿರುತ್ತದೆ. ಈ ಪಥದಲ್ಲಿಯೇ ಏಕತೆಯನ್ನು ಶೋಧಿಸಿಕೊಳ್ಳಬೇಕಾಗಿದೆ. ಆ ಮೂಲಕ ನಮ್ಮ 'ಐಕ್ಯತೆ'ಯನ್ನು ರೂಪಿಸಿಕೊಳ್ಳಬೇಕಾಗಿದೆ.

ಈ ಸಂಚಿಕೆಯಲ್ಲಿ "ವೈವಿಧ್ಯತೆಯಲ್ಲಿ ಏಕತೆ"ಯ ಆಯಾಮಗಳ ಕುರಿತೇ ರೂಪಿಸಲ್ಪಟ್ಟ ವಿಚಾರ ಪ್ರಣಾಲಿಕೆಗಳಿವೆ. (ಎಬಿಎನ್)

*

## ಸಂಪಾದಕೀಯ

ಇರುವದೊಂದೇ ಭೂಮಿ ಎಂದರಿವಿದ್ದೂ ನಾವು ಛಿದ್ರ–ಛಿದ್ರವಾಗಿಯೇ ಉಳಿಯಲು, ನಮ್ಮ ನಮ್ಮ ಪ್ರಾಬಲ್ಯದ ಆಡಳಿತಾತ್ಮಕ ಪ್ರಭಾವವನ್ನೇ ಹೇರುವದರ ಸಲುವಾಗಿ, ವಿಶ್ವದ ನಿಯತಿಯ ಪಥವನ್ನು ಬಿಟ್ಟು ಹೋರಾಟಕ್ಕೆ ತೊಡಗಿದಾಗಲೇ 'ಯುದ್ಧ'ಗಳು ತಲೆದೋರಿ, ಅದೇ ಮಹಾಯುದ್ಧವೇ ಆಗಿ, ಮನುಕುಲದ ಅವನತಿಗೆ ಕಾರಣವಾಗುತ್ತಿದೆ. ಆದರೆ ಇದೇ ಯುದ್ಧವೇ ತನ್ನಲ್ಲಿಯೇ ಅಡಗಿಸಿಕೊಟ್ಟುಕೊಂಡಿರುವ "ಶಾಂತಿಯ ಸಲುವಾಗಿನ ತುಡಿತ"ವು, ಮಾನವನನ್ನು "ಒಂದಾ"ಗಿರುವದರ ಕಡೆಗೆ ಸೆಳೆಯುತ್ತದೆ. ಯುಗ ಪರಿವರ್ತನೆಗೆ ಕಾರಣವಾಗಿರುವ ಮಹಾಯುದ್ಧಗಳು, ಆಗಾಗ ಕಂಡುಬಂದಿರುವ ಎಲ್ಲ ವಿಚಲನೆಗಳನ್ನೂ ಸಮರ್ಥವಾಗಿ ಎದುರಿಸಿ, ಮಾನವನು "ಐಕ್ಯತೆಯ" ಬಗೆಗೆ ತೀವ್ರವಾಗಿ ಚಿಂತನಕ್ಕೆ ತೊಡಗುವಂತೆ ಪ್ರೇರೇಪಿಸಿವೆ.

ಬಾಹ್ಯ ಜಗತ್ತಿನಲ್ಲಿ ಘಟಿಸುತ್ತಿರುವ ಈ ತುಮುಲಗಳು ಮಾನವನ ಅಂತರಂಗದಲ್ಲಿಯೂ ಅಷ್ಟೇ ತೀವ್ರತೆರನಾದ ತಲ್ಲಣಗಳನ್ನು ಸೃಷ್ಟಿಸಿ, ವಿಕಸನದ ಗತಿಯನ್ನು ಕುಂಠಿತಗೊಳಿಸುತ್ತದೆ. ವೈಶ್ವಿಕವಾಗಿ ನಿಯತಿಯ ಗತಿಯಂತೆ ಘಟಿಸಲ್ಪಡುವ ವೈಶ್ವಿಕ ಘಟನೆಗಳೇ ಮಾನವನ ಜೀವನದ ಮೇಲೂ ತನ್ನ ಪ್ರಭಾವವನ್ನು ಬೀರುತ್ತಿರುವದರಿಂದ, ಮನುಕುಲವು ಅದನ್ನು ಸೂಕ್ತಗೊಳಿಸಿಕೊಳ್ಳುವ ಸಲುವಾಗಿ, ಕೆಲವೊಂದು ನಿಯಮಗಳನ್ನು ರೂಪಿಸಿಕೊಂಡು ಆಧ್ಯಾತ್ಮಿಕ ಮತ್ತು ನೈತಿಕ ಎನ್ನುವ ವರ್ಗೀಕರಣ ಮಾಡಿಕೊಂಡು ತನ್ನ ಬದುಕನ್ನು ಆಯಾಮಗೊಳಿಸತೊಡಗಿದ್ದಾನೆ. ಆದರೆ ಮಾನವ ಸಹಜ ವಾಂಛೆ ಹಾಗೂ ತನ್ನದೇ ಪ್ರಾಬಲ್ಯದಲ್ಲಿಯೇ ಎಲ್ಲವೂ ಬಡೆಯಬೇಕು ಎನ್ನುವ ಭ್ರಮೆಯಲ್ಲಿ ಗಡಿ– ಹಟ–ಹೋರಾಟ– ಯುದ್ಧ–ಹಾನಿ– ಪೀಳಿಗೆ ಪೀಳಿಗೆ ನಾಶದಂತಹ ಎಲ್ಲ ತೊಂದರೆಗಳನ್ನು ಅನುಭವಿಸಿ, ಪರಿಹಾರ ಕಂಡುಕೊಳ್ಳಲು ಯತ್ನಿಸಿದಾಗ ಬಂದ ಅನುಭವವೇ "ವೈವಿಧ್ಯತೆಯಲ್ಲಿ ಏಕತೆ". ಇಲ್ಲಿ ಪ್ರತಿಯೊಂದೂ ಪೂರ್ಣವೂ ಹೌದು; ಪ್ರತಿಯೊಂದಕ್ಕೆ ಪೂರಕವೂ ಹೌದು. ಈ ಒಕ್ಕೂಟ ವ್ಯವಸ್ಥೆಯು ವಿಶ್ವದ ಸಾಮಾನ್ಯ ನಿಯಮವಾಗಿದೆ. ಇದರ ಅನುಷ್ಠಾನದ ಪ್ರಾರಂಭಿಕ ಹಂತದಲ್ಲಿರುವ ನಮ್ಮ ಸದ್ಯದ ವ್ಯವಸ್ಥೆಯು ಇನ್ನೂ ಇನ್ನೂ ಪರಿಪಕ್ವಗೊಳ್ಳಬೇಕಾಗಿದೆ, ಆ ಎಡೆಗೆ ಸಾಗಬೇಕಾದಾಗ ಅನುಸರಿಸಲೇಬೇಕಾದ ಸಂಗತಿಗಳು, ಗೌರವಿಸಲೇಬೇಕಾದ ನಮ್ಮ ಮೂಲ

ಧ್ಯೇಯ ಹಾಗೂ ಅದೇ ಸಮಯಕ್ಕೆ ಮತ್ತೊಬ್ಬರನ್ನೂ ಗೌರವಿಸುವ ಮೂಲಕ ಈ ಏಕತೆಯನ್ನು ಸಾರಬಹುದಾಗಿದೆ. ಈ ಎಲ್ಲ ದೃಷ್ಟಾಂತಗಳೂ ಇಂದು ನಮ್ಮ ಕಣ್ಣೆದುರು ನಡೆಯುತ್ತಿವೆ.

ಇದರ ಸೂಕ್ತ ಪಥವನ್ನಾಗಲಿ ಅಥವಾ ಅದರ ಗುರಿಯ ಬಗೆಗಿನ ನಿಖರವಾದ ಜ್ಞಾನವನ್ನಾಗಲೀ ಜಗತ್ತಿಗೆ ಒದಗಿಸುವ ಹೊಣೆಗಾರಿಕೆ ಇಂದಿನ ವೈಜ್ಞಾನಿಕ ಯುಗದ ಚಿಂತನಗಳಿರಬೇಕಾಗಿದೆ. ಬಾಹ್ಯ ಬದುಕಿನ ಮಿಂಚು ಕೇವಲ ಕ್ಷಣಿಕ. ಅದರ ಮಿಂಚಿಗೆ ನಾವು ಕುರುಡರಾಗದೇ, ಎಚ್ಚೆತ್ತುಕೊಂಡು ಪರಸ್ಪರ ಸೌಹಾರ್ದ–ಸಂಬಂಧಗಳನ್ನು ಮತ್ತೊಮ್ಮೆ ಮತ್ತೊಮ್ಮೆ ಪರಿಷ್ಕರಿಸಿಕೊಂಡು, ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಈ ವಿಷಯವಾಗಿಯೇ ಶ್ರೀ ಅರವಿಂದರು ಮತ್ತು ಶ್ರೀಮಾತೆಯವರು ಆ ಸಮಯದಲ್ಲಿಯೇ ಇದರ ಬಗೆಗೆ ನೇರ ಪಥ ನಿರ್ದೇಶನ ಮಾಡಿದ್ದಾರೆ.

ಶ್ರೀ ನವನೀತ ರಾಮಚಂದ್ರರಾಯರು ಬರೆದ “ಶ್ರೀ ಅರವಿಂದರು” ಪುಸ್ತಕದಲ್ಲಿ ಈ ವಿಷಯದ ಕುರಿತು ಅಧ್ಯಯನಪೂರ್ಣವಾಗಿಯೇ ವಿವರಿಸಿದ್ದಾರೆ. ಸ್ವಾತಂತ್ರ್ಯ ಹೋರಾಟದ ನಂತರ, ಇಡೀ ಜಗತ್ತು “ವಿಶ್ವ ಸಂಸ್ಥೆಯ” ಅಡಿಯಲ್ಲಿ “ಒಕ್ಕೂಟದ” ವ್ಯವಸ್ಥೆಯಲ್ಲಿ ಭವಿಷ್ಯವನ್ನು ನಿರ್ಮಾಣ ಮಾಡಿಕೊಳ್ಳುವ ಪ್ರಯತ್ನದ ಹಿಂದೆ, ಇಡೀ ಮಾನವ ಸಮುದಾಯ, ವಿಕಸನದ ಹಂತದಲ್ಲಿ “ಏಕತ್ವವನ್ನು” ಸಾಧಿಸುತ್ತಿರುವ ಕುರಿತು ಪ್ರತಿಮಾತ್ಮಕ ಸಂಗತಿಯಾಗಿದೆ.

# ಭೂಮಿ ಮತ್ತು ಮಾನವೀಯತೆಗಾಗಿ ಶ್ರೀಮಾತೆಯವರ ಪ್ರಣಾಳಿಕೆ

– ಅನುವಾದ: ನಾಗಜ್ಯೋತಿ ಯಲಿವಾರ

**ಸಾಮಾನ್ಯ ಗುರಿ**

ಸಾಮಾನ್ಯ ಗುರಿಯನ್ನು ಸಾಧಿಸುವುದೆಂದರೆ, ಪ್ರಗತಿದಾಯಕ ವಿಶ್ವಾತ್ಮಿಕ ಸಾಮರಸ್ಯದ ಆಗಮನವೇ ಆಗಿದೆ. ಈ ಪೃಥ್ವಿಗೆ ಸಂಬಂಧಿಸಿದಂತೆ, ಈ ಗುರಿಯನ್ನು ಸಾಧಿಸುವ ಸಾಧನವೆಂದರೆ, ಮಾನವ ಐಕ್ಯತೆಯ ಸಾಕ್ಷಾತ್ಕಾರವನ್ನು ಎಲ್ಲರಲ್ಲೂ ಜಾಗೃತಗೊಳಿಸುವುದು ಮತ್ತು 'ಒಂದೇ' ಆದ ಈ ಅಂತರಂಗದ ದೈವತ್ವವನ್ನು ಎಲ್ಲರೂ ಪ್ರಕಟಪಡಿಸುವುದು. ಬೇರೊಂದು ರೀತಿಯಲ್ಲಿ ಹೇಳುವುದಾದರೆ ನಮ್ಮೆಲ್ಲರ ಅಂತರಂಗದಲ್ಲಿರುವ ಈ ದೈವೀ ಸಾಮ್ರಾಜ್ಯವನ್ನು ಸೃಷ್ಠಿ ಮಾಡುವುದು, ಆದ್ದರಿಂದ, ಇದು ಮಾಡಬೇಕಾದ ಉಪಯುಕ್ತ ಕೆಲಸವಾಗಿದೆ:

1) ಪ್ರತಿಯೊಬ್ಬರೂ ವೈಯಕ್ತಿಕವಾಗಿ, ತನ್ನೊಳಗಿನ ದೈವೀ ಸನ್ನಿಧಾನದ ಬಗ್ಗೆ ಜಾಗೃತನಾಗುವುದು ಮತ್ತು ದೈವೀ ತಾದಾತ್ಮ್ಯ ಹೊಂದುವುದು.

2) ಇಲ್ಲಿಯವರೆಗೆ ಜಾಗೃತ ಸ್ಥಿತಿಯಲ್ಲಿ ಇರಲಾರದಂತಹ ಮನುಷ್ಯನ ಸ್ಥಳಗಳನ್ನು ವೈಯಕ್ತೀಕರಣಗೊಳಿಸುವುದು ಮತ್ತು ಇದರ ಮೂಲಕ, ಇನ್ನೂ ಕೈಗೆ ಸಿಗದ ಒಂದು ಅಥವಾ ಹೆಚ್ಚಿನ ಶಕ್ತಿಗಳನ್ನು ಭೂಮಿಯ ಜೊತೆ ಸಂಪರ್ಕಕ್ಕೆ ತರುವುದು.

3) ಪ್ರಸುತ್ತ ಮನಸ್ಥಿತಿಗೆ ಹೊಂದಿಕೊಂಡ ಹೊಸ ರೂಪದಲ್ಲಿ ಶಾಶ್ವತ ಪದವನ್ನು ಮತ್ತೆ ಜಗತ್ತಿಗೆ ಸಾರುವುದು. ಇದು ಎಲ್ಲಾ ಮಾನವ ಜ್ಞಾನದ ಸಮನ್ವಯವಾಗಿರುತ್ತದೆ.

4) ದೇವರ ಮಕ್ಕಳ ಹೊಸ ಜನಾಂಗದ ಅರಳುವಿಕೆಗಾಗಿ ಒಂದು ಯೋಗ್ಯ ಸ್ಥಳದಲ್ಲಿ ಆದರ್ಶ ಸಮಾಜವನ್ನು ಸಾಮೂಹಿಕವಾಗಿ ಸ್ಥಾಪಿಸುವುದು.

*

## ಎರಡು ಪ್ರಕ್ರಿಯೆಗಳು

ಭೂಮಂಡಲದ ರೂಪಾಂತರ ಮತ್ತು ಸಾಮರಸ್ಯವನ್ನು ಎರಡು ಪ್ರಕ್ರಿಯೆಗಳಿಂದ ತರಬಹುದು, ಅದು ನೋಟಕ್ಕೆ ವಿರುದ್ಧವಾಗಿದ್ದರೂ ಅವು ಕೂಡಿಕೊಂಡು – ಒಂದಕ್ಕೊಂದು ಕಾರ್ಯ ನಿರ್ವಹಿಸಬೇಕು ಮತ್ತು ಪರಸ್ಪರ ಪೂರ್ಣಗೊಳಿಸಬೇಕು:

1) ವೈಯಕ್ತಿಕ ರೂಪಾಂತರ, ಅಂತರಂಗದ ಬೆಳವಣಿಗೆಯಿಂದ ದೈವೀ ಸನ್ನಿಧಾನದ ಜೊತೆ ಐಕ್ಯತೆ ಹೊಂದುವುದು.

2) ಸಾಮಾಜಿಕ ಪರಿವರ್ತನೆ, ವ್ಯಕ್ತಿಯ ಅರಳುವಿಕೆ ಮತ್ತು ಬೆಳವಣಿಗೆಗೆ ಒಂದು ಸೂಕ್ತವಾದ ವಾತಾವರಣವನ್ನು ಸೃಷ್ಠಿಸುವುದು.

ಪರಿಸರವು ವ್ಯಕ್ತಿಯ ಮೇಲೆ ಪ್ರತಿಕ್ರಿಯಿಸುತ್ತದೆ ಮತ್ತು ಮತ್ತೊಂದೆಡೆ, ಪರಿಸರದ ಮೌಲ್ಯವು ವ್ಯಕ್ತಿಯ ಮೌಲ್ಯವನ್ನು ಅವಲಂಬಿಸಿರುತ್ತದೆ, ಈ ಎರಡು ಕ್ರಿಯೆಗಳು ಒಂದರ ಜೊತೆಗೊಂದು ಮುಂದುವರೆಯಬೇಕು. ಆದರೆ ಇದನ್ನು ಕಾರ್ಮಿಕರ ವಿಭಜನೆಯ ಮೂಲಕ ಮಾತ್ರ ಮಾಡಬಹುದಾಗಿದೆ, ಅದು ಸಾಧ್ಯವಾದರೆ ಶ್ರೇಣೀಕೃತವಾದ ಗುಂಪಿನ ರಚನೆಯ ಅಗತ್ಯವಿರುತ್ತದೆ.

## ತ್ರಿವಳಿ ಕ್ರಿಯೆ

ಗುಂಪಿನ ಸದಸ್ಯರ ಕ್ರಿಯೆಯು ಈ ಮೂರು ರೀತಿಯಾಗಿರಬೇಕು:

1) ಸಾಧಿಸಬೇಕಾದ ಆದರ್ಶವನ್ನು ತನ್ನಲ್ಲಿಯೇ ಸಾಕ್ಷಾತ್ಕರಿಸಿಕೊಳ್ಳುವುದು; 'ವಿಚಾರತೀತ'ದ ಗುಣಲಕ್ಷಣಗಳು ಮತ್ತು ಗುಣಗಳಲ್ಲಿ ಪರಿಪೂರ್ಣ ಐಹಿಕ ಪ್ರತಿನಿಧಿಯಾಗುವುದು.

2) ಈ ಆದರ್ಶವನ್ನು ಶಬ್ದದ ಮೂಲಕ ಬೋಧಿಸುವುದು ಎಲ್ಲಕ್ಕಿಂತ ಮಿಗಿಲಾಗಿ ಉದಾಹರಣೆಯಿಂದ, ಏಕೆಂದರೆ, ಯಾರು ಸಾಕ್ಷತ್ಕಾರಕ್ಕಾಗಿ ಸಿದ್ದರಾಗಿದ್ದಾರೋ ಅಂತವರನ್ನು ಗುರುತಿಸಲು ಹಾಗೂ ನಾವು ಮುಕ್ತರಾಗಿದ್ದೇವೆ ಎಂದು ಘೋಷಿಸಿಲು ಸಾಧ್ಯವಾಗುತ್ತದೆ.

3) ಒಂದು ವಿಶಿಷ್ಟ ಸಮಾಜವನ್ನು ಸ್ಥಾಪಿಸುವುದು ಅಥವಾ ಈಗಾಗಲೇ ಅಸ್ತಿತ್ವದಲ್ಲಿದ್ದುದನ್ನು ಮರುಸಂಘಟಿಸುವುದು.

## ದ್ವಿಗುಣ ಶ್ರಮ

ಪ್ರತಿಯೊಬ್ಬರಿಗೂ ಸಹ ಎರಡು ಪಟ್ಟು ದುಡಿಮೆ ಇದೆ, ಏಕಕಾಲದಲ್ಲಿ, ಅದರ ಪ್ರತಿಯೊಂದು ಬದಿಯು ಇನ್ನೊಂದಕ್ಕೆ ಸಹಾಯ ಮಾಡುತ್ತದೆ ಮತ್ತು ಪೂರ್ಣಗೊಳಿಸುತ್ತದೆ:

1) ಆತಂರಿಕ ಬೆಳವಣಿಗೆ, ದೈವೀ ಬೆಳಕಿನೊಂದಿಗೆ ಪ್ರಗತಿಪರ ಐಕ್ಯತೆ, ಈ ಏಕೈಕ ಸ್ಥಿತಿಯಲ್ಲಿ ಮಾತ್ರ ಮಾನವನು ವಿಶ್ವಾತ್ಮಕ ಜೀವನದ ಉನ್ನತ ಹರಿವಿನೊಂದಿಗೆ ಸಾಮರಸ್ಯದಿಂದಿರಲು ಸಾಧ್ಯ.

2) ಪ್ರತಿಯೊಬ್ಬರು ತನ್ನ ಸಾಮರ್ಥ್ಯ ಮತ್ತು ವೈಯಕ್ತಿಕ ಆದ್ಯತೆಗಳ ಪ್ರಕಾರ ಬಹಿರಂಗದ ಕ್ರಿಯೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಅವನು ತನ್ನದೇ ಆದ ಸ್ಥಾನವನ್ನು ಕಂಡುಕೊಳ್ಳಬೇಕು. ಸಾಮಾನ್ಯ ಗೋಷ್ಠಿಯಲ್ಲಿ ಅವನಿಂದಲೇ ತುಂಬಲ್ಪಡಬೇಕಾದ ಸ್ಥಾನವಾಗಿರಬೇಕು ಮತ್ತು ಅವನು ಆ ಕಾರ್ಯಕ್ಕೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳಬೇಕು, ಈ ಭೌತಿಕ ಜಗತ್ತಿನ ಸಂಗೀತ ಕಛೇರಿಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವು ಸಂಪೂರ್ಣ ಸಾಮರಸ್ಯದ ಅವಿಭಾಜ್ಯ ಅಂಗವಾಗಿದೆ, ಅದರ ಮೌಲ್ಯವು ಅದರ ನ್ಯಾಯಪರತೆಯ ಮೇಲೆ ಅವಲಂಬಿದೆ ಎಂಬುದನ್ನು ಮರೆಯಬಾರದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/49–50 – ಶ್ರೀಮಾತೆ**

## ನಮ್ಮ ಅಂತರಂಗದ ಐಕ್ಯತೆ

### ನಮ್ಮ ಅಸ್ತಿತ್ವದೊಂದಿಗೆ ಐಕ್ಯತೆ ಮತ್ತು ಏಕರೂಪತೆಯನ್ನು ಸ್ಥಾಪಿಸುವ ಮಾರ್ಗ

ಸಂಕಲ್ಪವನ್ನು ದೃಢವಾಗಿಡಿ. ಅಸಹಕಾರದಿಂದ ಇರುವ ನಮ್ಮ ಭಾಗಗಳನ್ನು ಅವಿಧೇಯ ಮಕ್ಕಳಂತೆ ನೋಡಿಕೊಳ್ಳಿ, ಅವುಗಳ ಮೇಲೆ ನಿರಂತರವಾಗಿ ಮತ್ತು ತಾಳ್ಮೆಯಿಂದ ವರ್ತಿಸಿ, ಅವರ ದೋಷವನ್ನು ಅವರಿಗೆ ಮನವರಿಕೆ ಮಾಡಿ. ನಿಮ್ಮ ಪ್ರಜ್ಞೆಯ ಆಳದೊಳಗೆ ಚೈತನ್ಯ ಪುರುಷನಿದ್ದಾನೆ, ಅವನೇ ನಿಮ್ಮೊಳಗಿರುವ ದೈವತ್ವದ ದೇಗುಲ. ಎಲ್ಲಾ ವಿಭಿನ್ನ ಭಾಗಗಳು, ನಿಮ್ಮ ಅಸ್ತಿತ್ವದ ಎಲ್ಲಾ ವಿರೋಧಾತ್ಮಕ ಚಲನೆಗಳು ಈ ಕೇಂದ್ರದ ಸುತ್ತಲೂ ಐಕ್ಯತೆಯಾಗಬೇಕು. ಒಮ್ಮೆ ನೀವು ಈ ಚೈತ್ಯ ಪುರುಷನ ಪ್ರಜ್ಞೆಯನ್ನು ಪಡೆದರೆ ಮತ್ತು ಅದರ ಅಭೀಪ್ಸೆಯಿಂದ ಈ ಅನುಮಾನಗಳು ಮತ್ತು ತೊಂದರೆಗಳನ್ನು ನಾಶಪಡಿಸಬಹುದು. ಇದು ಹೆಚ್ಚು ಅಥವಾ ಕಡಿಮೆ ಸಮಯ ತೆಗೆದುಕೊಳ್ಳುತ್ತದೆ, ಆದರೆ ನೀವು ಖಂಡಿತವಾಗಿಯೂ ಕೊನೆಯಲ್ಲಿ ಯಶಸ್ವಿ ಹೊಂದುತ್ತೀರಿ. ಒಮ್ಮೆ ನೀವು ದೈವತ್ವದ ಕಡೆಗೆ ತಿರುಗಿ "ನಾನು ನಿಮ್ಮವನಾಗಲು ಬಯಸುತ್ತೇನೆ" ಎಂದು ಹೇಳಿ, ಮತ್ತು ದೈವತ್ವವು "ಹೌದು" ಎಂದು ಹೇಳಿದರೆ, ಇಡೀ ಜಗತ್ತು ನಿಮ್ಮನ್ನು ಅದರಿಂದ ದೂರವಿಡಲು ಸಾಧ್ಯವಿಲ್ಲ. ಯಾವಾಗ ಕೇಂದ್ರ ಅಸ್ತಿತ್ವವು ಸಮರ್ಪಣೆ ಮಾಡುತ್ತಿದೆಯೋ ಆಗ ಮುಖ್ಯವಾದ ತೊಂದರೆಯು ಮಾಯವಾಗುತ್ತದೆ. ಹೊರ ಅಸ್ತಿತ್ವವು ಗಡುಸಾಗಿರುತ್ತದೆ, ಸಾಮಾನ್ಯ ಜನರಲ್ಲಿ ಈ ಗಡಸುತನವು ಎಷ್ಟು ಗಟ್ಟಿಯಾಗಿರುತ್ತದೆ ಮತ್ತು ದಪ್ಪವಾಗಿರುತ್ತದೆ ಎಂದರೆ ಅವರು ತಮ್ಮೊಳಗಿನ ದೈವತ್ವದ ಬಗ್ಗೆ ಪ್ರಜ್ಞಾಯುತರಾಗಿರುವುದಿಲ್ಲ, ಒಮ್ಮೆಯಾದರೂ ಒಂದು ಕ್ಷಣ ಮಾತ್ರವಾದರೂ ಒಳಗಿನ ಅಸ್ತಿತ್ವವು, "ನಾನು ಇಲ್ಲಿದ್ದೇನೆ ಮತ್ತು ನಾನು ನಿಮ್ಮವನು" ಎಂದು ಹೇಳಿದರೆ, ಅದು ಸೇತುವೆಯನ್ನು ನಿರ್ಮಿಸಿದಂತೆ ಮತ್ತು ಎರಡು ಭಾಗಗಳು ಸಂಪೂರ್ಣ ಒಂದಾಗುವವರೆಗೆ ಸ್ವಲ್ಪಸ್ವಲ್ಪವಾಗಿ ಗಡಸುತನವು ತೆಳ್ಳಗಾಗುತ್ತದೆ ಮತ್ತು ಅಂತರಂಗ ಮತ್ತು ಬಹಿರಂಗ ಒಂದಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/6–7**

# ವಿಭಜನೆ ಹಾಗೂ ಅನಿಯಮಿತತನದ ಶಮನ

– ಅನುವಾದ: ಪ್ರೊ. ವೀರಭದ್ರಪ್ಪ ಕೆ.

## ನಿಜವಾದ ಸಾಮರಸ್ಯ ಒಂದೇ

ನಿಜ ಸಾಮರಸ್ಯ ಇರುವದು ಮತ್ತು ಅದು ಸುಪ್ರಮಾನದ – ಸತ್ಯದ ಆಳ್ವಿಕೆ, ದೈವೀ ವ್ಯವಸ್ಥೆಯ ಅಭಿವ್ಯಕ್ತತೆ ಸುಪ್ರಮಾನಸದಲ್ಲಿ, ಅವಕಾಶ ಅಥವಾ ಅದೃಷ್ಟಕ್ಕೆ ಜಾಗವಿಲ್ಲ, ಆದರೆ ನಿಮ್ನ ಪ್ರಕೃತಿಯಲ್ಲಿ ಪರಮ ಸತ್ಯವು ಅಸ್ಪಷ್ಟತೆಯಿಂದ ಕೂಡಿದೆ: ದೈವೀ ಏಕತೆಯ ಉದ್ದೇಶ ಮತ್ತು ಕ್ರೀಯೆ ಇಲ್ಲದ ಕಾರಣ ಅಚ್ಚುಕಟ್ಟುತನ ಇರುವುದಿಲ್ಲ, ಏಕತೆ ಇಲ್ಲದ ಕಾರಣ ಈ ನಿಮ್ನ ಪ್ರಕೃತಿಯ ಕ್ಷೇತ್ರವನ್ನು ಅದೃಷ್ಟ ಅಥವಾ ಅವಕಾಶ ಆಳುತ್ತದೆ. ಹೇಳಬೇಕೆಂದರೆ ಇಲ್ಲಿ ಎಲ್ಲ ತರಹದ ವೈರುದ್ಧ್ಯದ ಶಕ್ತಿಗಳು ಮಿಳಿತಗೊಂಡಿರುತ್ತವೆ ಮತ್ತು ಅವಕ್ಕೆ ಒಂದು ನಿರ್ದಿಷ್ಟವಾದ ಗುರಿ ಇರುವದಿಲ್ಲ ಅಂಥಹ ಗೊಂದಲ, ಅಸಂಗತತೆ ಮತ್ತು ಸುಳ್ಳುಗಳ ಪರಿಣಾಮ, ಶಕ್ತಿಗಳ ಕೂಡುವಿಕೆ – ಒಂದು ತರಹದ ಅದೃಷ್ಟದ ಉತ್ಪನ್ನ, ಕಾರ್ಯಗಳಲ್ಲಿ ನಮ್ಮ ಅಜ್ಞಾನವನ್ನು ಮುಚ್ಚಿಕೊಳ್ಳಲು ಇರುವ ಅದೃಷ್ಟ ಒಂದು ಕಲ್ಪನೆಯಲ್ಲಾ; ನಿಮ್ನ ಪ್ರಕೃತಿಯ ಅನಿಶ್ಚಿತತೆಯ ಗಲಿಬಿಲಿಯನ್ನು ಹೇಳುತ್ತದೆ ಏಕೆಂದರೆ ಶಾಂತವಾದ ಒಂದೇ ಗುರಿಯ ದೈವೀ ಸತ್ಯವನ್ನು ಹೊಂದಿರುವುದಿಲ್ಲ. ಜಗತ್ತು ಮೂಲಭೂತವಾಗಿ ದೈವೀ ಮೂಲ ಎಂಬುವದನ್ನು ಮರೆತುಬಿಟ್ಟಿದೆ ಮತ್ತು ಅಹಂಕಾರದ ಶಕ್ತಿಗಳ ತಾಣವಾಗಿದೆ; ಅದಕ್ಕೆ ಸತ್ಯಕ್ಕೆ ತೆರೆದುಕೊಳ್ಳುವ ಅವಕಾಶ ಇನ್ನೂ ಇದೆ, ತನ್ನ ಅಭಿಪ್ಸೆಯಿಂದ ಅದನ್ನು ಅವತರಿಸಿಕೊಳ್ಳಬೇಕಿದೆ ಮತ್ತು ಅದೃಷ್ಟ ಅಥವಾ ಅವಕಾಶವೆಂಬ ಸುಳಿಗಳನ್ನು ಬದಲಾಯಿಸಬೇಕಿದೆ. ಯಾಂತ್ರಿಕವಾಗಿ ಸರಪಳಿಯಂತೆ ಘಟಿಸುವ ಘಟನೆಗಳು ಎಂದು ಎಲ್ಲ ಮಾನವರು ಅಂದುಕೊಳ್ಳುತ್ತಾರೆ, ಏಕೆಂದರೆ ಇದೆಲ್ಲಾ ಅವರ ಮಾನಸಿಕ ಸ್ಥಿತಿ, ಅನುಭವಗಳ ಮತ್ತು ಸಾರ್ವತ್ರೀಕರಣ–ಗೊಳಿಸುವದು ಇವೆಲ್ಲಾ ಸೂಕ್ಷ್ಮ ಕೂಟಗಳು ತಮ್ಮದೇ ಆದ ಸಂಕಲ್ಪವನ್ನು ಸಲ್ಲುವಂತೆ ಮಾಡುತ್ತವೆ. ಈ ಜಗತ್ತು ರಾಕ್ಷಸ ಕೂಟಕ್ಕೆ ಎಷ್ಟು ಬದ್ಧವಾಗಿದೆ ಎಂದರೆ ಸತ್ಯಕ್ಕೆ ಹೊರಾಟ ಮಾಡದೆಯಿದೆ ಜಯ ಸಾದ್ಯವಿಲ್ಲ. ಸತ್ಯಕ್ಕೆ ಅವುಗಳ ಮೇಲೆ ಸ್ವಾಮ್ಯವಿಲ್ಲ: ಅದು ಸುಳ್ಳನ್ನು ಸ್ಥಾನ ಪಲ್ಲಟಿಸಿ, ವಿಕೃತಿಯನ್ನು ಸರಿಸಿ ತನ್ನ ಇರುವಿಕೆಯನ್ನು ದೃಢಪಡಿಸಬೇಕಾಗಿದೆ, ಇದನ್ನು ತುಂಬಾ ಸರಳವಾಗಿ ಮಾಡಬೇಕಾಗಿದೆ. ಏಕೆಂದರೆ ಎಲ್ಲಾ ವಸ್ತುಗಳು ದೈವದಿಂದ ಬಂದವುಗಳೇ ಆಗಿವೆ

ಎಲ್ಲಾ ಕಾರ್ಯಗಳ ಹಿಂದಿನ ಹಂತ ದೈವವೇ ಆಗಿದೆ, ಸತ್ಯ ಸಂಗತಿ ಏನೆಂದರೆ ಇಲ್ಲಿ ನಿಮ್ಮ ಪ್ರಕೃತಿಯಲ್ಲಿ ದೈವವು ವಿಶ್ವಾತ್ಮಕ ಅಜ್ಞಾನದ ಪರದೆಯಿಂದ ಮುಚ್ಚಿದೆ ಮತ್ತು ಏನು ಆಗುತ್ತಾ ಇದೆಯೂ ಅದು ದೈವೀ ಜ್ಞಾನದಿಂದ ನೇರವಾಗಿ ಪ್ರೇರಿತವಾಗಿಲ್ಲ ಎಲ್ಲವು ದೈವೀ ಸಂಕಲ್ಪ ಎಂದು ಪ್ರತಿಕೂಲ ಪ್ರಭಾವಗಳು ಮಂತ್ರದಂಡವನ್ನು ಹಿಡಿದುಕೊಡುವ ಸಲಹೆಗಳು ಕಾರಣ ಜಗತ್ತು ಅಸ್ತವ್ಯಸ್ತತೆ ಮತ್ತು ಕುರೂಪತನಕ್ಕೆ ಇಳಿಯಲ್ಪಟ್ಟಿದೆ ಕಾರಣ ಏನು ಮಾಡಬೇಕು ನೀ ಕೇಳಬಹುದು? ಸರಿ ಹಾಗಾದರೆ, ಮೇಲಿನ ಬೆಳಕನ್ನು ಕೆಳಗೆ ಕರೆಯಿರಿ, ನಿಮ್ಮನ್ನು ಪರಿವರ್ತಿಸುವ ಶಕ್ತಿಗೆ ತೆರೆಯಿರಿ.... ಹಳೆಯ ಮತ್ತು ಹೊಸದೇನು ಆಗಲಿದೆಯೋ ಅವೆರಡರ ತಾಕಾಲಾಟ ಅದುವೇ ಯೋಗ; ಆದರೆ ನೀವು ಪರಮ ಶಾಸನ ಮತ್ತು ವ್ಯವಸ್ಥೆ ನಿಮಗಾಗಲೆ ಗೊತ್ತಾಗಿದ್ದರೆ ನಿಮ್ಮ ಸತ್ಯೆಯ ಭಾಗಗಳು ಅದೃಷ್ಟ ಅಥವಾ ಅವಕಾಶ ಕ್ಷೇತ್ರಕ್ಕೆ ಬದ್ಧವಾದವು, ಎಷ್ಟು ನಿಧಾನವಾಗಿಯೇ ಆದರೂ, ಪರಿವರ್ತನೆಗೊಂಡು ದೈವಿಯಾಗುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/163–64**

**ಹಿಂದೆ ಸರಿದು ಆಲೋಚಿಸಿ ಮತ್ತು ಪ್ರತಿಕ್ರಿಯಿಸಿ**

ನೀವು ಯಾವಾಗಲಾದರೂ ಸ್ವಯಂಪ್ರೇರಿತರಾಗಿ – ಯಾವುದೆ ಪ್ರಯತ್ನವಿಲ್ಲದೇ ಸ್ವಯಂಪ್ರೇರಿತರಾಗಿ – ನೀವು ಯಾವುದೇ ತಪ್ಪುಗಳನ್ನು ಮಾಡಿದ್ದೇನೆಂದು ಅನಿಸಿದೆಯಾ? ನಾನು ಹೊರಗಿನ ಪ್ರತಿಕ್ರಿಯೆಯ ಬಗ್ಗೆ ಮಾತನಾಡುತ್ತಿಲ್ಲ, ಯಾವುದು ನಿಮ್ಮನ್ನು ತತ್‌ಕ್ಷಣ ಎಬ್ಬಿಸಿ, ಮತ್ತು ನೀವು ಆವಾಗ ಹೇಳುತ್ತೀರಿ "ಓ ದೇವರೆ, ನಾನು ಇದೇನು ಮಾಡಿದೆ?" ನಾನು ಇದನ್ನು ಮಾತನಾಡುತ್ತಿಲ್ಲ ಯಾವಾಗ ನೀವು ಯಾವುದನ್ನು ಮಾಡುತ್ತೀರಿ, ಯಾವುದನ್ನು ಸಂವೇದಿಸುತ್ತೀರಿ, ನೀವು ಯಾವುದನ್ನು ಹೇಳುತ್ತೀರಿ – ಬಹಳ ಕ್ಷುಲ್ಲಕ ಜಗಳಗಳು, ನಾನಂತಹವುಗಳನ್ನು ಸುಮಾರು ದಿನಕ್ಕೆ ಹತ್ತನ್ನೆರಡು ಕೇಳಿರುತ್ತೇನೆ (ಕಡಿಮೆಯೆಂದರೆ), ದಡ್ಡತನ (ನನಗೆ ಆಶ್ಚರ್ಯವಾಗುತ್ತದೆ ತಮ್ಮದೇ ಆದ ಕಾರಣಕ್ಕೆ ಜನಗಳು ಹೀಗೆಲ್ಲಾ ಜಗಳವಾಡುತ್ತಾರಲ್ಲಾ ಎಂದು) ಸರಿ, ಯಾವಾಗ ನೀನು ಕೆಲವೊಂದು ಶಬ್ದಗಳನ್ನು ಹೇಳಬಾರದಿತ್ತು ಆದರೆ ಹೇಳಿರುತ್ತೀರಿ ಅವು ಬಹಳ ಕ್ಷುಲ್ಲಕ, ನೀವು ನಿಜವಾಗಿ ದಡ್ಡರು – ಕೆಟ್ಟದಾಗಿ ಮಾತನಾಡಬಾರದು – ಸ್ವಯಂ ಪ್ರೇರಿತರಾಗಿ? ಇದಕ್ಕೆಲ್ಲಾ ನೀವು ಏನಾದರೂ ನೆಪ ಹೇಳುತ್ತೀರಿ, ನಿಮಗೆ

ಯಾವಾಗಲೂ ಎದುರಿನವರೇ ತಪ್ಪು ಮಾಡಿದ್ದಾರೆಂದು ಅನಿಸುತ್ತದೆ ಮತ್ತು ನೀವು ಸರಿಯಾಗಿದ್ದೀರಿ ಮತ್ತು ಅದನ್ನು ಎದುರಿನವರಿಗೆ ಹೇಳಲು ಬಯಸುತ್ತೀರಿ ಹೌದಲ್ಲವೇ ಇಲ್ಲಾದರೆ ಅವನಿಗೆ ಗೊತ್ತಾಗುವುದಿಲ್ಲಾ! ಸರಿಯಲ್ಲವೇ? ನಾನು ಸುಸ್ಪಷ್ಟವಾಗಿ ಇವನ್ನೆಲ್ಲಾ ಹೇಳಬಯಸುತ್ತೀನಿ ಹೇಗೆಂದರೆ ಸಣ್ಣ ವಿಷಯಗಳು ಸೂಕ್ಷ್ಮ ದರ್ಶಕದಲ್ಲಿ ದೊಡ್ಡದಾಗಿ ಕಾಣುವ ಹಾಗೆ ಅದು ಅದೇ ತರಹ. ಹಾಗೆ ಇರುವತನಕ ಸತ್ ಪ್ರಜ್ಞೆಯಿಂದ ನೀವು ಲಕ್ಷಾಂತರ ಮೈಲು ದೂರದಲ್ಲಿರುತ್ತೀರಿ, ಯಾವಾಗ ಇಂತಹವುಗಳಿಂದ ತಕ್ಷಣ ಹಿಂದೆ ಸರಿಯುವ ಕ್ಷಮತೆ ಇರುವುದಿಲ್ಲವೋ ಆಗ ನಿಮ್ಮನ್ನು ನೀವು ಎದುರಿನಲ್ಲಿರುವ ವ್ಯಕ್ತಿಯ ಜಾಗದಲ್ಲಿ ಊಹಿಸಿಕೊಂಡು ಆ ವ್ಯಕ್ತಿ ಯಾಕೆ ಆ ರೀತಿಯ ಸಂವೇದನೆ ಹೊಂದಿದ್ದಾನೆ, 'ನಿಮ್ಮ ದುರ್ಬಲತೆ ಬಗ್ಗೆ ಅಂದಾಜಿಸಿ' ನೋಡಿಕೊಳ್ಳಿ ಎರಡನ್ನು ತುಲನೆ ಮಾಡಿ ಒಂದು ನಿರ್ಧಾರಕ್ಕೆ ಬನ್ನಿರಿ "ಅದೇ ಸರಿಯಾದ ಸತ್ಯವಾದದ್ದು" ಅದರರ್ಥ ನೀವು ಈ ವಿಷಯದ್ದಲ್ಲಿ ಬಹಳ ಹಿಂದಿದ್ದೀರಿ ನೀವು ಸ್ವಯಂ ಪ್ರೇರಿತರಾಗಿ ಮಾಡಲು ಕ್ಷಮತೆ ಸಾಧಿಸಿದರೆ, ತತ್‌ಕ್ಷಣದಿಂದ, ಅದಕ್ಕೆ ಬಹಳ ಸಮಯ ಬೇಕಾಗುವುದಿಲ್ಲ, ಅದೊಂದು ಸ್ವಾಭಾವಿಕ ಕ್ರಿಯೆ, ಆಗ ನಿಮಗೆ ನಾನು ಸ್ವಲ್ಪ ಪ್ರಗತಿ ಸಾಧಿಸಿದೆನೆಂದು ಅನಿಸುತ್ತದೆ....

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/63–64**

**ವಾದಮಾಡುವುದರ ಬದಲಾಗಿ ತಿಳಿದುಕೊಳ್ಳಿ**

ನೀವು ವಾದಮಾಡುವದಕ್ಕೆ ಪ್ರಾರಂಭಿಸುತ್ತೀರಿ, ತಕ್ಷಣ ಶಾಂತವಾಗಿಬಿಡಿ ಕ್ಷಣಾರ್ಧದಲ್ಲಿ ನೀವು ನಿಶಬ್ದವಾಗಿರಿ ಏನು ಹೇಳಬೇಡಿ, ಮತ್ತು ಬೇರೆಯವರು ವಸ್ತುಸ್ಥಿತಿಯನ್ನು ನೋಡುವ ಹಾಗೆ ನೀವು ನೋಡಿ – ಅದು ನೀವು ನೊಡುವ ರೀತಿಯನ್ನು ಮರೆಸುವುದಿಲ್ಲ, ಇಲ್ಲವೇ ಇಲ್ಲ ಆದರೆ ಎರಡನ್ನು ಸೇರಿಸುವ ಕ್ಷಮತೆ ಪಡೆಯುವಿರಿ. ಮತ್ತು ನೀವು ನಿಜವಾದ ಪ್ರಗತಿಯನ್ನು ಸಾಧಿಸಿದ್ದೀರಿ ನಿಜವಾದ ಪ್ರಗತಿ. ಇದು ಎಲ್ಲದಕ್ಕೂ ಸಮನಾಗಿದೆ. ನೀವು ಎಲ್ಲರೊಟ್ಟಿಗೆ ಒಂದೇ ರೀತಿಯ ಸ್ಪಂದನೆಯಿದೆ, ನೀವು ಒಪ್ಪದಿದ್ದರೆ, ದೈವೀಕೃಪೆ ಎಂದುಕೊಳ್ಳಿ, ಒಂದು ಅದ್ಭುತವಾದ ಅವಕಾಶ ನಿಮ್ಮ ಪ್ರಗತಿಗಾಗಿ ಸಿಕ್ಕಿದೆಯೆಂದು, ಮತ್ತು ಅದು ಸರಳ: ನೀವು ಈ ಕಡೆಗೆ ಬದಲಾಗಿ ಆ ಕಡೆ ಇದ್ದೀರಿ, ನೀವು ನಿಮ್ಮನ್ನು ನೊಡುವ ಬದಲಾಗಿ, ನೀವು ಎದುರಿನ ಮನುಷ್ಯನಲ್ಲಿಳಿದು ನೋಡುತ್ತೀರಿ. ನೀವು

ಸ್ವಲ್ಪಮಟ್ಟಿನ ಕಲ್ಪನೆ ಮಾಡಬೇಕು. ನೀವು ಸ್ವಲ್ಪ ಹೆಚ್ಚಿನ ಮಟ್ಟಿನ ನಿಯಂತ್ರಣ ಆಲೋಚನೆ ಮತ್ತು ಕ್ರಿಯೆಯ ಮೇಲಿರಬೇಕು: ಆದರೆ ಅದು ಬಹಳ ಕಷ್ಟವಲ್ಲ ನೀವು ಸ್ವಲ್ಪ ಪ್ರಮಾಣದಲ್ಲಿ ಪ್ರಯತ್ನಪಟ್ಟರೆ, ಆ ಮೇಲೆ ನಿಮಗೆ ಬಹಳ ಸುಲಭವೆನಿಸುತ್ತದೆ. ನೀವು ಸುಮ್ಮನೆ ನೋಡುವುದು ಮತ್ತು ಮಾನಸಿಕ ಪ್ರಯತ್ನ ಪಟ್ಟರೆ ಸಾಲದು, ನಿಮ್ಮಷ್ಟಕ್ಕೆ ಹೇಳುವುದು “ಅದು ಹೀಗೆ ಏಕೆ ಮತ್ತು ಹಾಗೇಕೆ? ಅವನು ಅದನ್ನೇಕೆ ಮಾಡುತ್ತಾನೆ? ಅವನು ಹಾಗೇಕೆ ಹೇಳುತ್ತಾನೆ?” ನೀವು ಯಾವುದಕ್ಕೆ ಬಂದು ತಲುಪುವುದಿಲ್ಲ. ನಿಮಗೆ ತಿಳಿಯುವುದಿಲ್ಲ, ನೀವು ಎಲ್ಲಾ ರೀತಿಯ ಕಲ್ಪನೆಗಳನ್ನು ಮಾಡಿ ವಿವರಿಸುತ್ತೀರಿ ಮತ್ತು ಅವು ಅಷ್ಟೇನು ಒಳ್ಳೆಯವಲ್ಲ ಮತ್ತು ನಿಮಗೆ ಅವು ಏನನ್ನು ತಿಳಿಸಿಕೊಡುವುದಿಲ್ಲ ತಿಳಿಸುವುದಿಷ್ಟೇ “ಆ ವ್ಯಕ್ತಿ ಅವಿವೇಕಿ ಅಥವಾ ಕೆಟ್ಟವನು” – ಯಾವುದೇ ನಿರ್ಧಾರಕ್ಕೆ ಬರಲಾಗುವುದಿಲ್ಲ. ಇದರ ಬದಲಾಗಿ, ನೀವು ಸ್ವಲ್ಪ ಉಪಕ್ರಮಿಸಿದರೆ, ಮತ್ತು ಅವನನ್ನು ಯಾವುದೋ ಅನ್ಯಜೀವಿ ನನಗೆ ಸಂಭಂದಪಟ್ಟಿಲ್ಲ ಅಂದುಕೊಳ್ಳದೆ ನೀವು ಒಳಗಿಳಿಯಲು ಪ್ರಯತ್ನಿಸಿ ನಿಮ್ಮ ಎದುರಿಗಿರುವ ಸಣ್ಣ ತಲೆಯಲ್ಲಿ ಇಳಿಯಲು ಪ್ರಯತ್ನಿಸಿ ಮತ್ತು ತಕ್ಷಣ ನೀವು ಇನ್ನೊಂದು ಕಡೆಗಿರುತ್ತೀರಿ, ನೀವು ನಿಮ್ಮನ್ನು ನೋಡಿಕೊಳ್ಳಿ ಮತ್ತು ಚೆನ್ನಾಗಿ ತಿಳಿದುಕೊಳ್ಳಿ ಅವನು ಏನು ಹೇಳುತ್ತಿದ್ದಾನೆ – ಎಲ್ಲದರಿಂದ, ಏಕೆ, ಹೇಗೆ, ಕಾರಣ, ಸಂವೇದನೆ ಎಲ್ಲವು ಸ್ಪಷ್ಟವಾಗುತ್ತದೆ....

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/219–220**

**ಸಹಿಷ್ಣುತೆ ಬೆಳೆಸಿಕೊಳ್ಳಿ**

ಜನರು ಜ್ಞಾನದ ಸಾಪೇಕ್ಷತೆ, ನಂಬಿಕೆಯ ಸಾಪೇಕ್ಷತೆ, ಭೋದನೆಗಳ ಸಾಪೇಕ್ಷತೆ ಮತ್ತು ಸಂದರ್ಭಗಳ ಸಾಪೇಕ್ಷತೆ ತಿಳಿದುಕೊಂಡರೆ ಜಗದಲ್ಲಿನ ಬಹಳಷ್ಟು ದುಃಖ ಮತ್ತು ದುರದೃಷ್ಟಗಳು ಕಾಣೆಯಾಗುತ್ತವೆ.... ಎಷ್ಟರಮಟ್ಟಿಗೆ ಯಾವ ವಿಷಯ ಪ್ರಮುಖ! ಈ ಕ್ಷಣ ಅದೇ ಮೂಲ, ಅದು ನಿಮ್ಮನ್ನು ಬದುಕಿಗೆ ಅಥವಾ ಸಾವಿನೆಡೆಗೆ ಕರೆದೊಯ್ಯಬಹುದು – ನಾನು ಭೌತಿಕ ಬದುಕು ಮತ್ತು ಸಾವಿನ ಬಗ್ಗೆ ಮಾತನಾಡುತ್ತಿಲ್ಲ. ಆದರೆ ಚೈತನ್ಯದ ಸಾವಿನ ಬಗ್ಗೆ – ಆದರೆ ಇದು ಕ್ಷಣಕ್ಕೆ ಮಾತ್ರ; ನೀವು ಸ್ವಲ್ಪ ಪ್ರಗತಿ ಸಾಧಿಸಿದಾಗ ನೀವು ಆಧ್ಯಾತ್ಮಿಕ ದೃಷ್ಟಿಯಿಂದ

ಸ್ವಲ್ಪ ಬೆಳೆದಾಗ, ಮತ್ತು ಈ ವಿಷಯದ ಬಗ್ಗೆ ತಿರುಗಿನೊಡಿದಾಗ, ಈ ಸಂದರ್ಭ ಮತ್ತು ಕಲ್ಪನೆ ನಿಮ್ಮ ಜೀವನವನ್ನು ನಿರ್ಧರಿಸಿದ್ದರೆ, ಅದು ಬಹಳ ಸಾಪೇಕ್ಷ ಪ್ರಮುಖವಾದದ್ದು ಅಲ್ಲ ನಿಮಗೆ ಮತ್ತು ನಿಮಗೆ ಇನ್ನು ಬೆಳೆಯಲು, ಸ್ವಲ್ಪ ಉನ್ನತವಾದದ್ದು ಬೇಕು. ಯಾರು ಇದನ್ನು ಯಾವಾಗಲೂ ನೆನಪಿಟ್ಟಿರುತ್ತಾರೊ ಅಂತಹವರು ಯಾವುದೇ ಪಂಥ, ಯಾವುದೇ ಅಸಹಿಷ್ಣುತೆ, ಮತ್ತು ಎಲ್ಲ ಜಗಳಗಳನ್ನು ದೂರ ಮಾಡುತ್ತಾರೆ, ಏಕೆಂದರೆ ಜಗಳವೆಂದರೆ ಇಷ್ಟೆ, ಒಬ್ಬರು ಒಂದು ರೀತಿ ಆಲೋಚಿಸಿದರೆ ಮತ್ತೊಬ್ಬರು ಮತ್ತೊಂದು ತರಹ, ಒಬ್ಬರು ಒಂದು ನಿಲುವು ತಾಳಿದರೆ ಮತ್ತೊಬ್ಬರು ಮತ್ತೊಂದು, ಒಬ್ಬರನ್ನೊಬ್ಬರು ಸಮೀಪ ತರುವದರ ಬದಲಾಗಿ ಮತ್ತು ಅವರಲ್ಲಿ ಯಾವ ರೀತಿಯ ಸಾಮರಸ್ಯ ತರುವದರ ಬದಲಾಗಿ ಒಬ್ಬರಿಗೊಬ್ಬರು ಮುಷ್ಟಿ ಹಿಡಿಯುವುದು. ಇದು ಬಿಟ್ಟರೆ ಬೇರೆನಲ್ಲಾ. ಸಂಪೂರ್ಣ ಸಾಪೇಕ್ಷೆಯುತವಾದ ನಿಮ್ಮ ದೃಷ್ಟಿಕೋನ, ನಿಮ್ಮ ಆಲೋಚನೆ, ನಿಮ್ಮ ಪ್ರಕಾರ ಯಾವುದು ಸರಿ, ಯಾವುದು ವಿಶ್ವದ ಚಲನೆಯಲ್ಲಿ ಸಾಪೇಕ್ಷವಾದುದು ಎಂಬುದು ನಿಮಗೆ ಅರಿವಾದೊಡನೆ, ನಿಮ್ಮ ಪ್ರತಿಕ್ರಿಯೆಯಲ್ಲಿ ಉಗ್ರತನ ಕಡಿಮೆಯಾಗುತ್ತದೆ ಮತ್ತು ಹೆಚ್ಚಿನ ಸಹಿಷ್ಣುತೆ ಬರುತ್ತದೆ. ಇಲ್ಲಿ ನಾವಿರಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/358–359**

## ಬೇರೆಯವರನ್ನು ತಿಳಿದುಕೊಳ್ಳಲು ಪ್ರಯತ್ನಿಸಿ

ನೀವು ಬೇರೆಯವರ ಪ್ರಜ್ಞೆಯೊಳಕ್ಕಿಳಿದು ಅಲ್ಲಿ ಸರಿಯಾಗಿ ಏನು ನಡೆಯುತ್ತಿದೆ ಎಂದು ತಿಳಿದುಕೊಳ್ಳಲು ಪ್ರಯತ್ನವನ್ನೆ ಪಟ್ಟಿಲ್ಲ ಅಲ್ವಾ? ನಿಮ್ಮ ಪ್ರಜ್ಞೆಯನ್ನು ಬೇರೆಯವರಲ್ಲಿ ಪ್ರಕ್ಷೇಪಿಸಲು ಪಟ್ಟರೆ ಆಗ ನಿಮ್ಮನ್ನಲ್ಲಿ ಕಂಡುಕೊಳ್ಳುತ್ತೀರಿ ಅದೇನು ಅಷ್ಟನ್ನು ಅಪೇಕ್ಷಣಿಯಾದುದೇನಲ್ಲಾ – ಆದರೆ ಅವನೊಳಗಿರುವ ಪ್ರಜ್ಞೆಯೊಂದಿಗೆ ಸಂಬಂಧವನ್ನು ಬೆಳೆಸುತ್ತೀರಿ. ಉದಾಹರಣೆಗಾಗಿ ಒಂದಲ್ಲ ಒಂದು ಕಾರಣದಿಂದ ನೀವು ಕಣ್ಣಲ್ಲಿ ಕಣ್ಣಿಟ್ಟು ನೋಡಲಾರಿರಿ. ಏಕೆಂದರೆ ಒಬ್ಬಬ್ಬರ ದೃಷ್ಟಿ ಒಂದೊಂದು ತರಹ. ಜನರು ತಾರ್ಕಿಕರಾಗಿದ್ದರೆ ಜಗಳವಾಡುವುದಿಲ್ಲ ಆದರೆ ಅತಾರ್ಕಿಕರಾಗಿದ್ದರೆ ಜಗಳವಾಡುತ್ತಾರೆ. ಜಗಳವಾಡುವದರ ಬದಲಾಗಿ ಅವನ ಪ್ರಜ್ಞೆಯೊಳಗೆ ಇಳಿದು, ಅವನೇಕೆ ಹಾಗೇ ಹೇಳುತ್ತಿದ್ದಾನೆ, ಅವನನ್ನು ಹಾಗೆ ಹೇಳಲು ಅಥವಾ ಮಾಡಲು ಯಾವುದು ಒತ್ತಾಸೆಯಾಗಿದೆ? ಒಳ ಕಾರಣವೇನು, ಎಂತಹ ವಿಷಯಗಳು ಅವನನ್ನು ಆ ನಿಲುವು ತಾಳಲು ಪ್ರೇರೇಪಿಸುತ್ತಿವೆ? ಇದು

ಅತ್ಯಂತ ಕುತೂಹಲಕಾರಿ. ನೀವು ಇದನ್ನು ಪಾಲಿಸಿದ್ದೇ ಆದರೆ, ತಕ್ಷಣ ಸಿಟ್ಟು ಬರುವುದು ನಿಲ್ಲುತ್ತದೆ. ಮೊದಲನೆಯದಾಗಿ: ಮುಂದೆ ಸಿಟ್ಟಿಗೇರುವುದಿಲ್ಲ. ಇದು ಈಗಾಗಲೇ ತುಂಬ ಲಾಭದಾಯಕ. ಮತ್ತೊಂದು: ಎದುರಿನವರು ಸಿಟ್ಟಿಗೇರುವುದನ್ನು ಮುಂದುವರಿಸಿದರೂ ಕೂಡಾ, ನಿಮ್ಮ ಮೇಲೆ ಏನು ಪರಿಣಾಮ ಬೀರುವುದಿಲ್ಲ. ಮತ್ತು ನಂತರ ನಿಮ್ಮನ್ನು ನೀವು ಪರಿಪೂರ್ಣದೊಂದಿಗೆ ಹೆಚ್ಚಾಗಿ ಗುರುತಿಸಿಕೊಂಡು ಭಿನ್ನತೆ ಮತ್ತು ವಿಕಾರತೆಯನ್ನು ತಡೆಯಬಹುದು ಮತ್ತು ಜಗಳಗಳನ್ನು ತಡೆಯಬಹುದು. ಇದು ಬಹಳ ಉಪಯೋಗಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/424–25**

## ಪ್ರಚಾರಕ ಆತ್ಮ (ಚೇತನ)

ಭೂಮಿ ಇರುವುದು ದೈವದ, ತನ್ನ ಎಲ್ಲಾ ಸಂಕೀರ್ಣತೆಯನ್ನು ಅಭಿವ್ಯಕ್ತಗೊಳಿಸಲು ಇರುವುದೆಂಬ ನಿರ್ಧಾರಕ್ಕೆ ನೀವು ಬಂದರೆ ಸಂಕೀರ್ಣತೆ ಮತ್ತು ವೈವಿಧ್ಯತೆಗಳ ಅವಶ್ಯಕತೆಯನ್ನು ಗುರುತಿಸಬೇಕು ಮತ್ತು ಇದರಿಂದ ನೀವು ಎಲ್ಲರನ್ನು ನಿಮ್ಮ ಹಾಗೆ ಆಲೋಚಿಸಬೇಕು ಮತ್ತು ಸಂವೇದಿಸಬೇಕು ಎಂಬುದು ಅಸಾಧ್ಯದ ಮಾತು. ಪ್ರತಿಯೊಬ್ಬರು ತಮ್ಮದೆ ಆದ ರೀತಿಯಲ್ಲಿ ಆಲೋಚಿಸಬೇಕು, ಸಂವೇದಿಸುವುದು ಮತ್ತು ಪ್ರತಿಕ್ರಿಯಿಸುವುದು: ಎಲ್ಲರು ನಿಮ್ಮ ಹಾಗೆ ಇರಬೇಕು ಮತ್ತು ನಿಮ್ಮಂತೆ ಕಾರ್ಯಮಾಡಬೇಕಾ? ನಿಮ್ಮ ಸತ್ಯ ಇತರರಿಗಿಂತ ದೊಡ್ಡದು ಎನ್ನುವುದು – ಅವರ ಮಾತು ಅಂದರೆ ಏನು ಅಲ್ಲಾ ಅನ್ನುವುದು, ಅವರಿಗೆ, ತಮ್ಮ ರೀತಿಯಲ್ಲಿ ಎಲ್ಲ ಸತ್ಯವೂ ಸತ್ಯನೆ, ಅವರೆಲ್ಲಾ ಭಾಗಶಃ, ನೀವು ನಿಜವಾಗಲು ಸತ್ಯ ಏಕೆಂದರೆ ಯಾವಾಗ ನಿಮ್ಮ ಸತ್ಯವು ಹೆಚ್ಚೆಂದ ತಕ್ಷಣದಿಂದ ನೀವು ಸತ್ಯದಿಂದ ದೂರಾಗಿ ಬಿಡುವಿರಿ. ಈ ರೀತಿಯಾಗಿ ಬೇರೆಯವರು ನಿಮ್ಮ ಹಾಗೆ ಆಲೋಚಿಸಲಿ ಎಂಬ ಒತ್ತಾಯಿಸುವ ಹವ್ಯಾಸವು, ನನಗೆ ಬಹಳ ವಿಚಿತ್ರವೆನಿಸುತ್ತದೆ; ಇದನ್ನು ನಾನು ಕರೆಯುವುದು "ಪ್ರಚಾರ ಪ್ರಿಯ ಆತ್ಮ" ಮತ್ತು ನಮ್ಮನ್ನು ದೂರ ಕರೆದೊಯುತ್ತದೆ ನೀವು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಎಲ್ಲರು ನಿಮ್ಮಂತೆ ಆಲೋಚಿಸಲಿ ನಿಮ್ಮಂತೆ ಸಂವೇದಿಸಲಿ, ಇದು ಏನಾಗುತ್ತದೆಯೆಂದರೆ ಹೆದರಿಕೊಳ್ಳುವಂತಹ ಸಮತ್ವತೆ ಎನಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/105**

## ನಿನ್ನ ಕೆಲಸವನ್ನು ನೀನು ನೋಡಿಕೋ

ಒಂದು ಸಮಯ ಬರುತ್ತೆ ನಾವು ಆಲೋಚಿಸಿದ ಸತ್ಯವನ್ನು ಇನ್ನೊಬ್ಬರಿಗೆ ಮನವರಿಕೆ ಮಾಡಿಕೊಡಬೇಕಾಗಿಲ್ಲ ಇಷ್ಟು ನಿಮಗೆ ಭರವಸೆ ಕೊಡಬಲ್ಲೆ. ನಾನು ಹೇಗಿದ್ದೇನೆ ಎಂದು ನನ್ನನ್ನು ಯಾರಾದರು ಟೀಕಿಸಿದರೆ, ಯಾವ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಿದ್ದೇನೆ, ಬೇರೊಬ್ಬರು ಟೀಕಿಸಿದರೆ, ನೀವು ಆಗ ನಯವಾಗಿ ಅವರಿಗೆ ಹೇಳಿ ನಿನ್ನ ಕೆಲಸವನ್ನು ನೀನು ನೋಡಿಕೋ ಅಲ್ಲಿಗೆ ಅದನ್ನು ಬಿಡಬೇಕು. ನೀವು ಅವನಿಗೆ ಟೀಕಿಸುವುದು ತಪ್ಪು ಎಂದು ಮನವರಿಕೆ ಮಾಡಿಕೊಡಲು ಹೋಗುತ್ತಿರಾ? ನೀವು ಹೆಚ್ಚಾಗಿ ಇದನ್ನು ಹೇಳಿದರೆ ಅವನು ಹೆಚ್ಚಾಗಿ ತಾನು ಸರಿಯಾಗಿ ಇದ್ದೇನೆಂದು ಮನವರಿಕೆ ಮಾಡಿಕೊಳ್ಳುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/106**

## ಈ ಜಗತ್ತು ಒಂದು ಕನ್ನಡಿ

ನಮಗೆ ಯಾವಾಗ ಯಾವುದೇ ವ್ಯಕ್ತಿಯಲ್ಲಿರುವ ಕೆಲ ವಿಷಯಗಳು ಸ್ವೀಕಾರಾರ್ಹವಲ್ಲ ಅಥವಾ ಹಾಸ್ಯಾಸ್ಪದ ಎಂದು ಅನಿಸುವದು – "ಏನು! ಅವನು ಆ ರೀತಿ ಇದ್ದಾನೆ ಅವನು ಆ ರೀತಿ ವರ್ತಿಸುತ್ತಾನೆ, ಆ ವಿಷಯಗಳನ್ನು ಅವನು ಹಾಗೆ ಹೇಳುತ್ತಾನೆ ಅವನು ಅವನ್ನು ಹಾಗೆ ಮಾಡುತ್ತಾನೆ" ನೀವು ನಿಮಗೆ ಹೇಳಿಕೊಳ್ಳಬೇಕು "ಸರಿ, ಸರಿ ನಾನು ನನಗೆ ಗೊತ್ತಿರದೇ ಹಾಗೆ ಮಾಡುತ್ತೇನೆ. ಅವನನ್ನು ಟೀಕಿಸುವದಕ್ಕಿಂತ ಮುಂಚೆ ನನ್ನನ್ನು ನಾನೇ ನೋಡಿಕೊಳ್ಳಬೇಕು ನಾನು ಅದೇ ರೀತಿ ಕೊಂಚ ಬೇರೆಯಾಗಿ ಮಾಡುತ್ತಿದ್ದೇನೆ". ನಿಮಗೆ ಒಳ್ಳೆ ಸಂವೇದನೆ ಮತ್ತು ಬುದ್ದಿವಂತಿಕೆ ಇದ್ದು ಈ ರೀತಿ ಪ್ರತಿ ಸಲ ಮಾಡಿದಾಗ ಬೇರೆಯವರ ಪ್ರತಿಕ್ರಿಯೆಯನ್ನು ನೋಡಿದಂಗಾಗುವಿರಿ, ನಿಮಗೆ ಅನಿಸುತ್ತದೆ ಜೀವನದಲ್ಲಿ ನಿಮ್ಮ ಸಂಬಂಧಗಳು ಬೇರೆಯವರೊಂದಿಗೆ ಕನ್ನಡಿತರಹ ನಿಮಗೆ ಪ್ರಸ್ತುತ ಪಡಿಸುತ್ತವೆ, ಆದ ಕಾರಣ ನಿಮ್ಮ ದೌರ್ಬಲ್ಯವನ್ನು ತುಂಬಾ ಸರಳವಾಗಿ ಸ್ಪಷ್ಟವಾಗಿ ನಿಮ್ಮಲ್ಲಿರುವದನ್ನು ನೀವು ಕಾಣಬಹುದು. ಸಾಮಾನ್ಯವಾಗಿ ಬೇರೆಯವರಲ್ಲಿನ ಯಾವುದು ನಿಮ್ಮನ್ನು ದಂಗಾಗಿಸುತ್ತದೆಯೋ ಅದೇ ನಿಮ್ಮಲ್ಲಿಯೂ ಇರುವುದು, ಆದರೆ ಗುಪ್ತವಾಗಿ ಪರದೆಯ ಹಿಂದೆ, ಸ್ವಲ್ಪ ಬೇರೆ ವೇಷ ಹಾಕಿಕೊಂಡು ಅದು ನಿಮ್ಮನ್ನು ಮೋಸಗೊಳಿಸುತ್ತದೆ. ಯಾವುದು ನಿಮ್ಮಲ್ಲಿ

ಇದೆ ಅದು ನಿರುಪಯಕಾರಿ ಬೇರೆಯವರಲ್ಲಿರುವುದು ರಾಕ್ಷಸದ ತರಹ ಯಾವಾಗ ಅದನ್ನು ಬೇರೆಯವರಲ್ಲಿ ಕಂಡಾಗ ಅನಿಸುತ್ತದೆ. ಇದನ್ನು ಅನುಭವಿಸಲು ಪ್ರಯತ್ನಪಡಿ, ಇದು ನಿಮ್ಮಲ್ಲಿ ಬಹಳ ಸುಧಾರಣೆಯನ್ನು ತರುತ್ತದೆ. ಮತ್ತು ನಿಮ್ಮಲ್ಲಿ ಪ್ರಕಾಶಮಾನವಾದ ಸಹಿಷ್ಟತೆಯನ್ನು ಬೇರೆಯವರ ಸಂಬಂಧಗಳ ಬಗ್ಗೆ ತರುತ್ತದೆ, ತಿಳಿದುಕೊಳ್ಳುವುದರಿಂದ ಸದ್ಭಾವನೆಯು ಬರುತ್ತದೆ, ಮತ್ತು ಇದು ಸಂಪೂರ್ಣವಾಗಿ ಉಪಯೋಗವಿಲ್ಲದ ಜಗಳಗಳು ಬಹಳಷ್ಟು ಸಲ ಕೊನೆಗೊಳ್ಳುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/21–22**

**ಜಗಳವಾಡದೆ ನಾವು ಜೀವಿಸಬಹುದು**

ನಾವು ಜಗಳವಾಡದೆ ಇರಬಹುದು ನಾನು ಹೀಗೆ ಹೇಳಿದರೆ ಒಂದು ತರಹ ವಿಚಿತ್ರ ಅನಿಸುತ್ತದೆ. ಆದರೆ ವೈವಿದ್ಯವಾಗಿ ಕಾಣುವುದೆಂದರೆ, ಜೀವನ ಇರುವುದೇ ಜಗಳವಾಡುವುದಕ್ಕೆ ಕೆಲವೊಬ್ಬರ ವೃತ್ತಿಯೇ ಒಂದಾಗಿರುವುದೇ ಜಗಳವಾಡುವುದಕ್ಕೆ ಎಂದು, ಬಹಿರಂಗವಾಗಿ ಅಥವಾ ರಹಸ್ಯವಾಗಿ ಅಂದುಕೊಂಡಿರುತ್ತಾರೆ. ನೀವು ನಿಮ್ಮ ಮಾತಿಗೆ ಬದ್ದರಾಗಿರುವುದಿಲ್ಲ, ನೀವು ಯಾವಾಗಲೂ ಹೊಡೆತಕ್ಕೆ ಅದೃಷ್ಠವಶಾತ್ ಸಿಕ್ಕುವುದಿಲ್ಲಾ – ನೀವು ಒಂದು ತರಹದ ಕಿರಿಕಿರಿಗೆ ಒಳಗಾಗುತ್ತೀರಿ. ಏಕೆಂದರೆ ಬೇರೆಯವರ ವರ್ತನೆ ಪರಿಪೂರ್ಣವಾಗಿಲ್ಲ ಎಂದು ನೀವು ಆಶಿಸುವದಕ್ಕಾಗಿ ನಿಮಗನಿಸುತ್ತದೆ. ನಿಮಗೆ ನೀವು ಆ ರೀತಿ ಸಾಕ್ಷಾತ್ಕರಿಸುವದಕ್ಕೆ ಬಹಳ ಕಷ್ಟವಾಗುತ್ತದೆ. ಆದರೆ ಬೇರೆಯವರಲ್ಲಿ ಅದು ಪೂರ್ಣ ಸ್ವಾಭಾವಿಕವಾಗಿ ಸಾಕ್ಷಾತ್ಕಾರವಾಗಲಿ ಎಂದು ನೀವೆನಿಸುತ್ತೀರಿ. “ಅವರು ಹಾಗ್ಯಾಕೆ ಇದ್ದಾರೆ” ನೀವು ಹಾಗ್ಯಾಕೆ ಇರಲಾಗುವದಕ್ಕೆ ಎಷ್ಟು ಕಷ್ಟ ಎಂದು ನೀವು ಮರೆತುಬಿಡುತ್ತೀರಿ! ಪ್ರಯತ್ನಪಡಿ ನಿಮಗರಿವಾಗುತ್ತದೆ. ಎಲ್ಲವನ್ನು ದಯಾಳುಭರಿತ ನಗುವಿನಿಂದ ನೋಡಿರಿ. ಯಾವುದು ನಿಮಗೆ ಕಿರಿಕಿರಿ ಎನಿಸುತ್ತದೆಯೊ ಅದನ್ನು ಒಂದು ಪಾಠವಾಗಿ ತೆಗೆದುಕೊಳ್ಳಿ ಮತ್ತು ನಿಮ್ಮ ಜೀವನ ಬಹಳ ಶಾಂತಿಯುತ ಮತ್ತು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಬಹಳಷ್ಟು ನಿಮ್ಮ ಶಕ್ತಿಯು ಜನರಲ್ಲಿ ಪರಿಪೂರ್ಣತೆ ಇಲ್ಲದ ಕಾರಣದಿಂದ ಆಗುವ ಕಿರಿಕಿರಿಯಿಂದ ನಷ್ಟವಾಗುತ್ತದೆ. ಏಕೆಂದರೆ ಆ ಪರಿಪೂರ್ಣತೆಯನ್ನು ನಿಮ್ಮಲ್ಲಿ ಇನ್ನು ಕಂಡುಕೊಂಡಿಲ್ಲ. ನೀವು ಬೇರೆಯವರ ಪರಿಪೂರ್ಣತೆಯನ್ನು ಪಡೆಯದೆ ಇರುವದನ್ನು ಲಘುವಾಗಿ ಪರಿಗಣಿಸುತ್ತೀರಿ, ಆದರೆ ಅದೇ ನಿಮ್ಮ ಪ್ರಜ್ಞಾಪೂರ್ವಕ ಗುರಿಯು ಆಗಿದೆ. ನಿಮಗೆ

ಅದರ ಪ್ರಜ್ಞೆ ಇದ್ದರೆ ನಿಮಗೆ ಏನು ಕೆಲಸ ಕೊಟ್ಟಿದೆ ಅದನ್ನು ಗಮನಹರಿಸಿ, ಹೇಳಬೇಕೆಂದರೆ, ನೀವೇನು ಸಾಧನೆ ಮಾಡಬೇಕೋ ಅದಕ್ಕೆ ಗಮನಹರಿಸಿ, ಬೇರೆಯವರು ಏನು ಮಾಡುತ್ತಿದ್ದಾರೆ ಎಂದು ಗಮನಿಸಬೇಡಿ ಏಕೆಂದರೆ ಅದು ನಿಮಗೆ ಸಂಬಂಧ ಪಟ್ಟಿದ್ದಲ್ಲ. ಮತ್ತು ನಿಜವಾಗಿ ನಿಮ್ಮ ಉತ್ತಮ ನಿಲುವಿರಬೇಕೆಂದರೆ, ಸರಳವಾಗಿ ಹೇಳಿ "ನನ್ನ ಸುತ್ತಲಿರುವವರೆಲ್ಲಾ, ನನ್ನ ಜೀವನದ ಎಲ್ಲಾ ಸಂದರ್ಭಗಳು, ನನ್ನ ಸಮೀಪವಿರುವ ಜನರೆಲ್ಲಾ, ದೈವೀ ಪ್ರಜ್ಞೆ ನನಗೆ ತೋರಿಸಲಿರುವ ಕನ್ನಡಿಗಳು ನಾನು ಇನ್ನೂ ಎಷ್ಟು ಪ್ರಗತಿ ಸಾಧಿಸಬೇಕೆಂದು ತೋರಿಸುವುದಕ್ಕಾಗಿ. ಏನೆಲ್ಲಾ ನನಗೆ ಬೇರೆಯವರಿಂದ ತಲ್ಲಣಗೊಳಗಾಗುತ್ತೇನೆ, ಅದರರ್ಥ ಅಷ್ಟು ಪ್ರಗತಿ ನನ್ನಲ್ಲೆ ಸಾಧಿಸಬೇಕಿರುತ್ತದೆ". ಯಾರು ತಮ್ಮಲ್ಲಿ ಹೆಚ್ಚಿನ ಪರಿಪೂರ್ಣತೆಯನ್ನು ಸಾಧಿಸುತ್ತಾರೆ, ಅವರು ಬೇರೆಯವರಲ್ಲಿ ಅದನ್ನು ಕಂಡುಕೊಳ್ಳುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/22–23**

## ನಿಮ್ಮ ಪ್ರಜ್ಞೆಯನ್ನು ವಿಶ್ವಾತ್ಮಕಗೊಳಿಸಿ

ನೀವು ನಾನು ಈಗಷ್ಟೇ ಏನು ಹೇಳಿದೆ ಅದನ್ನು ತಿಳಿದುಕೊಳ್ಳಿ, ನೀವು ಪೂರ್ಣದ ಒಂದು ಭಾಗ, ಈ ಪೂರ್ಣವು ಇನ್ನೊಂದು ಹೆಚ್ಚಿನ ಪೂರ್ಣದ ಭಾಗ, ಈ ಹೆಚ್ಚಿನ ಪೂರ್ಣ ಮತ್ತೊಂದು ಅದಕ್ಕಿಂತ ಹೆಚ್ಚಿನ ಪೂರ್ಣದ ಭಾಗ, ಹೀಗೆ ಒಂದು ಏಕಮೇವಪೂರ್ಣ ಆಗುವವರೆಗೆ. ಒಂದು ಸಲ ಇದನ್ನು ತಿಳಿದ ಮೇಲೆ, ನಿಮಗೆ ಅರಿವಾಗುತ್ತಾ ಹೋಗುತ್ತದೆ. ಏನೆಂದರೆ ನಿಜವಾಗಿ ನೀವು ಮತ್ತು ನಿಮಗಿಂತ ಹಚ್ಚಿನ ಪೂರ್ಣತೆಗಿಂತ ಭಿನ್ನರೇನು ಅಲ್ಲ ಎಂದು, ಆದರೆ ನೀವದರ ಭಾಗ ಎಂದು. ಇದು ಪ್ರಾರಂಭ ಈಗ ನೀವದನ್ನು ಬರೀ ಆಲೊಚಿಸುವುದಷ್ಟೇ ಅಲ್ಲ ಅದನ್ನು ಸಂವೇದಿಸಬೇಕು ಮತ್ತು ಅದನ್ನು ಜೀವಿಸಬೇಕು ಕೂಡಾ ಆಗ ಅಜ್ಞಾನದ ಗೋಡೆ ಬೀಳುತ್ತದೆ: ಈ ಏಕತೆಯನ್ನು ಎಲ್ಲ ಕಡೆ ಸಂವೇದಿಸುತ್ತಾನೆ ಮತ್ತು ತನಗಿಂತ ಪೂರ್ಣವಾದ ತನಗಿಂತ ಹಿರಿದಾದದ್ದರ ಭಾಗ ಮಾತ್ರ ಎಂದು ಅರಿವಾಗುತ್ತದೆ, ಅದುವೆ ವಿಶ್ವ. ಆಗ ಅವನಿಗೆ ಹೆಚ್ಚು ವಿಶ್ವಾತ್ಮಕ ಪ್ರಜ್ಞೆ ಅವನಲ್ಲಿ ಬರಲು ಪ್ರಾರಂಭಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/233** **– ಶ್ರೀಮಾತೆ**

# ಐಕ್ಯತೆಯ ಮರುಶೋಧನೆ

– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ

## ಪ್ರತ್ಯೇಕ ವ್ಯಕ್ತಿತ್ವದ ಮಾಯೆ

ನಿಮ್ಮಲ್ಲಿಯ ಸೃಜನಶೀಲ ಸತ್ಯತೆಯನ್ನು ತಿಳಿದುಕೊಳ್ಳಲು ನಿಮ್ಮ ಇರುವಿಕೆಯ ಚಿರವಾದ ಸಾರವನ್ನು ಕಂಡುಹಿಡಿಯಬೇಕು, ಅದಕ್ಕಾಗಿ ನೀವು ಆಳಕ್ಕೆ ಹೋಗಲೇಬೇಕು, ಆಂತರ್ಯದಲ್ಲಿ ಆಳಕ್ಕೆ. ಒಮ್ಮೆ ನೀವು ಅದನ್ನು ಕಂಡುಕೊಂಡಿದ್ದೇ ಆದರೆ, ಅದು ಒಂದೇ ಏಕೈಕ ವಸ್ತು, ಬೇರೆಯವರೆಲ್ಲರಲ್ಲೂ ಅದೇ ಎಂಬುದನ್ನು ನೀವು ಅರಿಯುವಿರಿ. ಆದ್ದರಿಂದ ನಿಮ್ಮ ಪ್ರತ್ಯೇಕ ವ್ಯಕ್ತಿತ್ವ ಎಲ್ಲಿದೆ? ಇನ್ನು ಮುಂದೆ ಏನೂ ಉಳಿದಿಲ್ಲ.

ಹೌದು, ಇವೆಲ್ಲವೂ ದಾಖಲು ಮಾಡಿಕೊಳ್ಳುವ ಮತ್ತು ಪುನರುತ್ಪಾದನೆ ಮಾಡುವ ಸಾಧನಗಳು, ಮತ್ತು ಅಸ್ಪಷ್ಟತೆ ಎಂದು ಕರೆಯಲ್ಪಡಬಹುದಾದವು–ಗಳೆಲ್ಲವೂ ಯಾವಾಗಲೂ ಅಲ್ಲಿವೆ – ಆ ಅಸ್ಪಷ್ಟತೆಗಳು ಉತ್ತಮಕ್ಕಾಗಿರಬಹುದು, ಆ ಅಸ್ಪಷ್ಟತೆಗಳು ಕೆಟ್ಟದ್ದಕ್ಕಾಗಿರಬಹುದು, ಅವುಗಳು ತಕ್ಕಮಟ್ಟಿಗೆ ಭಾರಿ ಬದಲಾವಣೆಗಳಾಗಿರಬಹುದು; ಆಂತರಿಕ ಸಂಯೋಜನೆಗಳು ಎಂತಹವುಗಳೆಂದರೆ, ಸಾಧನಗಳು ಬಹಳೇ ಸಂಕೀರ್ಣವಾದ್ದರಿಂದ, ಒಂದರಿಂದ ಮತ್ತೊಂದಕ್ಕೆ ಸಾಗುವಾಗ ಅವುಗಳು ನಿಖರವಾಗಿ ನಕಲುಗಳಾಗುವುದಿಲ್ಲ. ಆದರೆ, ಅದು ಜಾಗೃತ ಬಯಕೆಯಿಂದ ಪ್ರಚೋದಿಸಲ್ಪಟ್ಟ, ಎಲ್ಲ ಬಯಕೆಗಳಿಂದ ಕೊಂಚ ಸ್ವತಂತ್ರವಾದ ಒಂದೇ ಬಗೆಯ ಒಂದೇ ವಸ್ತುವಾಗಿದೆ.

ಬುದ್ಧನು ಈ ವಿಷಯಗಳನ್ನು ತನ್ನ ಶಿಷ್ಯರಿಗೆ ಮನದಟ್ಟು ಮಾಡಿಕೊಡಬೇಕೆಂದುಕೊಂಡಾಗ, ಅವನು ಅವರಿಗೆ ಹೀಗೆ ಹೇಳುತ್ತಿದ್ದ: ಪ್ರತಿ ಬಾರಿಯು ನೀವು ಕಂಪನಗಳನ್ನು ಹೊರಗೆಡಹಿದಾಗ, ಉದಾಹರಣೆಗಾಗಿ ಒಂದು ಕಾಮನೆ, ಒಂದು ನಿರ್ದಿಷ್ಟ ವಸ್ತುಗಾಗಿ ಕಾಮನೆ, ನಿಮ್ಮ ಕಾಮನೆಯು ಒಬ್ಬ ವ್ಯಕ್ತಿಯಿಂದ ಮತ್ತೊಬ್ಬನೆಡೆ ಸುತ್ತಾಡಲು ಪ್ರಾರಂಭಿಸುತ್ತದೆ, ಬ್ರಹ್ಮಾಂಡದಾದ್ಯಂತ ಒಂದರಿಂದ ಇನ್ನೊಂದಕ್ಕೆ, ಮತ್ತೆ ಸುತ್ತುವರೆದು ಮತ್ತೆ ನೇರವಾಗಿ ಮರಳಿ ನಿಮ್ಮೆಡೆಗೆ ಬರುವುದು. ಅದು ಒಂದೇ ವಿಷಯವಲ್ಲ, ಆದರೆ ವಿಷಯಗಳ ಒಂದು ಜಗತ್ತು, ಹೇಗೆ ನೀನು ಮಾತ್ರ ಪ್ರಸಾರಣ ಕೇಂದ್ರವಲ್ಲವೊ – ಎಲ್ಲ ವ್ಯಕ್ತಿಗತರೂ ಪ್ರಸಾರಣ ಕೇಂದ್ರಗಳು – ಅದೊಂದು ಅಸ್ತವ್ಯಸ್ತತೆ, ನೀನಲ್ಲಿ ನಿನ್ನ ಸ್ವಭಾವವನ್ನು

ನಷ್ಟ ಮಾಡಿಕೊಳ್ಳುವಿ. ಆದರೆ, ಈ ಕಂಪನಗಳು ಸಂಪೂರ್ಣವಾಗಿ ಅಭಿನ್ನವಾದ ಒಂದೇ ಕ್ಷೇತ್ರದಲ್ಲಿ ಸುತ್ತಮುತ್ತ ಚಲಿಸುತ್ತವೆ; ಕಂಪನಗಳ ಗೊಂದಲ ಮತ್ತು ಅಡೆತಡೆ ನಿನಗೆ ಒಂದು ಬಗೆಯ ಸ್ವತಂತ್ರವಾದ ಅಥವಾ ಭಿನ್ನವಾದ ಅನಿಸಿಕೆಯನ್ನು ಕೊಡುತ್ತದೆ.

ಆದರೆ ಅಲ್ಲಿ ಪ್ರತ್ಯೇಕ ಅಥವಾ ಸ್ವತಂತ್ರ ಎಂಬುದಿಲ್ಲ; ಅಲ್ಲಿ ಇರುವಿಕೆಯ ಅನಂತ ಮಾರ್ಗಗಳಲ್ಲಿ ಚಲಿಸುವಂತ ಏಕಮಾತ್ರ ವಸ್ತುವಿದೆ, ಒಂದು ಶಕ್ತಿ, ಒಂದು ಪ್ರಜ್ಞೆ, ಒಂದು ಸಂಕಲ್ಪ.

ಮತ್ತು ಅದು ಎಷ್ಟು ಸಂಕೀರ್ಣವಾಗಿದೆಯೆಂದರೆ, ಇನ್ನು ಮುಂದೆ ಯಾರೊಬ್ಬರೂ ಅದರ ಬಗ್ಗೆ ಅರಿವುಳ್ಳವರಾಗಿರುದಿಲ್ಲ, ಆದರೆ ಸ್ವಲ್ಪ ಹಿಂದಕ್ಕೆ ಒಂದು ಚಲನೆಯನ್ನು ಅನುಸರಿಸಿದರೆ, ಚಲನೆಯ ಮಾರ್ಗ ಯಾವುದೇ ಇರಲಿ, ಕಂಪನಗಳು ತಾವಾಗಿಯೇ ಪ್ರಸರಿಸುವುದನ್ನು, ಒಂದು ಮತ್ತೊಂದನ್ನು ಅನುಸರಿಸುವುದನ್ನು, ಒಂದು ಮತ್ತೊಂದನ್ನು ಅನುಸರಿಸುವುದನ್ನು, ಒಂದು ಮತ್ತೊಂದನ್ನು ಅನುಸರಿಸುವುದನ್ನು ನಾವು ನಿಚ್ಚಳವಾಗಿ ಕಾಣಬಹುದು, ವಾಸ್ತವಾಗಿ ಅಲ್ಲಿರುವುದು ಒಂದು ಐಕ್ಯತೆ ಮಾತ್ರ – ವಸ್ತುವಿನ ಐಕ್ಯತೆ, ಪ್ರಜ್ಞೆಯ ಐಕ್ಯತೆ, ಸಂಕಲ್ಪದ ಐಕ್ಯತೆ. ಅದು ಮಾತ್ರ ಸತ್ಯವಾದುದು. ಬಾಹ್ಯದಲ್ಲಿ ಒಂದು ಬಗೆಯ ಭ್ರಾಂತಿ ಇದೆ: ಭಿನ್ನೆಯ ಭ್ರಾಂತಿ ಮತ್ತು ವ್ಯತ್ಯಾಸದ ಭ್ರಾಂತಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/52–53**

**ಸೋಂಕಿನ ಮತ್ತು ಪರ್ಯಾಯದ ನಿಯಮ**

ಬಹಳೇ ಪ್ರಾಯದವರಿದ್ದಾಗ, ಚಿಕ್ಕ ಮಗುವಿದ್ದಾಗ, ಸ್ವಲ್ಪ ಗಮನವನ್ನು ಕೊಟ್ಟಿದ್ದೇ ಆದರೆ ವ್ಯತ್ಯಾಸವನ್ನು ಗ್ರಹಿಸುವುದು ಕಷ್ಟವಲ್ಲ, ಇದರ ಅರಿವು ನಮಗಾಗುತ್ತದೆ. ನಾವು ನಿರಂತರವಾದ ಸಾಮೂಹಿಕ ಸಲಹೆಗಳ ಮಧ್ಯೆ ಇರುತ್ತೇವೆ, ನಿರಂತರವಾಗಿ; ಉದಾಹರಣೆಗಾಗಿ, ಶವ ಸಂಸ್ಕಾರದ ವೇಳೆಯಲ್ಲಿ ಅಥವಾ ಯಾರೊಬ್ಬರ ಮನೆಯಲ್ಲಿ ತೀರಿಕೊಂಡಾಗ ಅವರ ಮನೆಯಲ್ಲಿ ನೀವಿದ್ದರೆ – ಸಹಜವಾಗಿ ನಿಮ್ಮನ್ನು ನೀವು ಸ್ವಲ್ಪ ಗಮನಿಸಿಕೊಳ್ಳಬೇಕು, ಇಲ್ಲದಿದ್ದರೆ ಏನೂ ಗೊತ್ತಾಗುವುದಿಲ್ಲ – ಆದರೆ ನಿಮ್ಮನ್ನು ನೀವು ಸ್ವಲ್ಪ ಗಮನಿಸಿಕೊಂಡರೆ, ಈ ವ್ಯಕ್ತಿಯ ನಿಧನಕ್ಕೆ ನೀವು ದುಃಖಪಡುವುದಕ್ಕೆ ಅಥವಾ ಕೊರಗುವುದಕ್ಕೆ

ಯಾವುದೇ ವಿಶೇಷ ಕಾರಣವಿಲ್ಲದಿರುವುದನ್ನು ನೀವು ನೋಡಬಹುದು; ಅವನು ಬೇರೆ ವ್ಯಕ್ತಿಗಳ ಹಾಗೆ ಒಬ್ಬ ವ್ಯಕ್ತಿ; ಇದು ಘಟಿಸಿದೆ ಮತ್ತು ಸಾಮಾಜಿಕ ಸಂಯೋಜನೆಗಳಿಂದ ನೀವು ಆ ಮನೆಗೆ ಬಂದಿರುತ್ತೀರಿ ಮತು ಅಲ್ಲಿ ಒಮ್ಮೆಲೆ, ಯಾಕೆ ಅಥವಾ ಹೇಗೆ ಎಂದು ತಿಳಿಯದೇನೆ ನೀವು ಗಟ್ಟಿಯಾದ ಮನಸ್ಸಿನ ಉದ್ವೇಗ ಅನುಭವಿಸುವಿರಿ, ಭಾರಿ ದುಃಖ ಅನುಭವಿಸುವಿರಿ, ಒಂದು ಆಳವಾದ ನೋವನ್ನು ಅನುಭವಿಸುವಿರಿ, ಮತ್ತೆ ನಿಮ್ಮನ್ನು ನೀವು ಕೇಳಿಕೊಳ್ಳುತ್ತೀರಿ, "ನಾನು ಯಾಕೆ ಇಷ್ಟೊಂದು ದುಃಖದಿಂದ ಇದ್ದೇನೆ?" ಯಾಕೆಂದರೆ ಕಂಪನಗಳು ನಿಮ್ಮನ್ನು ಪ್ರವೇಶಿಸಿವೆ, ಬೇರೇನೂ ಅಲ್ಲ.

ಅದು, ನಾನು ಚಿಕ್ಕ ಮಗುವಿದ್ದಾಗ ನನಗಾದ ಅನುಭವ, ಅದನ್ನು ಗಮನಿಸುವುದು ತುಂಬಾ ಸರಳವೆಂದು ನನ್ನ ಅಭಿಪ್ರಾಯ – ಆ ಸಮಯದಲ್ಲಿ ನಾನು ಯೋಗವನ್ನು ಪ್ರಜ್ಞಾಪೂರ್ವಕವಾಗಿ ಮಾಡುತ್ತಿರಲಿಲ್ಲ; ಬಹುಶಃ ನಾನು ಯೋಗವನ್ನು ಜಾಗ್ರತಳಾಗಿ ಮಾಡುತ್ತಿರಲಿಲ್ಲ – ನಾನದನ್ನು ಬಹಳ, ಬಹಳ ಸ್ಪಷ್ಟವಾಗಿ ಗಮನಿಸಿದ್ದೇನೆ. "ನಾನು ಅನುಭವಿಸುವ ದುಃಖ ಖಚಿತವಾಗಿಯು ಅವರದ್ದು, ಈ ವ್ಯಕ್ತಿಯ ಮೃತ್ಯುವಿನಿಂದ ವಿಶೇಷವಾಗಿ ಬಾಧಿತವಾಗಲು ಕಾರಣ ನನ್ನಲ್ಲಿರಲಿಲ್ಲ" ಎಂದು ನನ್ನಷ್ಟಕ್ಕೆ ನಾನು ಹೇಳಿಕೊಂಡೆ; ಒಮ್ಮಿಂದೊಮ್ಮೆಲೆ ನನ್ನ ಕಣ್ಣಲ್ಲಿ ನೀರು ಜಿನುಗಿತು, ನನ್ನ ಗಂಟಲಿನಲ್ಲಿ ಏನೋ ಒಂದು ಗಡ್ಡೆ ಇದ್ದಂತೆ ಭಾವಿಸಿದೆ ಮತ್ತು ಉತ್ಕಟವಾದ ದುಃಖದಲ್ಲಿದ್ದಂತೆ ಆಳಬೇಕೆಂದುಕೊಂಡೆ – ನಾನು ಚಿಕ್ಕ ಮಗುವಾಗಿದ್ದೆ – "ಓಹ್! ಅವರ ದುಃಖ ನನ್ನೊಳಗೆ ಬಂದಿದೆ" ಎಂದು ತಕ್ಷಣಕ್ಕೆ ನಾನು ತಿಳಿದುಕೊಂಡೆ.

ಇದು ಕೋಪಕ್ಕೂ ಅನ್ವಯಿಸುತ್ತದೆ. ಅದನ್ನು ನಾವು ತಕ್ಷಣಕ್ಕೆ ಸ್ವೀಕರಿಸುತ್ತೇವೆ, ಇದು ಅತಿ ಸ್ಪಷ್ಟ ಅದು ಒಬ್ಬ ವ್ಯಕ್ತಿಯಿಂದಲೂ ಸಹ ಅಲ್ಲ, ಪರಿಸರದಿಂದಲೂ ಸಹ ಅಲ್ಲ, ಇದು ಅತಿ ಸ್ಪಷ್ಟ – ಅದು ಅಲ್ಲಿದೆ – ಮತ್ತೆ ಅದು ಹಠಾತ್ತಾಗಿ ನಿನ್ನನ್ನು ಪ್ರವೇಶಿಸುತ್ತದೆ ಮತ್ತು ಸಾಮಾನ್ಯವಾಗಿ ಅದು ನಿನ್ನನ್ನು ಹಿಡಿದುಕೊಳ್ಳುತ್ತದೆ, ನಂತರ ಮೇಲಕ್ಕೇರುತ್ತದೆ ಮತ್ತು ನಿನ್ನನ್ನು ತಳ್ಳುತ್ತದೆ ಮತ್ತು ನೀನು ದೂರ ಹೋಗುವಿ. ಒಂದು ನಿಮಿಷದ ಹಿಂದೆ ಆ ಕೋಪ ನಿನ್ನಲ್ಲಿರಲಿಲ್ಲ, ನೀನು ತುಂಬಾ ಸಮಾಧಾನವಾಗಿದ್ದೆ, ನಿನ್ನ ಮನೋಸ್ಥಿತಿಯನ್ನು ಕಳೆದುಕೊಳ್ಳುವ ಇಂಗಿತ ಇರಲಿಲ್ಲ. ಇದು ನಿನ್ನನ್ನು ಎಷ್ಟು ಗಟ್ಟಿಯಾಗಿ ಹಿಡಿದುಕೊಳ್ಳುತ್ತದೆ ಎಂದರೆ, ನೀನು ವಿರೋಧಿಸುವುದನ್ನು ಬಿಟ್ಟುಬಿಡುವಿ – ಯಾಕೆಂದರೆ, ನೀನು ಸಾಕಷ್ಟು

ಪ್ರಜ್ಞೆಯಲ್ಲಿರುವುದಿಲ್ಲ, ಅದನ್ನು ನಿನ್ನಲ್ಲಿ ಸೇರಲು ಬಿಟ್ಟುಬಿಡುವಿ ಮತ್ತು ಅದು ನಿನ್ನನ್ನು ಉಪಯೋಗಿಸಿಕೊಳ್ಳುತ್ತದೆ – ನೀನು... "ನಿನ್ನನ್ನು" ಎಂದು ಯಾವುದನ್ನು ಕರೆದುಕೊಳ್ಳುತ್ತೀಯೋ, ಅಂದರೆ ನಿನ್ನ ದೇಹ; ಸ್ಪಷ್ಟವಾಗಿ (ಸ್ಪಷ್ಟವಾಗಿ ನಾನು ಹೇಳಬೇಕು) ನಿನ್ನ ನೆರೆಯವನ ದೇಹಕ್ಕಿಂತ ಏನೋ ಒಂದು ಬೇರೆಯದು. ಆದರೆ, ಅದೊಂದು ಬರೀ ಬೆಳಕಿನ ಭ್ರಮೆ, ಕಣಗಳೆಂದು ಕರೆಯಲ್ಪಡುವ ಅವುಗಳು ವಾಸ್ತವವಾಗಿ ಯಾವಾಗಲೂ ಅಲ್ಲಿವೆ, ಭೌತಿಕ ಕಣಗಳೂ ಸಹ, ಅವುಗಳು ದೇಹದಿಂದ ಹೊರಬಂದು ಬೇರೆಯವರ ಜೊತೆ ಮಿಶ್ರಣ ಹೊಂದುವ ಒಂದು ತರದ ವಿಕಿರಣದಂತೆ; ಮತ್ತು ಇದರಿಂದ ನಾವು ಸೂಕ್ಷ್ಮಗ್ರಾಹಿಗಳಾದಾಗ ಅವುಗಳನ್ನು ದೂರದಿಂದಲೇ ಅನುಭವಿಸಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/53–55**

**ಏಕತ್ವವು ಏಕರೂಪತೆ ಅಲ್ಲ**

ಎಲ್ಲರನ್ನೂ ಒಂದೇ ತೆರನಾಗಿ ನಡೆಸಿಕೊಳ್ಳುವಂತೆ, ಇದೊಂದು ಇನ್ನೂ ಕೆಟ್ಟ ಗೊಂದಲದ ವಿಷಯ! ದೇವರು ಎಲ್ಲರನ್ನೂ ಒಂದೇ ತೆರನಾಗಿ ಕಾಣಲೇಬೇಕೆಂದು ಹೇಳುವಾಗ ಮಾಡಿಕೊಳ್ಳುವ ಒಂದು ಪ್ರಕಾರದ ಗೊಂದಲ. ಆದ್ದರಿಂದ, ಜಗತ್ತಿನಲ್ಲಿ ವೈವಿಧ್ಯತೆಯನ್ನು ಹೊಂದಬೇಕಾದರೆ ಅದು ಯೋಗ್ಯ ತೊಂದರೆಯಾಗಲಿಕ್ಕಿಲ್ಲ, ಇಬ್ಬರು ಒಂದೇ ತರಹದ ವ್ಯಕ್ತಿಗಳನ್ನು ಹೊಂದದೆ ಇರಲು ಇದು ತಕ್ಕುದಾದ ತೊಂದರೆಯಲ್ಲ; ಇದು ವೈವಿಧ್ಯತೆಯ ತತ್ವಕ್ಕೆ ವಿರುದ್ಧವಾಗಿದೆ.

ತಿಳುವಳಿಕೆಯ, ಏಕತೆಯ, ಪ್ರೇಮದ, ವಿಶ್ವದಲ್ಲಿರುವ ಎಲ್ಲವುದಕ್ಕೂ ಪರಿಪೂರ್ಣ ಸಹಾನುಭೂತಿಯ ಒಂದೇ ಬಗೆಯ ಆಳವಾದ ನಿಲುವು ಹೊಂದಲು ನೀವು ಹಂಬಲಿಸಬಹುದು – ಅಥವಾ ಇಲ್ಲದಿದ್ದರೆ ನೀವು ಹಂಬಲಿಸಲೇಬೇಕು; ಈ ನಿಜವಾದ ನಿಲುವು ಪ್ರತಿ ವಿಷಯಕ್ಕೂ ಬೇರೆಯದೆ ರೀತಿಯಲ್ಲಿ, ವಿಷಯದ ಸತ್ಯತೆ ಮತ್ತು ಅದರ ಅಗತ್ಯತೆಗೆ ಅನುಗುಣವಾಗಿ ಅನ್ವಯವಾಗುತ್ತದೆ. ಪ್ರೇರಣೆ ಎಂದು ಕರೆಯಬಹುದಾದ ಅಥವಾ ಕ್ರಿಯೆಯ ನಿಜವಾದ ಮೂಲ ಒಂದೇ ಆಗಿವೆ, ಆದರೆ ಸಂದರ್ಭಕ್ಕನುಸಾರವಾಗಿ ಮತ್ತು ಪ್ರತಿ ಸಂದರ್ಭದ ಆಳವಾದ ನಿಜಾಂಶದ ಅನುಗುಣವಾಗಿ ಕ್ರಿಯೆಯು ಪೂರ್ಣತಃ ಮತ್ತು ಸಂಪೂರ್ಣ ವಿರುದ್ಧವಾಗಿಯೂ ಸಹ ಇರಬಹುದು. ಆದರೆ ಅದಕ್ಕಾಗಿ ಶ್ರೇಷ್ಠವಾದ ವರ್ತನೆ,

ಎಲ್ಲ ಬಾಹ್ಯ ಅನಿರೀಕ್ಷಿತ ಸಂದರ್ಭಗಳಿಂದ ಮುಕ್ತವಾದಂಥಹ ಬಹಳ ಅಗಾಧವಾದ, ಅತ್ಯಂತ ಸಾರಭೂತವಾದ ಸತ್ಯವನ್ನು ನಾವು ಖಚಿತವಾಗಿ ಹೊಂದಿರಬೇಕು. ನಂತರ, ಪ್ರತಿ ನಿಮಿಷವೂ ಸಾರಭೂತವಾದ ಸತ್ಯವನ್ನಷ್ಟೆ ಅಲ್ಲದೆ ಕ್ರಿಯೆಯ ಸತ್ಯವನ್ನೂ ಸಹ ನಾವು ನೋಡಬಹುದು; ಮತ್ತು ಪ್ರತಿ ಸಂದಭಗಳಲ್ಲೂ ಅದು ಬೇರೆಯಾಗಿರುತ್ತದೆ. ಆದಾಗ್ಯೂ, "ಭಾವನೆ" ಎಂದು ಕರೆಯಲ್ಪಡುವ – ಇದು ಅಸಮರ್ಪಕ ಶಬ್ದವಾದರೂ – ಅಥವಾ ಪ್ರಜ್ಞೆಯ ಸ್ಥಿತಿಯಲ್ಲಿ ವರ್ತಿಸುವವ, ಮೂಲತಃ ಒಂದೆ.

ಆದರೆ, ನಾವು ವಿಷಯಗಳ ಸಾರಭೂತ ಆಳಕ್ಕೆ ಪ್ರವೇಶಿಸದ ಹೊರತು ಮತ್ತು ಅತ್ಯುನ್ನತ ಶೃಂಗದಿಂದ ನೋಡದ ಹೊರತು ಇದನ್ನು ತಿಳಿದುಕೊಳ್ಳಲಾಗುವುದಿಲ್ಲ. ನಂತರ ಅದು ಒಂದೇ ಸಮಯದಲ್ಲಿ ಎಲ್ಲ ವಿಷಯಗಳನ್ನು ಬರೀ ಮೂಲದಲ್ಲಿ ಮಾತ್ರವಲ್ಲದೆ ಅವುಗಳ ಅಭಿವ್ಯಕ್ತಿಯಲ್ಲಿಯೂ ನೋಡಬಹುದಾದ ಸಾಕಷ್ಟು ಎತ್ತರ ಅಥವಾ ಸಾಕಷ್ಟು ಆಳವಾದ ಪ್ರಜ್ಞೆಯಂತೆ ಮತ್ತು ಒಂದು ಪ್ರಕಾಶದ ಕೇಂದ್ರದಂತೆ; ಆದಾಗ್ಯೂ, ಪ್ರಜ್ಞೆಯ ಕೇಂದ್ರ ಒಂದೇ ಇದ್ದಾಗ, ಅಭಿವ್ಯಕ್ತಿಯು ವೈವಿಧ್ಯವಾಗಿದ್ದಂತೆ ಕ್ರಿಯೆಯು ವೈವಿಧ್ಯವಾಗಿರುತ್ತದೆ: ಅದು ಅದರ ಅಭಿವ್ಯಕ್ತಿಯಲ್ಲಿ ದೈವೀ ಸತ್ಯದ ಸಿದ್ಧಿಯಾಗಿದೆ. ಇಲ್ಲದಿದ್ದರೆ, ಜಗತ್ತಿನ ಎಲ್ಲ ವೈವಿಧ್ಯದೊಂದಿಗೆ ಮತ್ತು ಸಾರಭೂತವಾದ ಪ್ರಕಟವಾಗದ ಏಕತೆಗೆ ಹಿಂತಿರುಗಿ ತಂದಂತೆ ಆಗುತ್ತದೆ, ಅದು ಬರೀ ಪ್ರಕಟವಾಗದುದರಲ್ಲಿ ಮಾತ್ರ ಏಕವು ಏಕವಾಗಿ ಪ್ರಕಟವಾದಂತೆ. ನಾವು ಅಭಿವ್ಯಕ್ತಿಯನ್ನು ಪ್ರವೇಶಿಸಿದೊಡನೆಯೆ, ಏಕವು ಬಹುತ್ವವಾಗಿ ಪ್ರಕಟವಾಗುತ್ತದೆ, ಮತ್ತು ಬಹುತ್ವವೆಂದರೆ ಕ್ರಿಯೆಗಳು ಮತ್ತು ಮಾರ್ಗಗಳು ಬಹುವಾಗುವುದು.

ಒಟ್ಟಾರೆಯಾಗಿ: ಪರಿಣಾಮಗಳನ್ನು ಲೆಕ್ಕಿಸದೆ ಆಯ್ಕೆಯನ್ನು ಮಾಡಲೇಬೇಕು, ಮತ್ತು ಅಭಿವ್ಯಕ್ತಿಯಲ್ಲಿಯ ಬಹುತ್ವದ ಸತ್ಯದ ಅನುಸಾರವಾಗಿ ಕ್ರಿಯೆಗಳನ್ನು ಮಾಡಲೇಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/407–08**

**ಚಲನ ಶಕ್ತಿಯಲ್ಲಿ ಏಕತೆ**

ಎಲ್ಲ ವಸ್ತುಗಳನ್ನು ಚಲಿಸುವಂಥ ಒಂದು ಚಲನಶೀಲ ಶಕ್ತಿ ಇದೆ, ಆ ಶಕ್ತಿಯ ಅರಿವು ನಿಮಗಾದಾಗ ಅದು ಎಲ್ಲ ವಸ್ತುಗಳನ್ನು ಚಲಿಸುವಂಥ ಶಕ್ತಿ ಎಂಬುದನ್ನು ನೀವು ಕಾಣುವಿರಿ; ಅದರ ಅರಿವು ನಿಮಗಾಗುತ್ತಿದ್ದಂತೆ, ನೀವು ಅದರ

ಚಲನೆಯನ್ನು ಸಹ ಅನುಸರಿಸುವಿರಿ ಮತ್ತು ವ್ಯಕ್ತಿಗಳಲ್ಲಿ ಹಾಗೂ ವಸ್ತುಗಳಲ್ಲಿ ಅದು ಹೇಗೆ ಕಾರ್ಯ ನಿರ್ವಹಿಸುತ್ತದೆ ಎನ್ನುವುದನ್ನೂ ನೋಡುವಿರಿ. ಐಕ್ಯತೆಯ ಅರಿವು ನಿಮಗಾದ ಘಳಿಗೆಯಿಂದ – ಬಲದ ಐಕ್ಯತೆ, ಪ್ರಜ್ಞೆಯ ಐಕ್ಯತೆ ಮತ್ತು ಬಯಕೆಯ ಐಕ್ಯತೆ – ಸರಿ, ಯಾವುದು ಬೇರೆಯವರಿಂದ ನಿಮ್ಮನ್ನು ಭಿನ್ನವಾಗಿ ಮಾಡುತ್ತದೆಯೋ ಅದರ ಅನುಭವ ನಿಮಗೆ ಎಂದಿಗೂ ಆಗುವುದಿಲ್ಲ, ಅವರಲ್ಲಿ ಏನಾಗುತ್ತದೆ ಎನ್ನುವುದು ನಿಮಗೆ ಗೊತ್ತಾಗುವುದಿಲ್ಲ, ಅವರು ನಿಮಗೆ ಅಪರಿಚಿತರು, ನಿಮ್ಮ ಸ್ವಂತ ತ್ವಚೆಯಲ್ಲಿದ್ದಂತೆ ನೀವು ಮುಚ್ಚಿಕೊಳ್ಳುವಿರಿ, ಮತ್ತು ಸಂಪೂರ್ಣ ಬಾಹ್ಯವಾಗಿ ಹಾಗೂ ಕೇವಲ ತೋರಿಕೆಗಾಗಿ ಹೊರತು ನೀವು ಬೇರೆಯವರ ಸಂಪರ್ಕದಲ್ಲಿರುವುದಿಲ್ಲ. ಇದು ನಿಖರವಾಗಿ ಸಂಭವಿಸುತ್ತದೆ, ಯಾಕೆಂದರೆ, ಪ್ರಜ್ಞೆಯ, ಬಲದ ಮತ್ತು ಏಕತೆಯ ಈ ಅನುಭವವನ್ನು ನೀನು ನಿನ್ನಲ್ಲಿ ಅರಿತುಕೊಂಡಿರುವುದಿಲ್ಲ – ಲೌಕಿಕ ಕಂಪನಗಳನ್ನೂ ಕೂಡ.

ಸಂಕೀರ್ಣತೆ ಎನ್ನುವುದು ಈ ಅನುಭವವನ್ನು ಜಟಿಲವಾಗಿಸುತ್ತದೆ – ಅನುಭವಿಸುವ ನಮ್ಮ ಸಾಮರ್ಥ್ಯಗಳು ತೀರಾ ರೇಖಾತ್ಮಕವಾಗಿ ಮತ್ತು ತುಂಬಾ ಏಕಪಕ್ಷೀಯವಾಗಿ ಇರುತ್ತವೆ; ಆದ್ದರಿಂದ ನಾವು ತಿಳಿದುಕೊಳ್ಳಬೇಕೆಂದುಕೊಂಡಾಗ ತಕ್ಷಣವೆ ನಾವು ಬಹುತೇಕ ಒಂದಕ್ಕೊಂದು ಅಸಂಗತವಾದ ಅಸಂಖ್ಯ ವಸ್ತುಗಳಿಂದ ದಾಳಿಗೀಡಾಗುತ್ತೇವೆ ಮತ್ತು ಯಾರೊಬ್ಬರೂ ಮಾರ್ಗಗಳನ್ನು ಗ್ರಹಿಸಲಾರದಂಥ ಹಾಗೂ ವಸ್ತುಗಳನ್ನು ಅನುಸರಿಸಲಾರದಂಥ ಒಂದು ಜಟಿಲವಾದಂಥಹ ರೀತಿಯಲ್ಲಿ ಒಂದಾಗುತ್ತವೆ – ಆಗ ಇದ್ದಕ್ಕಿದ್ದಂತೆ ನಾವು ಸುಳಿಗಾಳಿಯನ್ನು ಪ್ರವೇಶಿಸುತ್ತೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/55–56**

**ರಹಸ್ಯ ಏಕತ್ವ**

*ಪ್ರೀತಿಯ ಶ್ರೀಮಾತೆಯವರೆ, "ಎಲ್ಲರೂ ಒಂದು ರಹಸ್ಯ ಏಕತ್ವದಿಂದ ಒಟ್ಟಾಗಿ ಸಂಪರ್ಕ ಹೊಂದಿದ್ದಾರೆ", ಎಂದು ಇಲ್ಲಿ ಬರೆದಿದೆ.*

Ibid., p. 98

*ಏನಿದು ರಹಸ್ಯ ಏಕತ್ವ?*

ಅದು ಸತ್ಯವಾಗಿಯೂ (ನಿಖರವಾಗಿ) ದೈವೀ ಉಪಸ್ಥಿತಿ.

ಯಾಕೆಂದರೆ, ಮೂಲತಃ ದೈವವು ಒಂದೇ, ಆದಾಗ್ಯೂ ಅವನು ತನ್ನನ್ನು ತಾನು ಸ್ಪಷ್ಟವಾಗಿ ಎಲ್ಲ ಜೀವಿಗಳಲ್ಲಿ ಉಪವಿಭಜನೆ ಮಾಡಿಕೊಂಡಿದ್ದಾನೆ, ಈ ರೀತಿಯಾಗಿ ಆದಿಸ್ವರೂಪದ ಏಕತೆಯನ್ನು ಪುನಃ ಸೃಷ್ಟಿ ಮಾಡಿದ್ದಾನೆ. ಆದಾಗ್ಯೂ, ಈ ದೈವೀ ಏಕತೆಯಿಂದ ಎಲ್ಲ ಜೀವಿಗಳಲ್ಲಿ ಇದು ಚೂರು–ಚೂರಾಗಿ ತೋರುತ್ತದೆ – ಅಂದರೆ ಏಕತ್ವವು ತನ್ನ ಮೂಲ ಸ್ವರೂಪದಲ್ಲಿ ಮರು ಸ್ಥಾಪಿಸಲ್ಪಟ್ಟಿದೆ. ಯಾವಾಗ ನಮಗೆ ಈ ಏಕತ್ವದ ಅರಿವಾಗುತ್ತದೆಯೋ, ಆಗ ಈ ಏಕತ್ವದ ಅರಿವಿನ ಆನಂದವನ್ನು ಹೊಂದುತ್ತೇವೆ. ಆದರೆ ಯಾರು ಈ ಅರಿವನ್ನು ಹೊಂದುವುದಿಲ್ಲವೋ – ಅವರು ಈ ಆನಂದದಿಂದ ವಂಚಿತರಾಗುತ್ತಾರೆ. ಆದರೆ ಸತ್ಯಾಂಶ ಒಂದೇ ಆಗಿ ಉಳಿಯುತ್ತದೆ.

ಶ್ರೀ ಅರವಿಂದರು ಹೇಳುತ್ತಾರೆ: ಏಕತ್ವ ಅಸ್ತಿತ್ವದಲ್ಲಿದೆ; ಅದರ ಅರಿವು ನಿಮಗಿದೆಯೋ ಇಲ್ಲವೋ, ಅದು ಅಸ್ತಿತ್ವದಲ್ಲಿದೆ, ವಾಸ್ತವವಾಗಿ ಅದು ಯಾವುದೇ ವ್ಯತ್ಯಾಸವನ್ನು ಮಾಡುವುದಿಲ್ಲ; ಆದರೆ ಅದು ನಿಮಗೆ ವ್ಯತ್ಯಾಸವನ್ನು ಮಾಡುತ್ತದೆ: ನೀವು ಜಾಗ್ರತರಾಗಿದ್ದರೆ, ಆನಂದವು ನಿಮ್ಮಲ್ಲಿದೆ; ನೀವು ಒಂದು ವೇಳೆ ಜಾಗೃತರಾಗಿಲ್ಲದಿದ್ದರೆ, ಆನಂದವನ್ನು ಕಳೆದುಕೊಳ್ಳುತ್ತೀರಿ.

*ಆದರೆ, ನಾವು ಜಾಗೃತರಾಗಿಲ್ಲದಿದ್ದಾಗ ಹೇಗೆ ಸಮರ್ಪಣೆಯನ್ನು ಮಾಡಿಕೊಳ್ಳುವುದು?*

ಅದು ತಂತಾನೆ ರೂಪಿತವಾಗುತ್ತದೆ.

ಅದು ನಿನಗೆ ತಿಳಿದಿದೆಯೋ ಅಥವಾ ಇಲ್ಲವೊ, ಅದು ನಿನಗೆ ಬೇಕೋ ಅಥವಾ ಬೇಡವೊ, ನೀವೆಲ್ಲರೂ ದೈವಿ ಉಪಸ್ಥಿತಿಯಿಂದ ಒಗ್ಗಟ್ಟಾಗಿ ಇರುವಿರಿ, ಯಾವುದು ವಿಘಟಿತವಾಗಿ ತೋರುತ್ತದೆಯೋ, ಅದು ಒಂದೇ ಆಗಿದೆ. ದೇವರು ಒಬ್ಬನೇ ಅವನು ವಸ್ತುಗಳಲ್ಲಿ ಮತ್ತು ಜೀವಿಗಳಲ್ಲಿ ವಿಘಟಿಸಿದಂತೆ ತೋರುತ್ತಾನೆ. ಏಕತೆಯು ವಾಸ್ತವಾಂಶ, ನೀವು ಅದರ ಬಗ್ಗೆ ಅರಿವು ಹೊಂದಿದ್ದರೂ ಅಥವಾ ಹೊಂದಿಲ್ಲದಿದ್ದರೂ, ವಾಸ್ತವಾಂಶ ಬದಲಾಗುವುದಿಲ್ಲ. ಮತ್ತು ಅದು ನಿಮಗೆ ಬೇಕೋ ಅಥವಾ ಬೇಡವೋ, ಆದರೂ ನೀವುಗಳು ಈ ಐಕ್ಯತೆಗೆ ಒಳಪಡುವಿರಿ.

ಇದನ್ನೇ ನಾನು ನಿಮಗೆ ವಿವರಿಸಿದ್ದೇನೆ, ಎಷ್ಟು ಬಾರಿ ನನಗೆ ಗೊತ್ತಿಲ್ಲ: ನೀವು ಒಬ್ಬರಿಗೊಬ್ಬರು ವಿಭಿನ್ನವಾಗಿದ್ದೀರಿ ಎಂದು ನೀವು ಭಾವಿಸುತ್ತೀರಿ, ಆದರೆ

ತೋರಿಕೆಯಲ್ಲಿ ವ್ಯತ್ಯಾಸಗಳಿದ್ದಾಗ್ಯೂ ಇದು ನಿಮ್ಮೆಲ್ಲರಲ್ಲೂ ಇರುವ ಒಂದೇ ಒಂದು ವಸ್ತುವಾಗಿದೆ; ಒಂದು ಕೇಂದ್ರದಲ್ಲಿಯ ಒಂದು ಕಂಪನವು ತಾನೆ ತಾನಾಗಿ ಇನ್ನೊಂದರಲ್ಲಿ ಒಂದು ಕಂಪನವನ್ನು ಜಾಗೃತಗೊಳಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/75–76**

**ಐಕ್ಯತೆ ಮತ್ತು ಏಕತ್ವವನ್ನು ಪುನಃ ಸ್ಥಾಪಿಸುವುದು**

ಆಂತರಿಕವಾಗಿ ನಮ್ಮಲ್ಲಿ ದಿವ್ಯತೆಯನ್ನು ತೆಗೆದುಕೊಂಡು ಹೋಗದಿದ್ದರೆ, ಒಂದು ಜೀವಿಯ ಅಸ್ತಿತ್ವದಲ್ಲಿ, ನಾವು ದಿವ್ಯತೆಯನ್ನು ಅರಿತುಕೊಳ್ಳವುದು ಸಾಧ್ಯವಾಗುವುದಿಲ್ಲ; ಅದೊಂದು ಅಸಾಧ್ಯ ಸಾಹಸವಾಗುತ್ತದೆ. ಆದರೆ, ನಂತರ, ನೀವು ಸಮಸ್ಯೆಯನ್ನು ವ್ಯತಿರಿಕ್ತವಾಗಿಸಿದರೆ, ಯಾವುದೋ ಒಂದು ಅಥವಾ ಇನ್ನೊಂದು ಥರದಲ್ಲಿ ನೀವು ಗ್ರಹಿಸಿದ ಮತ್ತು ಭಾವಿಸಿದ ಕ್ಷಣದಿಂದ ಅಥವಾ ಆರಂಭದಲ್ಲೂ ಸಹ ದೈವವು ನಿಮ್ಮಲ್ಲಿದೆ ಎಂದು ಹಾಗೆಯೇ ನೀನು ದೈವದಲ್ಲಿರುವಿ ಎಂದು ಒಪ್ಪಿಕೊಳ್ಳಬೇಕು, ಆಗ ಇದು ಈಗಾಗಲೇ ಸಾಕ್ಷಾತ್ಕಾರಕ್ಕೆ ಬಾಗಿಲನ್ನು ತೆರೆದಿರುತ್ತದೆ; ಒಂದು ಸ್ವಲ್ಪ, ಅಷ್ಟೇನೂ ಅಲ್ಲ – ಅರೆತೆರೆದ. ನಂತರದಲ್ಲಿ, ಒಂದು ವೇಳೆ ಅಭೀಪ್ಸೆ, ತಿಳಿದುಕೊಳ್ಳುವ ಅಥವಾ ಹಾಗೆ ಇರುವ ತೀಕ್ಷ್ಣ ಬೇಡಿಕೆ ಗರಿಗೆದರಿದರೆ, ಆಗ ನೀನು ಒಳನುಸುಳುವವರೆಗೆ ಆ ತೀಕ್ಷ್ಣವಾದ ಬೇಡಿಕೆಯನ್ನು ವ್ಯಾಪಕಗೊಳಿಸುತ್ತದೆ. ಒಮ್ಮೆ ಒಳನುಸುಳಿದ ನಂತರ, ನೀನು ಏನಾಗಿರುವಿ ಎನ್ನುವ ಅರಿವು ನಿನಗಾಗುವುದು. ಅದನ್ನೇ ಶ್ರೀ ಅರವಿಂದರು ನಿಖರವಾಗಿ ಹೇಳುತ್ತಾರೆ, ನೀನದನ್ನು ಮರೆತಿರುವಿ, ಸತ್, ಚಿತ್, ಆನಂದದ ಪ್ರತ್ಯೇಕತೆಯಿಂದ ಮರೆವು ಬರುತ್ತದೆ, ತಾನು ಏನಾಗಿರುವೆನೆಂಬುದರ ಮರೆವು; ನೀನು ಬೇರೆ ಯಾರೋ ಎಂದು ಯೋಚಿಸುವಿ, ನೀನು ಯಾವುದನ್ನು ನೋಡಿದರೂ, ಹುಡುಗ, ಹುಡುಗಿ, ಪುರುಷ, ಮಹಿಳೆ, ನಾಯಿ, ಕುದುರೆ, ಯಾವುದಾದರೂ, ಕಲ್ಲು, ಸಮುದ್ರ, ಸೂರ್ಯ; ತಾನೊಬ್ಬ ಒಬ್ಬ ದೈವೀ ಪುರುಷ ಎನ್ನುವುದನ್ನು ಬಿಟ್ಟು ತಾನು ಇದೆಲ್ಲವೂ ಎಂದು ನಂಬುತ್ತಾನೆ – ಯಾಕೆಂದರೆ, ವಾಸ್ತವವಾಗಿ, ತಾನೊಬ್ಬ ದೈವೀ ಪುರುಷನೆಂದು ಯೋಚಿಸುತ್ತ ಇದ್ದರೆ, ವಿಶ್ವವೇ ಅಲ್ಲಿರುತ್ತಿರಲಿಲ್ಲ.

ನಾನು ಅವನಿಗೆ ಹೇಳಬೇಕೆಂದುಕೊಂಡಿದ್ದೇನೆಂದರೆ (ಒಂದು ಮಗುವಿನ ಕಡೆಗೆ ತೋರಿಸುತ್ತ), ವಿಶ್ವದ ಇರುವಿಕೆಗಾಗಿ ಈ ಪ್ರತ್ಯೇಕತೆಯ ವಿದ್ಯಮಾನವು ಅನಿವಾರ್ಯವೆಂದು ತೋರುತ್ತದೆ, ಇಲ್ಲದಿದ್ದರೆ ಅದು ಯಾವಾಗಲೂ ಇದ್ದಂತೆಯೇ ಇರುತ್ತಿತ್ತು. ಆದರೆ, ಈ ತಿರುವಿನ ಮುಖಾಂತರ ಇದನ್ನು ಹಾದುಹೋಗುವಂತೆ ಮಾಡಿದ ಮೇಲೆ ನಾವು ಒಂದು ವೇಳೆ ಐಕ್ಯತೆಯನ್ನು ಮರುಸ್ಥಾಪಿಸಿದರೆ, ಇಲ್ನೋಡಿ, ಬಹುತ್ವದಿಂದ, ವಿಭಜನೆಯಿಂದ ಲಾಭವನ್ನು ಪಡೆದುಕೊಂಡಾದ ಮೇಲೆ ಒಂದು ವೇಳೆ ಐಕ್ಯತೆಯನ್ನು ಪುನರ್‌ಸ್ಥಾಪಿಸಿದರೆ, ನಾವು ಉನ್ನತ ಗುಣಮಟ್ಟದ, ತನ್ನನ್ನು ತಾನು ತಿಳಿದುಕೊಳ್ಳಬೇಕಾದ ಐಕ್ಯತೆಯ ಬದಲು ತನ್ನನ್ನು ತಾನು ತಿಳಿದಿರುವ ಐಕ್ಯತೆಯನ್ನು ಪಡೆಯುತ್ತೇವೆ, ಏಕೆಂದರೆ ಇತರರಿಗೆ ತಿಳಿದಿರುವುದು ಯಾವುದೂ ಇಲ್ಲ. ಏಕತೆಯು ಪರಿಪೂರ್ಣವಾದಾಗ, ಏಕತೆಯನ್ನು ಯಾರು ತಿಳಿಯಬಲ್ಲರು? ನಾನು ಕನಿಷ್ಠ ಒಂದು ಚಿತ್ರವನ್ನು, ಅದು ಏನೆಂಬುದನ್ನು ಅರ್ಥಮಾಡಿಕೊಳ್ಳಬೇಕಾದರೆ ಅದು ಅಲ್ಲದ ಒಂದು ನೋಟವನ್ನು ಪಡೆದುಕೊಳ್ಳಲು ಶಕ್ತರಾಗಬೇಕು. ಇದು ವಿಶ್ವದ ಸತ್ಯವೆಂದು ನನ್ನ ನಂಬಿಕೆ. ಬಹುಶಃ ದೇವರು ನಿಜವಾಗಿಯೂ ತನ್ನನ್ನು ತಾನು ತಿಳಿದುಕೊಳ್ಳಲು ಬಯಸಿದಾಗ ಅವನು ತನ್ನನ್ನು ತಾನು ಹೊರಗೆ ಎಸೆದುಕೊಂಡು ನಂತರ ತನ್ನೆಡೆಗೆ ನೋಡಿಕೊಂಡ ಮತ್ತು ಸದ್ಯಕ್ಕೆ ತನ್ನ ಬಗ್ಗೆ ಪೂರ್ಣ ತಿಳುವಳಿಕೆ ಪಡೆದ ತನ್ನ ಇರುವಿಕೆಯ ಸಾಧ್ಯತೆಯನ್ನು ಆನಂದ ಹೊಂದಲು ಬಯಸುತ್ತಾನೆ. ಇದು ಇನ್ನೂ ಹೆಚ್ಚು ಕುತೂಹಲಕಾರಿಯಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/236–37**

**ಗೊಂದಲಕ್ಕೆ ಮತ್ತು ಅಸ್ಪಷ್ಟತೆಗೆ ಒಂದು ಆಂತರಿಕ ಪರಿಹಾರ**

ವ್ಯಾಪಕವಾದ ನೋಟದಿಂದಲೂ ಸಹ ನಾವು ವಿಷಯಗಳನ್ನು ಎಂದಿಗೂ ತಿಳಿದುಕೊಳ್ಳಲಾಗುವುದಿಲ್ಲ: ನಾವು ವಿಷಯಗಳನ್ನು ಭಾಗಶಃ ಮಾತ್ರ ತಿಳಿದುಕೊಳ್ಳಬಹುದು ನಿಜವಾಗಿಯೂ ಭಾಗಶಃ. ಆದ್ದರಿಂದ ನಮ್ಮ ಗಮನವು ಈ ಕಡೆ ಮತ್ತು ಆ ಕಡೆ ಸೆಳೆಯಲ್ಪಡುತ್ತದೆ, ಆದಾಗ್ಯೂ ಬೇರೆ ವಿಷಯಗಳು ಅಲ್ಲಿರುತ್ತವೆ. ಅಪಾಯಕಾರಿ ಮತ್ತು ವಿಪತ್ತಿನ ವಿಷಯಗಳಿಗೆ ಹೆಚ್ಚು ಮಹತ್ವ ಕೊಡುವುದರಿಂದ, ಅವುಗಳಿಗೆ ನೀವು ಬಲವನ್ನು ಮಾತ್ರ ತುಂಬುತ್ತೀರಿ.

ನೀವು ಇಂಥ ಅಸ್ವಸ್ಥತೆಯಿಂದ ಮತ್ತು ಗೊಂದಲಗಳಿಂದ ದಾಳಿ ಮಾಡಲ್ಪಟ್ಟಾಗ, ನೀವು ಒಂದೇ ಒಂದು ಸಂಗತಿಯನ್ನು ಮಾಡಬೇಕು. ಅದೇನೆಂದರೆ, ಏಕಮಾತ್ರ ಅಸ್ತಿತ್ವವನ್ನು (ಪುರುಷ) ನೋಡಿದಾಗ, ಆ ಪ್ರಜ್ಞೆಯನ್ನು ಪ್ರವೇಶಿಸುವುದು, ಏಕಪ್ರಜ್ಞೆ, ಏಕಸಾಮರ್ಥ್ಯ – ಅಲ್ಲಿ ಬರೀ ಒಂದು ಐಕ್ಯತೆ ಮಾತ್ರ ಇದೆ – ಮತ್ತು ಈ ಐಕ್ಯತೆಯಲ್ಲಿ ಎಲ್ಲವೂ ಸಂಭವಿಸುತ್ತಿರುತ್ತದೆ. ನಮ್ಮ ಅತ್ಯಲ್ಪ ದೃಷ್ಟಿಕೋನಗಳು ಮತ್ತು ತಿಳುವಳಿಕೆಗಳು ಮತ್ತು ತೀರ್ಪುಗಳು ಮತ್ತು... ಅವೆಲ್ಲವೂ ಏನೂ ಅಲ್ಲ, ಎಲ್ಲರ ಮೇಲೆ ಪ್ರಭುತ್ವ ಹೊಂದಿರುವ ಪ್ರಜ್ಞೆಯೊಂದಿಗೆ ಹೋಲಿಸಿದರೆ ಇದು ಸೂಕ್ಷ್ಮವಾಗಿರುತ್ತದೆ.

ಆದ್ದರಿಂದ, ವ್ಯಕ್ತಿಗಳು ಅಸ್ತಿತ್ವದಲ್ಲಿದ್ದ ಕಾರಣದ ಬಗ್ಗೆ ಕನಿಷ್ಠ ವಿವೇಕ ನಮಗಿದ್ದರೆ, ಅದು ಕೇವಲ ಆಕಾಂಕ್ಷೆಯನ್ನು ಅನುಮತಿಸುವುದಕ್ಕಾಗಿ, ಆಕಾಂಕ್ಷೆಯ ಅಸ್ತಿತ್ವಕ್ಕಾಗಿ, ಸ್ವಯಂ–ಕೊಡುವಿಕೆಯ, ಶರಣಾಗತಿಯ, ನಂಬಿಕೆಯ ಮತ್ತು ಶ್ರದ್ಧೆಯ ಈ ಚಳುವಳಿಯದು ಎನ್ನುವುದನ್ನು ನಾವು ಕಾಣುತ್ತೇವೆ. ವ್ಯಕ್ತಿಗಳನ್ನು ರೂಪಿಸಲು ಇರುವ ನಿಜವಾದ ಕಾರಣವಿದು: ತದನಂತರ, ಎಲ್ಲ ಪ್ರಾಮಾಣಿಕತೆಯಲ್ಲಿ ಮತ್ತು ತೀವ್ರತೆಯಲ್ಲಿ ಅದು ನೀವಾಗಬೇಕಾದರೆ... ಅದೆಲ್ಲದರ ಅಗತ್ಯವಿದೆ.

ಬೇಕಾಗಿದ್ದೆಲ್ಲವೂ ಅದು, ಅದು ಒಂದೇ ವಸ್ತು (ವಿಷಯ), ಉಳಿಯುವ ಏಕೈಕ ವಿಷಯ, ಉಳಿದ ಎಲ್ಲಾ... ಭ್ರಾಮಕ ಅಥವಾ ನಿಜ ಆಕೃತಿಯ ಪ್ರದರ್ಶನ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/184–85**

*ನಿರಂತರವಾಗಿ ದೈವೀ ಸಮ್ಮುಖದಲ್ಲಿ ಬಾಳು; ನಿನ್ನನ್ನು ಚಲಿಸುವ ಮತ್ತು ನೀನು ಮಾಡುವ ಪ್ರತಿಯೊಂದನ್ನು ಮಾಡುವುದು ಈ ಉಪಸ್ಥಿತಿಯು ಎನ್ನುವ ಭಾವನೆಯೊಂದಿಗೆ ಬದುಕು. ನಿನ್ನ ಎಲ್ಲ ಚಲನೆಗಳನ್ನು ಅದಕ್ಕೆ ಸಮರ್ಪಿಸು, ಬರೀ ಬೌದ್ಧಿಕ ಕ್ರಿಯೆಗಳು ಪ್ರತಿ ಯೋಚನೆ ಮತ್ತು ಭಾವನೆ ಮಾತ್ರವಲ್ಲದೆ, ಅತ್ಯಂತ ಸಾಧಾರಣವಾದ ಮತ್ತು ತಿನ್ನುವಂತಹ ಬಾಹ್ಯ–ಕ್ರಿಯೆಗಳೂ ಸಹ; ನೀನು ತಿಂದಾಗ, ದೇವರು ನಿನ್ನ ಮುಖಾಂತರ ತಿನ್ನುತ್ತಿದ್ದಾನೆ ಎಂದು ನೀನು ಭಾವಿಸಬೇಕು. ನಿನ್ನ ಎಲ್ಲ ಚಲನವಲನಗಳನ್ನು ಒಂದೇ ಜೀವನದಲ್ಲಿ ಸಂಗ್ರಹಿಸುವಾಗ, ನಿನ್ನಲ್ಲಿ ವಿಭಜನೆಯ ಬದಲು ಐಕ್ಯತೆ ಇರುತ್ತದೆ.*

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/23–24**

# ಸಮಗ್ರ ಯೋಗ

– ಅನುವಾದ: ಡಾ॥ ಬಲಭೀಮ ಭೀಡ, ರಾಯಚೂರು

## ಸಮೂಹಗಳ ಪ್ರಕಾರಗಳು ಮತ್ತು ಆತ್ಮಜ್ಞಾನಿಗಳ ಸಮುದಾಯಗಳು

ಧಾರ್ಮಿಕ ಸಮುದಾಯಗಳ ಉದಾಹರಣೆ ತೆಗೆದುಕೊಂಡರೆ, ಅಲ್ಲಿ ಇರುವ ಎಲ್ಲಾ ಚಿಹ್ನೆಗಳು ಲಕ್ಷಣಗಳು ಒಂದೇ ರೀತಿಯವು, ಸನ್ಯಾಸಿಗಳಿಗಾಗಿ ಒಂದೇ ನಮೂನೆಯ ಕಟ್ಟಡಗಳು, ಒಂದೇ ನಮೂನೆಯ ಬಟ್ಟೆ, ಒಂದೇ ತೆರನಾದ ಆಚರಣೆ, ಒಂದೇ ರೀತಿಯ ಕ್ರಿಯೆ, – ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಎಲ್ಲರೂ ಒಂದೇ ರೀತಿಯ ಸಮವಸ್ತ್ರ ಧರಿಸುತ್ತಾರೆ, ಒಂದೇ ಸಮಯಕ್ಕೆ ಏಳುತ್ತಾರೆ, ಒಂದೇ ರೀತಿಯ ಆಹಾರ ಉಣ್ಣುತ್ತಾರೆ, ಒಂದೇ ಪ್ರಾರ್ಥನೆ ಹೇಳುತ್ತಾರೆ, ಹೀಗೆ ಎಲ್ಲರೂ ಒಂದೇ ರೀತಿಯಲ್ಲಿ ಇರುತ್ತಾರೆ. ಅದೇ ರೀತಿ ಅಂತರಂಗದಲ್ಲಿ ಕೂಡ ಒಂದೇ ತೆರನಾದ ಮಾನಸಿಕ ಗೊಂದಲ ಇರುತ್ತದೆ, ಪ್ರತಿಯೊಬ್ಬರೂ ತಮ್ಮದೇ ಆದ ರೀತಿಯಲ್ಲಿ ಮುಂದುವರಿಯುತ್ತಾರೆ. ಏಕೆಂದರೆ ಈ ರೀತಿಯ ಏಕರೂಪತೆಯು ಕೇವಲ ನಂಬಿಕೆ ಮತ್ತು ಸಿದ್ಧಾಂತಗಳಿಗೆ ಮಾತ್ರ ಸೀಮಿತವಾಗಿದ್ದು ಇದು ಒಂದು ವಿಧದಲ್ಲಿ ಭ್ರಮಾತ್ಮಕ ಏಕತೆಗೆ ದಾರಿ ಮಾಡಿಕೊಡುತ್ತದೆ.

ಎಲ್ಲಾ ಮಾನವ ಸಮೂಹಗಳಲ್ಲಿಯೂ ಇದೇ ಪರಿಸ್ಥಿತಿ ಇರುತ್ತದೆ. ಎಲ್ಲರೂ ಒಂದೆಡೆ ಸೇರಿ ಒಂದು ಗುಂಪಿನಲ್ಲಿ ವಾಸ ಮಾಡುವುದು, ಒಂದು ಸಾಮಾನ್ಯ ಆದರ್ಶ, ಕಾರ್ಯ, ಅದರ ಸಿದ್ಧಿಗಾಗಿ ಶ್ರಮಿಸುವುದು ಇದು ಸಾಮಾನ್ಯ. ಆದರೆ ಇದು ಕೃತ್ರಿಮವಾಗಿರುತ್ತದೆ. ಇದಕ್ಕೆ ವಿರುದ್ಧವಾಗಿ, ಶ್ರೀ ಅರವಿಂದರು ಹೇಳುವಂತೆ, ನಿಜವಾದ ಸಮುದಾಯವು – ಇದನ್ನು ಅವರು ಆತ್ಮಜ್ಞಾನಿಗಳ ಸಮೂಹ ಎಂದು ಕರೆಯುತ್ತಾರೆ – ಸದಸ್ಯರ ವೈಯಕ್ತಿಕ ಆಂತರಿಕ ಸಾಕ್ಷಾತ್ಕಾರದ ಮೇಲೆ ನಿರ್ಭರವಾಗಿರುತ್ತದೆ, ಎಲ್ಲರೂ ತಮ್ಮ ತಮ್ಮ ನೈಜ ಸತ್ತೆಯನ್ನು ಕಂಡುಕೊಂಡಿರಬೇಕು, ಗುಂಪಿನಲ್ಲಿ ಇರುವ ಎಲ್ಲಾ ಸದಸ್ಯರ ಜೊತೆ ತಾದಾತ್ಮ್ಯ ಹೊಂದಿರಬೇಕು, ಎಲ್ಲರೂ ಒಂದೇ, ಎಲ್ಲರೂ ತನ್ನೊಳಗೆಯೇ ಇದ್ದಾರೆ, ತಾನು ಎಲ್ಲರೊಳಗೂ ಇದ್ದೇನೆ ಎಂಬುದನ್ನು ಅರಿತುಕೊಂಡಿರಬೇಕು. ಪ್ರತಿಯೊಬ್ಬರೂ ತಮ್ಮದೇ ಆದ ರೀತಿಯಲ್ಲಿ ಸಮೂಹದ ಜೊತೆ ಒಂದಾಗಿದ್ದಾರೆ ಎನ್ನುವುದಕ್ಕಿಂತ ಎಲ್ಲರೂ ಎಲ್ಲರ ಜೊತೆ, ಇಡೀ ಸಮೂಹದ ಜೊತೆ ಒಂದಾಗಿದ್ದಾರೆ

ಎನ್ನುವಂತಿರಬೇಕು. ಪ್ರತಿಯೊಬ್ಬರಿಗೂ ಎಲ್ಲರೂ ತಮ್ಮ ಶರೀರದಷ್ಟು ಆತ್ಮೀಯ ಎನಿಸಬೇಕು. ಇಂಥ ಭಾವನೆ ಕೃತಕ ಅಥವಾ ಕೇವಲ ಮಾನಸಿಕವಾಗಿರದೇ ಆಂತರಿಕ ಪ್ರಜ್ಞೆಯ ಸ್ತರದಲ್ಲಿ ಕೂಡ ಗಾಢ ಅನುಭವ ಆಗಬೇಕು.

ಆದರೆ ಇಂಥ ಆತ್ಮಜ್ಞಾನಿಗಳ ಸಂಘವನ್ನು ರೂಪಿಸುವ ಪೂರ್ವದಲ್ಲಿ ವ್ಯಕ್ತಿಯು ಮೊದಲು ತನ್ನ ಆತ್ಮ ಸಾಕ್ಷಾತ್ಕಾರ ಮಾಡಿಕೊಂಡಿರಬೇಕು, ಅಥವಾ ಆ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿರಬೇಕು. ಅಂದರೆ ವೈಯಕ್ತಿಕ ಸಾಧನೆ ಹಾಗೂ ಸಾಮೂಹಿಕ ಸಾಧನೆ ಜೊತೆ ಜೊತೆಯಾಗಿ ಸಾಗಬೇಕು. ಆದರೆ, ಇಂಥ ಗುಂಪು ಅಥವಾ ಸಮೂಹಗಳಲ್ಲಿ ಸಾಮಾನ್ಯವಾಗಿ ಆಗುವುದೇನೆಂದರೆ ವೈಯಕ್ತಿಕ ಪ್ರಗತಿ ತುಸು ಕುಂಠಿತವಾಗುತ್ತದೆ, ಸಾಮೂಹಿಕತೆಯ ದೆಸೆಯಿಂದ ತುಸು ಹಿನ್ನಡೆ ಅನುಭವಿಸಬೇಕಾಗಿ ಬರುತ್ತದೆ. ವ್ಯಕ್ತಿ ಮತ್ತು ಸಮೂಹದ ನಡುವೆ ಒಂದು ರೀತಿಯ ಪರಸ್ಪರ ಅವಲಂಬನೆಯ ಸಂಬಂಧ ಇರುತ್ತದೆ, ಅದನ್ನು ಯಾರೂ ಮೀರಲಾಗುವುದಿಲ್ಲ. ಏನೇ ಮಾಡಿದರೂ ಅದರಿಂದ ಪಾರಾಗಲು ಬರುವುದಿಲ್ಲ. ಒಬ್ಬ ವ್ಯಕ್ತಿಯು ಯೋಗ ಸಾಧನೆಯಲ್ಲಿ ಬಾಹ್ಯ ಮತ್ತು ಮಾನವ ಸಹಜ ಪ್ರಜ್ಞಾ ಸ್ತರದಲ್ಲಿ ಈ ರೀತಿ ಸಂಪೂರ್ಣವಾಗಿ ಪಾರಾಗಲು, ಮುಕ್ತನಾಗಲು ಯತ್ನಿಸಿದರೆ, ಕನಿಷ್ಠ ಪಕ್ಷ ತನ್ನ ಅವಚೇತನದ ಸ್ತರದಲ್ಲಾದರೂ ಇಂಥ ಸಾಮೂಹಿಕ ಸ್ಥಿತಿಗೆ ಕಟ್ಟುಬೀಳುತ್ತಾನೆ. ಮತ್ತು ಅಂಥ ಬಂಧನ ಅವನನ್ನು ಹಿಂದಕ್ಕೆ ಎಳೆಯುತ್ತದೆ, ಅವನ ಪ್ರಗತಿಗೆ ತಡೆಯುಂಟುಮಾಡುತ್ತದೆ. ಅಂಥ ವ್ಯಕ್ತಿಯು ತೀವ್ರವಾಗಿ ಪ್ರಗತಿ ಸಾಧಿಸಲು ಪ್ರಯತ್ನ ಮಾಡಿದರೂ, ಎಲ್ಲಾ ಹೊಣೆಗಾರಿಕೆ, ಮೋಹ–ಆಕರ್ಷಣೆಗಳ ಬಂಧನವನ್ನು ಕಳಚಿ ಹಾಕಿಬಿಡಲು ಯತ್ನಿಸಿದರೂ, ಅವನ ಸಾಧನೆ ಎತ್ತರದಲ್ಲಿ ಇದ್ದರೂ, ವಿಕಾಸದ ಪಥದಲ್ಲಿ ಮುಂಚೂಣಿಯಲ್ಲಿ ಇದ್ದರೂ ಸಹ, ಸಾಮೂಹಿಕ ಸಾಕ್ಷಾತ್ಕಾರಕ್ಕೆ ಅವನು ಬದ್ಧನಾಗಿರುತ್ತಾನೆ. ಇಂಥ ಅವಲಂಬನೆಯು ಅವನನ್ನು ಹಿಂದಕ್ಕೆ ಎಳೆಯುತ್ತದೆ, ಎಷ್ಟರ ಮಟ್ಟಿಗೆ ಅಂದರೆ, ಯಾವ ಸಾಕ್ಷಾತ್ಕಾರಕ್ಕಾಗಿ ಅವನು ಸಾಧನೆ ಮಾಡುತ್ತಿರುತ್ತಾನೋ ಅದಕ್ಕಾಗಿ ಈ ಭೂಮಿ ಸಿದ್ಧವಾಗಲು, ಕೆಲಸಲ ಶತಮಾನಗಳವರೆಗೆ ಕಾಯಬೇಕಾಗಿ ಬರುತ್ತದೆ.

ಅಂತೆಯೇ, ಶ್ರೀ ಅರವಿಂದರು ಒಂದೆಡೆ ಹೇಳುತ್ತಾರೆ, ಎರಡೂ ಪ್ರಕಾರದ ಚಲನೆಗಳೂ ಅವಶ್ಯಕ. ವೈಯಕ್ತಿಕ ಪ್ರಗತಿ ಮತ್ತು ಆತ್ಮ ಸಾಕ್ಷಾತ್ಕಾರಕ್ಕಾಗಿ ಮಾನವನು ಮಾಡುವ ಪ್ರಯತ್ನವು ಇಡೀ ಮಾನವ ಸಮುದಾಯವನ್ನು ಮೇಲ್‌ಸ್ತರಕ್ಕೆ ಎತ್ತರಿಸಲು ಪೂರಕವಾಗಿರಬೇಕು. ವೈಯಕ್ತಿಕ ಪ್ರಗತಿ ಆಗಬೇಕಾದರೆ

ಸಮುದಾಯದ ಪ್ರಗತಿಯೂ ಅನಿವಾರ್ಯವಾಗಿರುವುದರಿಂದ ಎರಡನ್ನೂ ಸಾಧಿಸಲು ಕಟಿಬದ್ಧವಾಗಿರಬೇಕು. ಇಂಥ ಸಾಮೂಹಿಕ ಪ್ರಗತಿಯು ವೈಯಕ್ತಿಕ ಪ್ರಗತಿಯ ಹೆಜ್ಜೆಗಳನ್ನು ಬಲಪಡಿಸುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/141–42**

**ಸಾಮೂಹಿಕ ಗುಂಪುಗಳ ಶಕ್ತಿ**

ಕೆಲ ವ್ಯಕ್ತಿಗಳು ಒಂದು ಆದರ್ಶ, ಒಂದು ಬೋಧನೆ, ತಾವು ಸಾಧಿಸಬೇಕು ಎಂದುಕೊಂಡ ಕೆಲಸಕ್ಕಾಗಿ ಒಂದೆಡೆ ಸೇರಿ ಒಂದು ಗುಂಪು ಕಟ್ಟಿಕೊಳ್ಳುತ್ತಾರೆ. ಅವರ ನಡುವೆ ಒಂದು ಸಂಘಟನಾತ್ಮಕ ಸಂಬಂಧ ಇರುತ್ತದೆ. ಒಂದೇ ಉದ್ದೇಶ, ಒಂದೇ ಸಂಕಲ್ಪ, ಒಂದೇ ಅಭೀಪ್ಸೆ, ಒಂದೇ ನಂಬಿಕೆಯ ಸುತ್ತ ಅವರು ಸೇರಿರುತ್ತಾರೆ. ಒಂದೆಡೆ ಸೇರಿ ವ್ಯವಸ್ಥಿತವಾಗಿ ಧ್ಯಾನ ಪ್ರಾರ್ಥನೆ ಅಧ್ಯಯನ ಮಾಡುತ್ತಾರೆ. ಅವರ ಗುರಿಯು ಹಿರಿದಾಗಿದ್ದು ಸಂಘಟನೆಯೂ ಚೆನ್ನಾಗಿದ್ದರೆ ಅಂಥ ಸಂಘಟನೆಗಳು ಜಾಗತಿಕ ಘಟನೆಗಳ ಮೇಲೆ ಕೂಡ ಗಮನಾರ್ಹ ಪ್ರಭಾವ ಬೀರಬಲ್ಲವು. ವ್ಯಕ್ತಿಗಳ ಆಂತರಿಕ ಬೆಳವಣಿಗೆಯ ಜೊತೆಗೆ ಸಮೂಹದ ಅಭಿವೃದ್ಧಿಯೂ ಆಗುವುದು. ಇಂಥ ಗುಂಪುಗಳು ಉಳಿದ ಎಷ್ಟೋ ಗುಂಪುಗಳಿಗಿಂತ ಬಹುಪಾಲು ಶ್ರೇಷ್ಠ ಹಾಗೂ ಉತ್ತಮ. ಆದರೆ ಇಲ್ಲಿ ಉಳಿದ ಗುಂಪುಗಳಲ್ಲಿರುವಂಥ ಕುರುಡು ಶಕ್ತಿ ಇರುವುದಿಲ್ಲ. ಅಲ್ಲಿರುವ ತೀವ್ರತೆ, ಉದ್ರೇಕಗಳ ಬದಲಾಗಿ ಇಲ್ಲಿ ಉದ್ದೇಶದ ಅರಿವು ಇರುವ ಪೂರ್ಣ ಪ್ರಜ್ಞೆ ಇರುತ್ತದೆ.

ಇಂಥ ಅನೇಕ ಸಂಘಟನೆ, ಗುಂಪುಗಳನ್ನು ನಾವು ಇತಿಹಾಸದಲ್ಲಿ ಆವಾಗಾವಾಗ ಕಾಣುತ್ತಲೇ ಇರುತ್ತೇವೆ. ಅವುಗಳ ಪೈಕಿ ಕೆಲವು ಬಹುಕಾಲ ಬದುಕಿವೆ, ಜಾಗತಿಕ ಮಟ್ಟದಲ್ಲಿ ಬಹು ಪರಿಣಾಮವನ್ನೂ ಬೀರಿವೆ. ಆದರೆ, ಸಾಮಾನ್ಯವಾಗಿ ಇಂಥ ಗುಂಪುಗಳು ಯಶಸ್ಸು ಕಾಣುವುದು ಕಡಿಮೆ. ಗುಂಪುಗಳಿಗಿಂತ ಯಾರೋ ಕೆಲ ವ್ಯಕ್ತಿಗಳು ಖ್ಯಾತ ಬಾಗುವುದು ಹೆಚ್ಚು. ಸಮೂಹಗಳು ಯಾವಾಗಲೂ ಸಂಶಯಾಸ್ಪದವಾಗಿ ನೋಡಲ್ಪಡುವುದೇ ಹೆಚ್ಚು. ಎಷ್ಟೋ ಸಲ ಅಂಥ ಗುಂಪುಗಳ ಮೇಲೆ ಹಲ್ಲೆಗಳಾಗುವುದೂ ಉಂಟು. ಎಷ್ಟೋ ಸಂಘಟನೆಗಳು ಕ್ರೂರ ಹಿಂಸೆಗೊಳಗಾಗಿ ನಾಶವಾಗಿದ್ದೂ ಉಂಟು – ಅದೂ ಯಾವ ಸಕಾರಣವೂ ಇಲ್ಲದೇ! ವಿನಾಕಾರಣ ಅಜ್ಞಾನದ ಕೃತ್ಯಗಳ ದೆಸೆಯಿಂದ

ನಾಶವಾಗಿರುವುದುಂಟು... ಕೆಲವೊಂದು ಅರೆ ಧಾರ್ಮಿಕ, ಅರೆ ಸಾಹಸದ ಗುಂಪುಗಳು ನಿರ್ದಿಷ್ಟ ಗುರಿ, ನಂಬಿಕೆ, ಮತ ಹಾಗೂ ಉದ್ದೇಶದಿಂದ ನಿರ್ಮಾಣವಾಗಿ ಜಾಗತಿಕ ಇತಿಹಾಸದಲ್ಲಿ ಮಹತ್ವದ ಪಾತ್ರ ವಹಿಸಿದ್ದೂ ಇದೆ. ಅಂಥವು ನಿಶ್ಚಿತವಾಗಿಯೂ ವೈಯಕ್ತಿಕ ಪ್ರಯತ್ನದ ಮೂಲಕ ಸಾಮೂಹಿಕ ಪ್ರಗತಿ ಸಾಧಿಸಿರುವುದು ಸ್ಪಷ್ಟ.

ಆದರ್ಶವಾದ ಸಂಘಟನೆ ಹೇಗಿರುತ್ತದೆ ಅಂದರೆ, ಅಲ್ಲಿ ಅತಿ ಪ್ರಬಲವಾದ ಏಕತೆ ಇರುತ್ತದೆ, ಎಲ್ಲ ಸದಸ್ಯರ ಗುರಿ ಒಂದೇ ಆಗಿರುತ್ತದೆ, ಒಂದೇ ಸಂಕಲ್ಪ ಇರುತ್ತದೆ, ಪ್ರತಿಯೊಬ್ಬರ ಆಂತರಿಕ ಸಾಧನೆ ಸಾಕಷ್ಟು ಆಗಿರುತ್ತದೆ, ಅದರಿಂದಾಗಿ, ಆಂತರಿಕ ಏಕತೆ, ಉದ್ದೇಶ, ಪ್ರೇರಣೆ, ಅಭೀಪ್ಸೆ ಹಾಗೂ ಕಾರ್ಯದ ಅನುರೂಪ ಪ್ರಮಾಣದಲ್ಲಿ ಸುಸಂಬದ್ಧ ಸಂಘಟನೆ ನಿರ್ಮಾಣವಾಗಿರುತ್ತದೆ.

ಈ ಉಪಕ್ರಮದ ಮೂಲಕ ಅನೇಕ ಕೇಂದ್ರಗಳು, ಗುಂಪುಗಳು ಸ್ಥಾಪಿತವಾಗಿವೆ, ಹೆಚ್ಚು ಕಡಿಮೆ ಯಶಸ್ವಿಯಾಗಿವೆ. ಅಂತೆಯೇ ಸಾಂಪ್ರದಾಯಿಕ ಪದ್ಧತಿಗಳಲ್ಲಿ ಇಂಥ ಕೇಂದ್ರಗಳನ್ನು ಅತಿ ಸಶಕ್ತ ಉಪಕರಣಗಳೆಂದು ಪರಿಗಣಿಸಲಾಗಿದೆ.

ಸಾಮೂಹಿಕ ಸಂಘಟನೆಗಳು ವೈಯಕ್ತಿಕ ವ್ಯಕ್ತಿಯಂತೆ ಅಷ್ಟೇ ಸುಸಂಬದ್ಧವಾಗಿ ಬೆಳೆಯುವುದು ಸಾಧ್ಯವಾದರೆ, ಅವು ವೈಯಕ್ತಿಕ ಶಕ್ತಿ ಹಾಗೂ ಕಾರ್ಯವನ್ನು ನೂರಾರು ಪಾಲು ಹೆಚ್ಚಿಸುವುವು.

ಸಾಮಾನ್ಯವಾಗಿ ಅನೇಕ ವ್ಯಕ್ತಿಗಳನ್ನು ಒಂದೆಡೆ ಸೇರಿಸಿದಾಗ, ಇಡೀ ಗುಂಪಿನ ಗುಣಾತ್ಮಕತೆಯು ವೈಯಕ್ತಿಕ ವ್ಯಕ್ತಿಯ ಗುಣಾತ್ಮಕತೆಗಿಂತ ಯಾವಾಗಲೂ ಕಡಿಮೆಯೇ ಆಗಿರುವುದು ಸಹಜ. ಆದರೆ, ಪ್ರಜ್ಞಾಪೂರ್ವಕವಾಗಿ, ಪರಸ್ಪರ ಸಹಕಾರದಿಂದ ಸಂಘಟನೆಯನ್ನು ಬೆಳೆಸಿದರೆ ಅದರಿಂದ ವ್ಯಕ್ತಿಯ ಕಾರ್ಯ ಸಾಮರ್ಥ್ಯ ಕೂಡ ನೂರಾರು ಪಟ್ಟು ವೃದ್ಧಿಯಾಗುವುದು ಸಾಧ್ಯವಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/369–70**

**ಪ್ರತಿನಿಧಿ – ಗುಂಪು**

ಒಬ್ಬ ವ್ಯಕ್ತಿ ತಾನೊಬ್ಬನೇ ಏಕಾಂಗಿಯಾಗಿ ಪರಿಪೂರ್ಣತೆಯನ್ನು ಪಡೆಯಬಹುದು. ಆಂತರಿಕ ಪ್ರಜ್ಞಾ ಸ್ತರದಲ್ಲಿ ಅನಂತನಾಗಿ, ಪರಿಪೂರ್ಣನಾಗಿ

ಬೆಳೆಯಬಹುದು. ಆದರೆ ಒಂದು ಗುಂಪು ಅಥವಾ ಸಮೂಹ ಎಂದು ಬಂದಾಗ, ಅದು ಯಾವಾಗಲೂ ಸೀಮಿತವಾಗಿಯೇ ಇರುತ್ತದೆ.

ನಿಮಗೆ ಅರ್ಥವಾಗುವುದೋ ಇಲ್ಲವೋ ತಿಳಿಯದು ಆದರೆ ವೈಯಕ್ತಿಕ ಸಿದ್ಧಿಗೆ ಒಂದು ಮಿತಿ ಎಂದು ಇರುವುದಿಲ್ಲ. ತನ್ನಷ್ಟಕ್ಕೆ ತಾನು ಅಂತರಂಗದಲ್ಲಿ ಅನಂತನಾಗಿ, ಪರಿಪೂರ್ಣನಾಗಿ ಇರಲು ಸಾಧ್ಯವಿದೆ. ಆದರೆ ಬಾಹ್ಯ ಸಿದ್ಧಿಯು ಮಾತ್ರ ಯಾವಾಗಲೂ ಸೀಮಿತವಾಗಿಯೇ ಇರುತ್ತದೆ. ಎಲ್ಲರೂ ಪರಿಪೂರ್ಣ–ರಾಗಬೇಕು ಅಂದರೆ ಅತಿ ಕನಿಷ್ಠ ಸಂಖ್ಯೆಯ ವ್ಯಕ್ತಿಗಳಾದರೂ ಬೇಕು.

ಹಳೆಯ ಸಂಪ್ರದಾಯಗಳ ಪ್ರಕಾರ ಹನ್ನೆರಡು ಜನ ಸಾಧಕರು ಇದ್ದರೆ ಸಾಕು. ಆದರೆ ಆಧುನಿಕ ಜೀವನದ ಸಂಕೀರ್ಣತೆಯನ್ನು ನೋಡಿದಾಗ ಇದು ಸಾಕಾಗುವುದಿಲ್ಲ ಎನಿಸುತ್ತದೆ. ಆ ರೀತಿ ಕೆಲಸ ಮಾಡಬಲ್ಲ, ಸಾಧನೆ ಮಾಡಬಲ್ಲ ಒಂದು ಪ್ರತಿನಿಧಿ ಗುಂಪಾದರೂ ಬೇಕೇಬೇಕು ಎನಿಸುತ್ತದೆ. ಅಂದರೆ.. ನಿಮಗೆ ಇದು ಗೊತ್ತಿಲ್ಲ, ನೀವು ಇದನ್ನು ಕಲ್ಪಿಸಿಕೊಳ್ಳುವುದು ಕೂಡ ಕಠಿಣ, ಆದರೆ ನೀವು ಪ್ರತಿಯೊಬ್ಬರೂ ಒಂದೊಮ್ಮೆ ಕಠಿಣತೆ, ಒಂದೊಂದು ಅಡ್ಡಿಯನ್ನು ಪ್ರತಿನಿಧಿಸುತ್ತೀರಿ. ಮತ್ತು ನೀವು ಅದನ್ನು ಗೆಲ್ಲಲೇಬೇಕು, ಪರಿವರ್ತಿಸಲು ಪ್ರಯತ್ನ ಮಾಡಲೇಬೇಕು. ಅದರಿಂದಾಗಿ ಇನ್ನೂ ಹೆಚ್ಚು ಕಠಿಣತೆಗಳು ಎದುರಾಗುವುದು. (ಶ್ರೀಮಾತೆಯವರು ನಗುತ್ತಾರೆ) ನಾನೆಲ್ಲೋ ಬರೆದಿರುವಂತಿದೆ... ಬಹುಶಃ ಹೇಳಿದ್ದೇನೆಂದು ತೋರುತ್ತದೆ.. ಕಠಿಣತೆ ಎನ್ನುವುದಕ್ಕಿಂತ ಹೆಚ್ಚಾಗಿ, ಪ್ರತಿಯೊಬ್ಬರೂ ಒಂದೊಂದು ಅಸಾಧ್ಯತೆಯನ್ನೇ ಪ್ರತಿನಿಧಿಸುತ್ತಾರೆ. ಮತ್ತು ಈ ಅಸಾಧ್ಯ ಅನ್ನುವುದನ್ನು ಗೆಲ್ಲಲೇಬೇಕಾಗಿದೆ. ಅಸಾಧ್ಯತೆಗಳ ಸಮೂಹವನ್ನೇ ಪರಿವರ್ತಿಸಬೇಕಾಗಿದೆ, ಸಾಕ್ಷಾತ್ಕಾರದ ಕಡೆಗೆ ಒಯ್ಯಬೇಕಾಗಿದೆ. ಪ್ರತಿ ವ್ಯಕ್ತಿಯೂ ಒಂದು ಅಸಾಧ್ಯತೆಯೇ, ಆದರೆ ಎಲ್ಲ ಅಸಾಧ್ಯತೆಗಳನ್ನೂ ಗೆಲ್ಲಲೇಬೇಕು, ಪರಿವರ್ತಿಸಲೇಬೇಕು. ಯಾವಾಗ ಈ ಎಲ್ಲಾ ಅಸಾಧ್ಯಗಳು ಪರಿವರ್ತಿತವಾಗುವುವೋ ಆಗ ಮಾತ್ರ ಆ ದಿವ್ಯ ಕಾರ್ಯ ಪೂರ್ಣವಾಗುವುದು.

ನಾನು ಈಗ ತುಸು ಸೌಮ್ಯವಾದ ಶಬ್ದಗಳಲ್ಲಿ ಹೇಳುತ್ತೇನೆ. ಅಸಾಧ್ಯ ಎಂಬ ಶಬ್ದವನ್ನು ಹಿಂತೆಗೆದುಕೊಂಡು ಕಠಿಣತೆ ಎಂಬ ಶಬ್ದ ಪ್ರಯೋಗ ಮಾಡುತ್ತೇನೆ. ಏಕಂದರೆ ಅದು ಈಗ ಅಸಾಧ್ಯವಾಗಿ ಉಳಿಯುವುದಿಲ್ಲ.

ಮೊದಲಿನಿಂದಲೂ ಮತ್ತು ಈಗಲೂ ಕೂಡ, ನಮ್ಮ ಗುಂಪು, ನಮ್ಮ ಸಮೂಹ ಸಾಕಷ್ಟು ಬೆಳೆದ ನಂತರವೂ ಯಾರಾದರೂ ಬಂದು "ನಾನು ಯೋಗ ಸಾಧನೆ ಮಾಡಲು ಬಂದಿದ್ದೇನೆ" ಎಂದು ಹೇಳಿದರೆ, ನಾನು "ಓಹ್, ಬೇಡ. ಇದು ಅತಿ ಕಠಿಣವಾದುದು. ಉಳಿದ ಎಲ್ಲವುಗಳಿಗಿಂತ ಇದು ಹೆಚ್ಚು ಕಠಿಣ" ಎಂದು ಹೇಳಿ ಬಿಡುತ್ತೇನೆ. ಕಾರಣವೇನೆಂದರೆ ಶ್ರೀ ಅರವಿಂದರೇ ಹೀಗೆ ಹೇಳಿದ್ದಾರೆ.

ಯಾರಾದರೂ ನನ್ನ ಬಳಿಗೆ ಬಂದು "ನಾನು ಕೆಲಸ ಮಾಡಲು ಬಂದಿದ್ದೇನೆ, ನಾನು ಹೆಚ್ಚು ಹೆಚ್ಚು ಉಪಯೋಗಕ್ಕೆ ಬರುವಂತೆ ಆಗಬೇಕು" ಎಂದು ಹೇಳಿದರೆ ಅಡ್ಡಿ ಇಲ್ಲ. ಆದರೆ ಬದಲಾಗಿ "ನನಗೆ ಬಾಹ್ಯದಲ್ಲಿ ತುಂಬಾ ತೊಂದರೆಗಳು ಇವೆ, ಕಠಿಣತೆಗಳು ಇವೆ, ಅವುಗಳನ್ನು ಪರಿಹರಿಸಿಕೊಳ್ಳುವ ಬಗೆ ತಿಳಿಯುತ್ತಿಲ್ಲ. ನನಗೆ ಇಲ್ಲಿ ಏನಾದರೂ ಸಹಾಯ ಆಗಬಹುದು ಎಂದು ಬಂದಿದ್ದೇನೆ." ಎಂದು ಹೇಳಿದರೆ, ನಾನು ಸ್ಪಷ್ಟವಾಗಿ ಹೇಳಿ ಬಿಡುತ್ತೇನೆ, – "ಇಲ್ಲಿ, ಅದಕ್ಕಿಂತ ಹೆಚ್ಚಿನ ತೊಂದರೆ ಇದೆ. ನಿಮ್ಮ ತೊಂದರೆಗಳು ಇನ್ನೂ ಹೆಚ್ಚು ಆಗಬಹುದು" ಮತ್ತು ಅದು ಸತ್ಯ ಕೂಡ. ಏಕೆಂದರೆ ಇಲ್ಲಿ ಕೇವಲ ವೈಯಕ್ತಿಕ ತೊಂದರೆಗಳು ಇರುವುದಿಲ್ಲ ಅಷ್ಟೇ. ಆದರೆ ಬೇರೆ ಬೇರೆ ಸಾಮೂಹಿಕ ತೊಂದರೆಗಳು ಇರುತ್ತವೆ.

ನಿಮಗೆ ಈಗಾಗಲೇ ಇರುವ ತೊಂದರೆಗಳ ಜೊತೆಗೆ ಹೊರಗಿನಿಂದ ಬರುವ ಎಲ್ಲ ತರಹದ ಸಂಘರ್ಷ, ಸಂಪರ್ಕ, ಪ್ರತಿಕ್ರಿಯೆ ಎಲ್ಲವೂ ಇರುತ್ತವೆ. ಅದೊಂದು ಕಠಿಣ ಪರೀಕ್ಷೆಯ ತರಹ. ಸರಿಯಾಗಿ ದುರ್ಬಲವಾಗಿರುವ ಭಾಗದಲ್ಲಿ, ಅಂದರೆ ಪರಿಹಾರ ಮಾಡುವುದು ದುಸ್ತರವಾಗಿರುವ ಕ್ಷೇತ್ರದಲ್ಲಿ ತೊಂದರೆ ತಲೆದೋರುತ್ತದೆ. ಏನನ್ನು ಕೇಳಬಾರದು ಎಂದು ಬಯಸುತ್ತೀರೋ ಅದನ್ನೇ ಕೇಳಬೇಕಾಗಿ ಬರುತ್ತದೆ. ನಿಮಗೆ ದಿಗ್ಭ್ರಮೆಯಾಗುವ ರೀತಿಯಲ್ಲಿ ಯಾರೋ ನಿಮ್ಮೆಡೆಗೆ ಬೊಟ್ಟುಮಾಡಿ ತೋರಿಸುತ್ತಾರೆ. ನೀವು ತುಂಬ ಬಿಕ್ಕಟ್ಟಿನ ಪರಿಸ್ಥಿತಿ ಎದುರಿಸಬೇಕಾಗಿ ಬರುತ್ತದೆ. ಏನು ಆಗಬಾರದು ಎಂದು ಆಶಿಸುತ್ತೀರೋ ಅದೇ ಆಗಿ ಬಿಡುತ್ತದೆ. ಇಂಥ ಪರಿಸ್ಥಿತಿಗಳು ಮೇಲಿಂದ ಮೇಲೆ ಬರಬಹುದು. ಏಕೆಂದರೆ ನೀವು ಇಲ್ಲಿ ಕೇವಲ ನಿಮಗಾಗಿ ಯೋಗ ಸಾಧನೆ ಮಾಡಲು ಬಂದಿರುವುದಿಲ್ಲ, ಎಲ್ಲರ ಸಲುವಾಗಿ ಮಾಡಲು ಬಂದಿರುತ್ತೀರಿ. – ಅದೂ ನೀವೇ ಸ್ವಯಂ ಆಗಿ, ಯಾರೂ ಬಯಸದೇ ಇದ್ದರೂ ಇತರರ ಸಲುವಾಗಿ ನೀವು ಮಾಡುತ್ತಿರುತ್ತೀರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/410–11**

## ಆಶ್ರಮದಲ್ಲಿ ಸಾಮೂಹಿಕ ಜೀವನ

ಮಾನವನ ಬದುಕಿನಲ್ಲಿ ಎಲ್ಲ ತೊಂದರೆ, ಅಸಾಮರಸ್ಯ ಹಾಗೂ ನೈತಿಕ ಯಾತನೆಗಳ ಕಾರಣವೇನೆಂದರೆ ಪ್ರತಿಯೊಬ್ಬರಲ್ಲಿ ಅಹಂ, ಅದರ ಬಯಕೆಗಳು ಹಾಗೂ ಇಷ್ಟಾನಿಷ್ಟಗಳಿರುವುದೇ ಆಗಿದೆ. ನಿರಾಸಕ್ತಿಯಿಂದ ಕರ್ಮ ಮಾಡುವಾಗ, ಬೇರೆಯವರಿಗೆ ಸಹಾಯ ಮಾಡುವಾಗಲೂ ಕೂಡ, ವ್ಯಕ್ತಿಯು ತನ್ನ ಅಹಂದಿಂದ ಮುಕ್ತನಾಗದೇ ಹೋದರೆ, ಅದರ ಬೇಡಿಕೆಗಳಿಂದ ದೂರಾಗದೇ ಹೋದರೆ, ತನ್ನ ಅಹಂನ್ನು ಶಾಂತವಾಗಿ ಒಂದೆಡೆ ಇರಿಸಲು ಕಲಿಯದೇ ಹೋದರೆ ಅವನ ಅಹಂ ಅಸಮಾಧಾನಕರವಾಗಿರುವುದೆಲ್ಲದಕ್ಕೂ ಪ್ರತಿಕ್ರಿಯಿಸುವುದು, ಅಂತರಂಗದಲ್ಲೊಂದು ರೀತಿಯ ಬಿರುಗಾಳಿಯನ್ನೆಬ್ಬಿಸುವುದು, ಹಾಗೂ ಬಾಹ್ಯದಲ್ಲಿ ಬಂದು ಎಲ್ಲ ಕೆಲಸವನ್ನು ಹಾಳುಮಾಡಿ ಬಿಡುವುದು.

ಈ ರೀತಿ ಅಹಂನ್ನು ಗೆಲ್ಲುವುದು ತುಂಬ ನಿಧಾನವಾದ ಹಾಗೂ ಕಠಿಣವಾದ ಕೆಲಸ. ಅದಕ್ಕಾಗಿ ಸದಾ ಜಾಗೃತವಾಗಿರಬೇಕು ಮತ್ತು ನಿರಂತರ ಪ್ರಯತ್ನಬೇಕು. ಇಂಥ ಪ್ರಯತ್ನ ಕೆಲವರಿಗೆ ಸುಲಭವಾಗಿರಬಹುದು, ಕೆಲವರಿಗೆ ತುಂಬ ದುಸ್ತರವಾಗಿರುತ್ತದೆ.

ನಾವೆಲ್ಲ ಈ ಆಶ್ರಮದಲ್ಲಿರುವುದು ಶ್ರೀ ಅರವಿಂದರ ಜ್ಞಾನ ಶಕ್ತಿಯ ಸಹಾಯದಿಂದ ಇದೇ ಕೆಲಸವನ್ನು ಮಾಡಲೆಂದು. ಹೆಚ್ಚಿನ ಸಾಮರಸ್ಯದಿಂದಿರುವ, ಹೆಚ್ಚು ಏಕತೆ ಹೊಂದಿರುವ, ಹಾಗೂ ಪರಿಣಾಮ ಸ್ವರೂಪ ಜೀವನದಲ್ಲಿ ಹೆಚ್ಚಿನ ಪರಿಣಾಮ ಬೀರಬಲ್ಲ ಸಮೂಹವನ್ನು ನಿರ್ಮಾಣ ಮಾಡುವ ಪ್ರಯತ್ನ ನಮ್ಮದು.

ಎಲ್ಲಿಯವರೆಗೆ ನಾನು ನಿಮ್ಮ ನಡುವೆ ಭೌತಿಕವಾಗಿ ಇರುತ್ತೇನೆಯೋ ಅಲ್ಲಿಯವರೆಗೆ ನನ್ನ ಸಾನ್ನಿಧ್ಯವು ನಿಮ್ಮಲ್ಲಿರುವ ಅಹಂನ ಮೇಲೆ ಪ್ರಭುತ್ವ ಸಾಧಿಸಲು ನಿಮಗೆ ಸಹಾಯ ಮಾಡುತ್ತಿರುತ್ತದೆ, ಆದ್ದರಿಂದ ನಾನು ನಿಮ್ಮ ಜೊತೆ ವೈಯಕ್ತಿಕವಾಗಿ ಮಾತನಾಡಬೇಕಾದ ಅವಶ್ಯಕತೆ ಇರುವುದಿಲ್ಲ.

ಆದರೆ ಆ ಪ್ರಯತ್ನವು ಈಗ ವೈಯಕ್ತಿಕ ಅಸ್ತಿತ್ವದ ಆಧಾರವಾಗಿ ಮಾರ್ಪಡಬೇಕು, ವಿಶೇಷವಾಗಿ ನಿಮ್ಮಲ್ಲಿ ಯಾರಿಗೆ ಹೆಚ್ಚಿನ ಬಾಧ್ಯತೆ ಇದೆಯೋ ಹಾಗೂ ಇತರರ ಬಗ್ಗೆ ಕಾಳಜಿ ವಹಿಸಬೇಕಾಗಿದೆಯೋ ಅವರಿಗಂತೂ ಇದು ಅವಶ್ಯವಾಗಿ ಆಗಬೇಕು. ಮುಂದಾಳುಗಳು ಯಾವಾಗಲೂ ಒಂದು ಮಾದರಿ ಉದಾಹರಣೆಯನ್ನು ನಿಲ್ಲಿಸಬೇಕು, ತಮ್ಮ ಕಾಳಜಿಯ ಪರಿಧಿಯಲ್ಲಿ ಯಾರೆಲ್ಲ

ಇದ್ದಾರೆಯೋ, ಅವರೆಲ್ಲ ಯಾವ ಸನ್ಮೌಲ್ಯಗಳನ್ನು ಪಾಲಿಸಬೇಕೆಂದು ಬಯಸುವುರೋ ಅವೆಲ್ಲವನ್ನು ತಾವು ಮೊದಲು ಸರಿಯಾಗಿ ಪಾಲಿಸಬೇಕು. ಅವರು ತಿಳಿವಳಿಕೆಯುಳ್ಳವರಾಗಿರಬೇಕು, ಸಹನಶೀಲರಾಗಿರಬೇಕು, ತಾಳ್ಮೆ–ಯುಳ್ಳವರಾಗಿರಬೇಕು, ಅನುಕಂಪವುಳ್ಳವರಾಗಿರಬೇಕು, ಸಹೃದಯರಾಗಿರಬೇಕು, ಕೇವಲ ತಮಗೆ ಮಿತ್ರರಾಗಿರಬೇಕೆಂಬ ಬಯಕೆಯಿಂದ ಅಹಂದಿಂದ ದೂರ ಇರಬೇಕೆಂದಲ್ಲ, ಬದಲಾಗಿ ಇತರರಿಗೆ ಸಹಾಯ ಮಾಡಬೇಕು, ಅವರನ್ನು ಅರ್ಥೈಸಿಕೊಳ್ಳಬೇಕು ಎಂಬ ಔದರ್ಯದಿಂದ ಹಾಗೆ ಇರಬೇಕು.

ನಾನು ನಿಮ್ಮಿಂದ ಇದನ್ನೇ ಬಯಸುತ್ತೇನೆ, ಅಂದಾಗ ಮಾತ್ರ ನೀವು ನಿಮ್ಮ ನಿಮ್ಮ ಜವಾಬ್ದಾರಿಗಳನ್ನು ಸರಿಯಾಗಿ ನಿಭಾಯಿಸಬಲ್ಲಿರಿ. ಆಗ ನಿಮಗೆ ಗೊತ್ತಾಗುವುದು. ಎಲ್ಲೆಲ್ಲಿ ನಿಮಗೆ ಏಕತೆ ಇಲ್ಲ, ಅವ್ಯವಸ್ಥೆ ಇದೆ ಅನಿಸುತ್ತಿತ್ತೋ ಅಲ್ಲಿ ಅವೆಲ್ಲ ಈಗ ಮಾಯವಾಗಿವೆ. ಮತ್ತು ಆ ಸ್ಥಳದಲ್ಲಿ ಸಾಮರಸ್ತ ಶಾಂತಿ ಮತ್ತು ಆನಂದಗಳು ಮನೆ ಮಾಡಿವೆ ಎಂಬುದು ಅರಿವಾಗುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/355–56**

## ಸ್ವಾತಂತ್ರ್ಯ ಮತ್ತು ಸಾಮೂಹಿಕ ಬದುಕು

*ಸಮುದಾಯದಲ್ಲಿ ಜೀವಿಸುತ್ತಿರುವಾಗ, ತನಗೆ ಬೇಕಾಗಿರುವಂತೆ ಮಾಡದೇ ತನ್ನ ಶಿಸ್ತನ್ನು ತಾನೇ ನಿರ್ಧರಿಸದೇ ಬೇರೆಯವರು ವಿಧಿಸಿದ ನಿಯಮಗಳನ್ನು ಪಾಲಿಸಬೇಕಾಗಿ ಬರುವುದಲ್ಲವೇ?*

ನೀವು ಒಂದು ಸಮೂಹದಲ್ಲಿ ಅಥವಾ ಗುಂಪಿನಲ್ಲಿ ಇರಲು ಬಯಸಿದ್ದೇ ಆದರೆ ನೀವು ಆ ಸಮುದಾಯದ ಅಥವಾ ಗುಂಪಿನ ನಿಯಮಗಳನ್ನು ಅನುಸರಿಸಲೇ ಬೇಕಾಗುವುದು. ಇದು ಸ್ಪಷ್ಟವಾಗಿದೆ. ಅನ್ಯಥಾ ನೀವೇ ಒಂದು ಅವ್ಯವಸ್ಥೆಯ ಗೊಂದಲದ ಅಂಶವಾಗಿ ಬಿಡುವಿರಿ.

ಆದರೆ ಅಂಥ ವ್ಯವಸ್ಥೆಯನ್ನು ಇಚ್ಛಾ ಪೂರ್ವಕವಾಗಿ ಸ್ವೀಕರಿಸಿದ್ದೇ ಆದರೆ ಅದು ಆಂತರಿಕ ಪ್ರಗತಿಗೆ ಎಂದಿಗೂ ಹಾನಿಯುಂಟುಮಾಡುವುದಿಲ್ಲ, ಹಾಗೂ ಉನ್ನತ ಪ್ರಜ್ಞೆಯು ಬೆಳವಣಿಗೆಗೆ ಅಡ್ಡಿಯಾಗುವುದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/256**

**ಸಂಯಮವಿಲ್ಲದ ಮಾತಿನಿಂದಾಗುವ ಹಾನಿ**

ಯಾವ ಪ್ರಯೋಜನವೂ ಇಲ್ಲದೇ ಮಾತನಾಡುವುದು ತುಂಬ ಕೆಟ್ಟದಾದ ಹರಟೆ ಎಂಬುದನ್ನು ನಾನು ಅನೇಕ ಸಲ ಹೇಳಿದ್ದೇನೆ. ಆದರೆ ಇಲ್ಲಿ, ಪರಿಸ್ಥಿತಿ ಒಂದು ಮಿತಿಯನ್ನು ಮುಟ್ಟಿದೆ.. ಇದನ್ನೆಲ್ಲ ಅನೇಕ ಬಾರಿ ಹೇಳಿ ಆಗಿದೆ, ಮೇಲಿಂದ ಮೇಲೆ ಹೇಳಿದ್ದಾಗಿದೆ, ಮನುಷ್ಯನನ್ನು ಪರಿಪೂರ್ಣ ಮಾಡಬೇಕೆಂಬ ಬಯಕೆ ಯಾರಿಗೆ ಇದೆಯೋ ಅವರೆಲ್ಲ ಪದೇಪದೇ ಹೇಳಿದ್ದಾರೆ, ಆದರೆ ದುರಾದೃಷ್ಟ ಯಾವ ವಿಶೇಷ ಪರಿಣಾಮವೂ ಆಗಿಲ್ಲ. ಅದೊಂದು ರೀತಿಯಲ್ಲಿ ಬೇರೆಯವರನ್ನು ನೋಯಿಸಲೆಂದೇ ಆಡುವ ಕಾಡು ಹರಟೆ, ಸುಳ್ಳು ಸುದ್ದಿ ಹಬ್ಬಿಸುವುದು, ಬೇರೆಯವರ ಬಗ್ಗೆ ಕೆಟ್ಟ ಕೆಟ್ಟ ಮಾತನಾಡಿ ಸುಖ ಪಡೆಯುವುದು. ಯಾರು ಈ ರೀತಿಯ ಸಂಯಮ ರಹಿತ ಕಾಡು ಹರಟೆಯಲ್ಲಿ ಭಾಗವಹಿಸುತ್ತಾರೋ ಅವರು ತಮ್ಮ ಪ್ರಜ್ಞೆಯನ್ನೇ ಕೆಳಕ್ಕೆ ತಳ್ಳುತ್ತಾರೆ, ಮತ್ತು ಇಂಥ ಅನಿಯಂತ್ರಿತ ಮಾತಿಗೆ ಕೆಟ್ಟದಾಗಿ ಹೊಡೆದಾಡುವುದು, ಅವಾಚ್ಯ ಪದಗಳಿಂದ ನಿಂದೆ ಮಾಡುವುದು, ಇದೆಲ್ಲ ಒಂದು ರೀತಿಯಲ್ಲಿ ಆತ್ಮಹತ್ಯೆ ಇದ್ದಂತೆ – ತನ್ನನ್ನು ತಾನೇ ಆಂತರಿಕವಾಗಿ ಕೊಂದುಕೊಳ್ಳುವಂತೆ.

ನಾನು ಈ ಅಂಶದ ಮೇಲೆ ಒತ್ತು ಕೊಡುತ್ತೇನೆ, ಮತ್ತು ನೀವು ಇದನ್ನು ಗಂಭೀರವಾಗಿ ಪರಿಗಣಿಸಿ ಎಂದು ಒತ್ತಾಯಿಸುತ್ತೇನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/144 – ಶ್ರೀಮಾತೆ**

**ಅನೇಕ ವಿಧವಾದ ಆಧ್ಯಾತ್ಮಿಕ ವಿಕಾಸ**

ಆಧ್ಯಾತ್ಮಿಕ ಸತ್ಯವು ಆತ್ಮದ ಸತ್ಯವೇ ವಿನಃ ಬುದ್ಧಿಯ ಸತ್ಯವಲ್ಲ, ಅದು ಗಣಿತ ಸಿದ್ಧಾಂತದ ಹಾಗಲ್ಲ, ತಾರ್ಕಿಕ ಸೂತ್ರವಲ್ಲ ಅದು. ಅದು ಅನಂತನಾದ ಪರಮಾತ್ಮನ ಸತ್ಯ, ವೈವಿಧ್ಯತೆಗಳಲ್ಲಿಯೂ ಏಕನಾಗಿರುವ ಮತ್ತು ಅದು ಅನೇಕ ಪ್ರಕಾರದ ಅನಂತತೆಯ ರಚನೆ ಅಥವಾ ಪ್ರಕಟಣೆ ಎಂದು ಹೇಳಬಹುದು. ಆಧ್ಯಾತ್ಮಿಕ ವಿಕಾಸದಲ್ಲಿ, ಸತ್ಯವನ್ನು ತಲುಪಲು ಅನೇಕ ದಾರಿಗಳಿರುವುದು ಸಹಜ ಮತ್ತು ಅನಿವಾರ್ಯ ಕೂಡ. ಈ ರೀತಿ ಅನೇಕ ದಾರಿಗಳಿರುವುದು ಆತ್ಮವು ತಲುಪಲಿರುವ ಸತ್ಯವು ಜೀವಂತ ಸತ್ಯವೇ ಹೊರತು ಒಂದು ಸೂತ್ರದಲ್ಲಿ

ಬಂಧಿಸಿಡಬಹುದಾದ ನಿರ್ಜೀವ ವಸ್ತು ಅಲ್ಲವೆಂಬುದನ್ನು ಶ್ರುತಪಡಿಸುವುದು. ಸತ್ಯವೆಂಬುದೊಂದು ಕಠಿಣ ಬೌದ್ಧಿಕ ಪರಿಕಲ್ಪನೆ, ಅದು ಒಂದೇ ಬದಿಯುಳ್ಳ ಸತ್ಯ, ಅದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು, ಉಳಿದ ಯಾವುದೇ ರೀತಿಯ ಸಿದ್ಧಾಂತ, ವ್ಯವಸ್ಥೆ ಅಥವಾ ಪರಿಕಲ್ಪನೆಗಳನ್ನು ಅಲ್ಲಗಳೆಯುವಂಥದು, ಅದನ್ನು ಎಲ್ಲರೂ ಅದಿರುವ ರೀತಿಯಲ್ಲಿಯೇ ಒಪ್ಪಿಕೊಳ್ಳಬೇಕು ಎಂದು ಹೇಳಿದ್ದೇ ಆದರೆ ಆಗ ಅದು ಪ್ರಾಣ ಮತ್ತು ಮನಸ್ಸು ಮತ್ತು ಆತ್ಮಗಳ ಸಂಕೀರ್ಣ ಕ್ಷೇತ್ರದಿಂದ ಹೊರತಾದ ಕೇವಲ ಭೌತಿಕಕ್ಕೆ ಸೀಮಿತವಾಗಿರುವ ಅನ್ಯೈತಿಕ ಅಥವಾ ಅಲೌಕಿಕತತ್ವ ಎಂದತಾಗುವುದು.

ಮಾನವನ ಆಧ್ಯಾತ್ಮಿಕ ವಿಕಾಸದಲ್ಲಿ ಅನೇಕ ಹಂತಗಳಿರಲೇಬೇಕು ಮತ್ತು ಪ್ರತಿ ಹಂತದಲ್ಲಿಯೂ ಸತ್ತೆಯ, ಪ್ರಜ್ಞೆಯ, ಪ್ರಾಣದ ಸ್ವಭಾವದ, ವಿಚಾರಗಳ ಮತ್ತು ವ್ಯಕ್ತಿತ್ವದ ಅನೇಕ ವೈಯಕ್ತಿಕ ಪ್ರಕಟಣೆಗಳು ಅಥವಾ ರಚನೆಗಳಿರಲೇಬೇಕು. ವಿಕಾಸಕ್ಕೆ ಉಪಕರಣವಾಗಿರುವ ಮನಸ್ಸಿನ ಸ್ವಭಾವ ಅಥವಾ ಧರ್ಮ ಮತ್ತು ಅದು ಬದುಕಿನ ಜೊತೆ ವ್ಯವಹರಿಸುವ ವಿಧಾನವು ಸಾಧಕನ ವೈಯಕ್ತಿಕ ಬೆಳವಣಿಗೆಯನ್ನನುಸರಿಸುವ ಅನೇಕ ವಿಧವಾಗಿರುವುದು ಕೂಡ ಸಹಜವೇ, ಮತ್ತು ಹಾಗೆ ಇರಲೇಬೇಕು. ಅಷ್ಟಲ್ಲದೇ, ಪರಿಶುದ್ಧವಾದ ಆಧ್ಯಾತ್ಮಿಕ ಆತ್ಮ. ಸಾಕ್ಷಾತ್ಕಾರ ಮತ್ತು ಆತ್ಮಾಭಿವ್ಯಕ್ತಿಯ ಕ್ಷೇತ್ರವೂ ಸಹ ಒಂದೇ ರೀತಿ. ಏಕತಾನತೆಯಿಂದ ಕೂಡಿರಬೇಕಾದ ಅವಶ್ಯಕತೆ ಇಲ್ಲ. ಅಲ್ಲಿ ಕೂಡ ಅದು ಮೂಲಭೂತ ಏಕತೆಯಲ್ಲಿಯೂ ವೈವಿಧ್ಯಮಯವಾಗಿರುವ ಸಾಧ್ಯತೆ ಇದೆ. ಪರಾತ್ಪರವಾದ ಪರಮ ಆತ್ಮ ಒಂದೇ, ಏಕೈಕವಾದುದು, ಆದರೆ ಅದರಿಂದ ಬಂದ ಅನೇಕ ಜೀವಾತ್ಮಗಳು ಅನೇಕ. ಆತ್ಮದ ಪ್ರಕಟಣೆಯಾಗಿರುವ ಪ್ರಕೃತಿಯ ವೈವಿಧ್ಯತೆಯಂತೆ ಅದರ ಆಧ್ಯಾತ್ಮಿಕ ಸ್ವ–ಪ್ರಕಟಣೆ ಕೂಡ ಅನಂತವಾಗಿರುತ್ತದೆ. ಏಕತೆಯಲ್ಲಿ ವೈವಿಧ್ಯತೆ ಎನ್ನುವುದೇ ಸೃಷ್ಟಿಯ ನಿಯಮ. ಅತಿಮಾನಸಿಕ ಏಕೀಕರಣ ಅಥವಾ ಸಮಗ್ರ ಏಕತೆಯು ಈ ಎಲ್ಲ ವೈವಿಧ್ಯಗಳಲ್ಲಿ ಸಾಮರಸ್ಯವನ್ನು ಸ್ಥಾಪಿಸಲೇಬೇಕು. ಅವುಗಳನ್ನು ನಾಶಪಡಿಸುವುದು ಪ್ರಕೃತಿಯಲ್ಲಿ ಕಾರ್ಯ ಮಾಡುತ್ತಿರುವ ಪರಾತ್ಪರ ಆತ್ಮದ ಉದ್ದೇಶವಾಗಿರಲು ಸಾಧ್ಯವಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 22/919–21**

## ಸ್ವಾತಂತ್ರ್ಯ ಮತ್ತು ಸೇವೆ

*ಈ ಪ್ಯಾರಾಗ್ರಾಫ್‌ನ ಅರ್ಥವೇನು? "ಸತ್ತೆಯ ಸೀಮಾತೀತವಾದ ಏಕತೆಯಲ್ಲಿ. ಸ್ವಾತಂತ್ರವೇ ಏಕೈಕ ನಿಯಮವಾಗಿದೆ, ಇಡೀ ಪ್ರಕೃತಿಯ ಪ್ರಭುವಾಗಿದೆ.*

*ಯಜಮಾನನಂತಿದೆ. ಪ್ರಕೃತಿಯ ಅನೇಕ ವೈವಿಧ್ಯತೆಗಳ ಕ್ರೀಡೆಯಲ್ಲಿ ತಾನಾಗಿ ಸಂತೋಷದಿಂದ ಸೇವೆ ಸಲ್ಲಿಸುವಾಗ ಪ್ರೇಮವೇ ಸೇವೆಯ ಆತ್ಯಂತಿಕ ನಿಯಮವಾಗಿದೆ."*

Thoughts and Glimpses, SABCL Vol. 16, p. 386

ಮೇಲ್ನೋಟಕ್ಕೆ ಇವೆರಡೂ ಪರಸ್ಪರ ವಿರೋಧಿ ಹಾಗೂ ಹೊಂದಾಣಿಕೆಯಾಗದ ಸಂಗತಿ ಎಂದು ತೋರುತ್ತದೆ. ಬಾಹ್ಯತಃ ಯಾರೂ ಏಕಕಾಲಕ್ಕೆ ಸ್ವತಂತ್ರ ಹಾಗೂ ಸೇವೆಯಲ್ಲಿ ಇರುವುದನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಸಾಧ್ಯವಿದೆ, ಎರಡನ್ನೂ ಸೇರಿಸಿ ಒಂದಾಗಿಸಬಲ್ಲ ಭೌತಿಕ ಪ್ರಪಂಚದಲ್ಲಿ ಅತ್ಯಂತ ಸುಖಮಯವಾದ ಸ್ಥಿತಿಯನ್ನು ಸಂರಚಿಸಬಲ್ಲ ಮನಃಸ್ಥಿತಿ ಒಂದಿದೆ.

ಸ್ವತಂತ್ರ್ಯವೆಂಬುದೊಂದು ಆಂತರಿಕ ಸಹಜ ಪ್ರವೃತ್ತಿ. ಸತ್ತೆಯ ಸಮಗ್ರ ಬೆಳವಣಿಗೆಗೆ ಅದು ಬೇಕೇಬೇಕು. ಸಾರತಃ ಅದು ಅತ್ಯಂತ ಉನ್ನತ ಪ್ರಜ್ಞೆಯ ಪರಿಪೂರ್ಣ ಸಾಕ್ಷಾತ್ಕಾರವೇ ಆಗಿದೆ. ಅದು ಏಕತೆ, ಪರಾತ್ಪರನೊಂದಿಗಿನ ಏಕತೆಯ ಅನುಭವ, ಅದು ಸೃಷ್ಟಿಯ ಏಕೈಕ ಮೂಲದ ಅರಿವು, ಮತ್ತು ಸಾರ್ಥಕತೆಯ ಅನುಭವ ಕೂಡ ಹೌದು. ಆದರೆ ಈ ಏಕತೆಯು ಅನೇಕವಾಗಿ ಪ್ರಕಟವಾಗಿರುವುದರಿಂದ – ವೈವಿಧ್ಯಮಯವಾಗಿ ಅಭಿವ್ಯಕ್ತವಾಗಿರುವುದರಿಂದ, ಪ್ರಕೃತಿ ಹಾಗೂ ಅದರ ಮೂಲಗಳ ನಡುವೆ ಯಾವುದಾದರೊಂದು ಕೊಂಡಿಯ ರೂಪದಲ್ಲಿ ಕೆಲಸ ಮಾಡಲೇಬೇಕು, ಮತ್ತು ಅಂಥ ಪರಿಪೂರ್ಣವಾದ ಕೊಂಡಿಯು 'ಪ್ರೇಮ'ವೇ ಆಗಿರಬೇಕು. ಪ್ರೇಮದ ಮೊದಲ ಲಕ್ಷಣವೇನು? ಸೇವೆಗಾಗಿ ತನ್ನನ್ನು ಕೊಟ್ಟುಕೊಳ್ಳುವುದು ಅಥವಾ ಒಪ್ಪಿಸುವುದು. ಅದರ ಸ್ವ-ಸ್ಫೂರ್ತ, ತತ್‌ಕ್ಷಣದ ಮತ್ತು ಅನಿವಾರ್ಯವಾದ ಕ್ರಿಯೆ ಏನು? ಸೇವೆ-ಸೇವೆ ಮಾಡುವುದು ಆನಂದದಿಂದ, ಸಂಪೂರ್ಣವಾಗಿ ತನ್ನನ್ನು ಸಮರ್ಪಿಸಿಕೊಂಡು ಸಂತೋಷದಿಂದ ಸೇವೆ ಮಾಡುವುದು.

ಆದ್ದರಿಂದ ಸ್ವಾತಂತ್ರ್ಯ ಮತ್ತು ಸೇವೆ ಎರಡೂ ಅವುಗಳ ಪರಿಶುದ್ಧ ಸ್ಥಿತಿಯಲ್ಲಿ ಪರಸ್ಪರ ವಿರೋಧಕಗಳಲ್ಲ ಬದಲಾಗಿ ಪರಸ್ಪರ ಪೂರಕವಾಗಿರುತ್ತವೆ. ಪರಾತ್ಪರ ಸತ್ಯದೊಡನೆ ಪರಿಪೂರ್ಣವಾಗಿ ಸಂಯೋಗ ಹೊಂದಿದಾಗ ಮಾತ್ರ ಪರಿಪೂರ್ಣ ಸ್ವಾತಂತ್ರ್ಯ ಸಿಕ್ಕಬಲ್ಲದು, ಏಕೆಂದರೆ ಅಜ್ಞಾನ, ಪ್ರಜ್ಞಾಹೀನತೆ, ಇವೇ ನಿಜವಾದ

ಬಂಧನ, ಇವು ನಿಮ್ಮನ್ನು ಅಸಮರ್ಥರನ್ನಾಗಿ, ಸೀಮಿತರನ್ನಾಗಿ, ದುರ್ಬಲರನ್ನಾಗಿ ಮಾಡುತ್ತವೆ. ವ್ಯಕ್ತಿಯಲ್ಲಿ ತುಸು ಮಾತ್ರ ಅಜ್ಞಾನ ಇದ್ದರೂ ಸಾಕು ಅವನು ಸೀಮಿತನಾಗಿರುತ್ತಾನೆ, ಸ್ವತಂತ್ರನಾಗಿರುವುದಿಲ್ಲ. ವ್ಯಕ್ತಿಯಲ್ಲಿ ತಿಲಮಾತ್ರ ಪ್ರಜ್ಞಾಹೀನತೆ ಇದ್ದರೂ ಸಾಕು, ಅದು ಸೀಮಿತತೆಗೆ, ಬಂಧನಕ್ಕೆ ಕಾರಣವಾಗುವುದು. ಪರಾತ್ಪರ ಸತ್ಯದ ಜೊತೆ ಪರಿಪೂರ್ಣ ಸಂಯೋಗ ಹೊಂದಿದಾಗ ಮಾತ್ರ ಪರಿಪೂರ್ಣ ಸ್ವತಂತ್ರ್ಯ ಇರುತ್ತದೆ. ಇಂಥ ಏಕತೆಯನ್ನು ಸ್ವಯಂ ಸ್ಫೂರ್ತವಾದ ಸಮರ್ಪಣೆಯಿಂದಲ್ಲದೇ ಬೇರೆ ಇನ್ನಾವುದರಿಂದಲೂ ಪಡೆಯಲು ಸಾಧ್ಯವಿಲ್ಲ. ಅದು ಪ್ರೇಮದ ಕಾಣಿಕೆ. ನಾನು ಆಗಲೇ ಹೇಳಿದಂತೆ, ಪ್ರೇಮದ ಮೊದಲ ಅಭಿವ್ಯಕ್ತಿ ಅಥವಾ ಲಕ್ಷಣವೆಂದರೆ ಸೇವೆಯೇ.

ಅಂತೆಯೇ ಪರಾತ್ಪರ ಸತ್ಯದಲ್ಲಿ ಅವು ಒಂದೇ ಆಗಿರುತ್ತವೆ. ಆದರೆ ಈ ಪ್ರಪಂಚದಲ್ಲಿ, ಅಜ್ಞಾನ, ಅಚೇತನಗಳ ಜಗತ್ತಿನಲ್ಲಿ ಈ ಸೇವಾ ಮನೋಭಾವನೆಯು–ದಾಸ್ಯವು–ನಿಜವಾಗಿ ತಾನೇ ತಾನಾಗಿ ಇರಬೇಕಾಗಿತ್ತು, ಪ್ರೇಮಪೂರಿತವಾಗಿರಬೇಕಾಗಿತ್ತು, ಪ್ರೇಮದ ಅಭಿವ್ಯಕ್ತಿ ಆಗಿರಬೇಕಾಗಿತ್ತು, ಆದರೆ ಅದರ ಬದಲಾಗಿ ಏನನ್ನೋ ಹೇರಿದಂತೆ, ಅನಿವಾರ್ಯವಾದ ಅವಶ್ಯಕತೆ, ಜೀವನದ ಚಕ್ರದ ಚಲಾವಣೆಗಾಗಿ ಇರಬೇಕಾದ ಕ್ರಿಯೆಯಂತಾಗಿ, ಅಸ್ತಿತ್ವದ ಮುಂದುವರಿಕೆಯ ಕುರುಹಾಗಿ ಉಳಿದುಬಿಟ್ಟಿದೆ. ಹೀಗಾಗಿ ಅದು ವಿರೂಪ, ದುಃಖಪ್ರದ ಅವಮಾನಾಸ್ಪದವಾಗಿ ಕಾಣುತ್ತದೆ. ಯಾವುದು ನಿಜವಾಗಿ ಅರಳಬೇಕಾಗಿತ್ತೋ, ಆನಂದದ ಪ್ರಕ್ರಿಯೆಯಾಗಿರಬೇಕಿತ್ತೋ ಅದು ಅಸಹ್ಯ, ಕುರೂಪ, ವಿಷಾದಕರ ಬಂಧನವಾಗಿ ತೋರುತ್ತಿದೆ. ಇಂಥ ಅನಿಸಿಕೆ, ಸ್ವಾತಂತ್ರ್ಯದ ಅಗತ್ಯದ ಬಯಕೆ ಕೂಡ ಇದರಿಂದಾಗಿ ವಿಕೃತವಾಗಿದೆ. ಅದೊಂದು ರೀತಿಯ ತೃಷೆಯಾಗಿ ಮಾರ್ಪಟ್ಟಿದೆ, ಸ್ವಾತಂತ್ರ್ಯದ ಹಸಿವು ನೇರವಾಗಿ ಪ್ರತಿಭಟನೆ, ವಿಘಟನೆ, ಪ್ರತ್ಯೇಕತೆ, ನಿಜವಾದ ಸ್ವಾತಂತ್ರ್ಯದ ವಿರುದ್ಧ ಸ್ಥಿತಿಗೆ ಒಯ್ದು ನಿಲ್ಲಿಸುವಂಥದಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/50–51**

## ಉಚ್ಚ ವ್ಯವಸ್ಥೆ ಮತ್ತು ಸಾಮರಸ್ಯದ ನಿಯಮ

ಪ್ರಾಣಿಕದ ಇಚ್ಛೆಯು ಮಾನಸಿಕ ಶಕ್ತಿಗೆ ತಲೆ ಬಾಗಿದಾಗ ವೈಯಕ್ತಿಕ ಅಥವಾ ಸಮಾಜದ ಜೀವನ ನೈತಿಕವಾಗಿರುತ್ತದೆ. ಆದರೆ ಪ್ರಾಣಿಕ ಮತ್ತು ಮಾನಸಿಕ

ಎರಡೂ ಶಕ್ತಿಗಳು ತಮಗಿಂತ ಹಿರಿದಾದ, ಅತಿಮಾನಸಕ್ಕೆ ಶರಣಾದಾಗ, ಮಾನವನ ಜೀವನ ತನ್ನತನವನ್ನು ಮೀರುತ್ತದೆ, ಅಲ್ಲಿಂದ ನಿಜವಾದ ಆಧ್ಯಾತ್ಮಿಕ ಜೀವನ ಆರಂಭವಾಗುತ್ತದೆ, ಅತಿಮಾನವನ ಬದುಕು ಮೊದಲಾಗುತ್ತದೆ. ಆ ಜೀವನದ ನಿಯಮವು ಅಂತರಂಗದಿಂದ ಬರುತ್ತದೆ, ಪ್ರತಿ ವ್ಯಕ್ತಿಯ ಅಥವಾ ಸತ್ತೆಯ ಹೃದಯ ಕೇಂದ್ರದಲ್ಲಿ ದೈವೀ ನಿಯಮ ಪ್ರಕಾಶಿಸುತ್ತದೆ, ಅಲ್ಲಿಂದ ವ್ಯಕ್ತಿಯ ಜೀವನವನ್ನು ಆಳುತ್ತದೆ. ಆ ದೈವೀ ನಿಯಮವು ಅಭಿವ್ಯಕ್ತಿಯಲ್ಲಿ ಅನೇಕ ಆಗಿರಬಹುದು ಆದರೆ ಮೂಲದಲ್ಲಿ ಒಂದೇ ಆಗಿರುತ್ತದೆ. ಆ ಏಕತೆಯಿಂದಾಗಿಯೇ ಈ ನಿಯಮವು ಉಚ್ಚ ವ್ಯವಸ್ಥೆ ಹಾಗೂ ಸಾಮರಸ್ಯದ ನಿಯಮವಾಗಿರುತ್ತದೆ.

ಆಗ ವ್ಯಕ್ತಿಯು ಅಹಂನ ಪ್ರೇರಣೆಗಳಿಂದ, ಸಾಂಪ್ರದಾಯಿಕ ನಿಯಮಗಳಿಂದ ಪ್ರೇರಿತನಾಗುವುದಿಲ್ಲ, ಅವನು ಎಲ್ಲ ಸ್ವಾರ್ಥಪರ ಗುರಿಯನ್ನು ತ್ಯಜಿಸುತ್ತಾನೆ. ಅವನ ನಡೆಯು ಪೂರ್ಣತಃ ನಿರಾಶಿ ನಿರ್ಮಮತ್ವದಿಂದ ಪ್ರೇರಿತವಾಗಿರುತ್ತದೆ. ವೈಯಕ್ತಿಕ ಪ್ರಯತ್ನ, ಅದು ಈ ಜಗತ್ತಿನಲ್ಲೇ ಆಗಿರಬಹುದು ಅಥವಾ ಬೇರನ್ನಾವುದೋ ಊರ್ಧ್ವ ಲೋಕದಲ್ಲಿಯೇ ಆಗಿರಬಹುದು, ವೈಯಕ್ತಿಕ ಅಥವಾ ಸ್ವಾರ್ಥದ ಲಾಭಕ್ಕಾಗಿ ಮಾಡುವುದು ಸಾಧ್ಯವೇ ಇಲ್ಲವೆಂಬಂತಾಗಿ ಬಿಡುವುದು. ಏಕೆಂದರೆ ಪ್ರತಿಯೊಂದು ಕಾರ್ಯವನ್ನು ಪೂರ್ಣತಃ, ಸರಳ, ಆನಂದ ಹಾಗೂ ಪರಾತ್ಪರ ನಿಯಮದನುಗುಣವಾಗಿ ವಿಧೇಯವಾಗಿ ಮಾಡಲಾಗುವುದು, ಅಲ್ಲಿ ವೈಯಕ್ತಿಕ ಬಹುಮಾನದ, ಪರಿಣಾಮದ ಆಶೆ ಇರುವುದಿಲ್ಲ, ಪರಮ ಶ್ರೇಷ್ಠವಾದ ಬಹುಮಾನವೆಂದರೆ ಇಂಥ ಅಭೀಪ್ಸೆಯ ಅಡಿಯಲ್ಲಿ ಕೆಲಸ ಮಾಡುವ ಆನಂದವೇ, ತನ್ನೊಳಗೆ ದೈವೀ ತತ್ವದೊಂದಿಗೆ ತನ್ನ ಪ್ರಜ್ಞೆ ಮತ್ತು ಸಂಕಲ್ಪ ಶಕ್ತಿಯನ್ನು ಸಮನೀಕರಿಸುವುದೇ.

ಈ ರೀತಿ ತಾದಾತ್ಮ್ಯಕರಿಸುವುದರೊಂದಿಗೆ ಅತಿಮಾನವನು ತನ್ನ ಸಾಮಾಜಿಕ ಅಂತಸ್ತನ್ನು ಗುರುತಿಸಿಕೊಳ್ಳುತ್ತಾನೆ. ತನ್ನೊಳಗೆ ದೈವೀ ನಿಯಮವನ್ನು ಕಂಡುಕೊಳ್ಳುವುದರೊಂದಿಗೆ ದೈವೀ ನಿಯಮವನ್ನು ಪ್ರತಿಯೊಬ್ಬರಲ್ಲೂ ಗುರುತಿಸುತ್ತಾನೆ. ಅದರೊಂದಿಗೆ ತಾನು ತಾದಾತ್ಮ್ಯ ಹೊಂದುವುದರ ಜೊತೆಗೆ ಎಲ್ಲರಲ್ಲೂ ಇರುವ ಅದರ ಜೊತೆಗೆ ತಾದಾತ್ಮ್ಯ ಹೊಂದಿದಂತೆ ಆಗುತ್ತದೆ. ಹೀಗೆ ಎಲ್ಲರಲ್ಲೂ, ಎಲ್ಲದರಲ್ಲೂ ಇರುವ ಏಕತೆಯನ್ನು ಗುರುತಿಸುತ್ತಾನೆ, ಕೇವಲ ಸಾರ ರೂಪದಲ್ಲಿ ಅಲ್ಲ ಪ್ರಾಣದ ಹಾಗೂ ವಿವಿಧ ಆಕಾರಗಳ ಬಾಹ್ಯ ಸ್ತರಗಳಲ್ಲಿ ಕೂಡ ಏಕತೆಯನ್ನು ಕಂಡುಕೊಳ್ಳುತ್ತಾನೆ. ಅವನು ಆಗ ಕೇವಲ ಮನಸ್ಸು, ಪ್ರಾಣ ಅಥವಾ

ಶರೀರ ಆಗಿ ಉಳಿದಿರುವುದಿಲ್ಲ ಬದಲಾಗಿ ಅವೆಲ್ಲವನ್ನೂ ಹೊಂದಿರುವ, ಎಲ್ಲದಕ್ಕೂ ಆಧಾರಭೂತವೂ, ಆಶ್ರಯವೂ ಆಗಿರುವ ಆತ್ಮ, ಶಾಂತ, ಮೌನ, ಶಾಶ್ವತವಾದ ಆತ್ಮವಾಗಿ ಬದಲಾಗಿರುತ್ತಾನೆ. ಈ ವಿಶ್ವಾತ್ಮಕವಾದ ಆತ್ಮವು ಎಲ್ಲ ಜೀವ, ಜೀವಿ, ಶರೀರ, ಮನಸ್ಸು ಎಲ್ಲವನ್ನೂ ತನ್ನೊಳಗೆಯೇ ಕಂಡುಕೊಳ್ಳುತ್ತದೆ. ಈ ವಿಶ್ವಾತ್ಮಕವಾದ ಆತ್ಮವೇ ಎಲ್ಲವನ್ನೂ ಸೃಷ್ಟಿಸಿದೆ, ಅದೇ ಎಲ್ಲ ಕೆಲಸಗಳನ್ನು ಮಾಡುತ್ತದೆ, ಇಡೀ ವಿಶ್ವದಲ್ಲಿ ಅದೇ ಏಕೈಕವಾಗಿ ವ್ಯಾಪ್ತವಾಗಿದೆ ಎಂಬ ಅನುಭವ ಅವನಿಗೆ ಆಗುತ್ತದೆ. ಏಕೆಂದರೆ ಈ ವಿಶ್ವಾತ್ಮಕ ಅಭಿವ್ಯಕ್ತಿಯಲ್ಲಿ ಅನೇಕ ಆತ್ಮಗಳು ಆ ಏಕೈಕ ದೈವೀ ಹಾಗೂ ಅಸ್ತಿತ್ವವೇ ಬೇರೆ ಬೇರೆ ಜೀವಿಗಳ ರೂಪದಲ್ಲಿ ತನ್ನೆದುರು ಪ್ರಕಟವಾಗುವುದು ಎಂದು ಅವನಿಗೆ ಖಚಿತವಾಗುವುದು. ಅವನು ಆ ತತ್‌ನಲ್ಲಿ ಲೀನನಾಗಿ ಬಿಡುವುನು ಮತ್ತು ತನ್ನ ಮನಸ್ಸು , ಪ್ರಾಣ, ಶರೀರಗಳೆಲ್ಲವೂ ಪರಾತ್ಪರ ಆತ್ಮದ ಪ್ರಕಟಣೆಗಳೇ ಹಾಗೂ ನಾವು ಬೇರೆ ಬೇರೆ ಎಂದು ಗುರುತಿಸುವ ಇತರ ಎಲ್ಲರ ಮನಸ್ಸು , ಪ್ರಾಣ ಹಾಗೂ ಶರೀಗಳು ತನ್ನ ಸ್ವಂತದವುಗಳೇ ಎಂಬ ಪ್ರಜ್ಞೆ ಗೋಚರಿಸುವುದು, ಜಾಗೃತವಾಗುವುದು – ಎಲ್ಲ ಭೌತಿಕ ಏಕತೆಯ ಅರಿವು ಅವನಲ್ಲಿ ಸದಾ ಜಾಗೃತವಾಗಿರುವುದರಿಂದ ಅವನು ಎಲ್ಲ ಜೀವಿಗಳ ಶರೀರವೂ ತನ್ನದೇ ಎಂಬಂತೆ ಕಾಣುವುನು. ಮನಸ್ಸು ಹಾಗೂ ಹೃದಯಗಳಲ್ಲಿ ಅವನು ಇಡೀ ಸೃಷ್ಟಿಯ ಜೊತೆ ಒಂದಾಗುವುನು. ಸಂಕ್ಷೇಪವಾಗಿ ಹೇಳಬೇಕೆಂದರೆ, ಎಲ್ಲರಲ್ಲೂ ಅವನು ತನ್ನನ್ನೇ ಕಾಣುತ್ತಾನೆ, ಎಲ್ಲರನ್ನು ತನ್ನೊಳಗೇ ಕಾಣುತ್ತಾನೆ. ಈ ರೀತಿ ಅವನು ನಿಜವಾದ, ಪರಿಪೂರ್ಣವಾದ ಏಕತೆಯನ್ನು ಕಂಡುಕೊಳ್ಳುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/167–68**

---

*ನಮ್ಮ ಈ ಸಮುದಾಯದಲ್ಲಿ ಯಾವ ನಿಯಮಗಳು, ನಡತೆಗಳು ಅನಿವಾರ್ಯವಾಗಿ ಇರಲೇಬೇಕೆಂದು ನೀವು ಬಯಸುವಿರಿ?*

ತಾಳ್ಮೆ, ಸಹನೆ, ಔದಾರ್ಯ, ವಿಶಾಲ ಮನೋಭಾವ, ಅಂತರ್ದೃಷ್ಟಿ , ಪ್ರಶಾಂತ ಹಾಗೂ ತಿಳುವಳಿಕೆಯಿಂದ ದೃಢತೆ, ಅಹಂನ ಮೇಲೆ ನಿಯಂತ್ರಣ, ಅದನ್ನು ಸಂಪೂರ್ಣವಾಗಿ ಗೆಲ್ಲುವವರೆಗೆ ಅಥವಾ ಅದು ಕರಗಿಹೋಗುವವರೆಗೆ ಅದರ ಮೇಲೆ ನಿಯಂತ್ರಣ ಬೇಕೇಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/374** **– ಶ್ರೀಮಾತೆ**

# ಶ್ರೀ ಅರವಿಂದರು – ಶತಮಾನದ ನೋಟ

– ಶ್ರೀ ನವನೀತ ರಾಮಚಂದ್ರರಾಯರು

## ಭಾಗ 2

ಕೆಳಗಿನಿಂದ ಉಮ್ಮಳಿಸಿ ಏಳುವ ಪೃಥ್ವೀಚೇತನದ (ತನ್ನನ್ನು ಆಮೂಲಾಗ್ರವಾಗಿ ಪರಿವರ್ತನೆಗೊಳಿಸೆಂಬ) ಕರೆ, ಮತ್ತದಕ್ಕೆ ಪರಮಪುರುಷನ ಅನುಮತಿ, ಇವೆರಡರ ನಡುವೆ ಸಂಧಿಕಾರ್ತಿಯಾಗಿ ವ್ಯವಹರಿಸುವ ಶಕ್ತಿ ಯಾವುದೆಂದರೆ ಭಗವತೀ ಮಾತೆಯ ಸಾನ್ನಿಧ್ಯ ಮತ್ತು ದಿವ್ಯ ಬಲ."

"ಯಾರು ತಮ್ಮನ್ನು ಅನಿರ್ಬಂಧವಾಗಿ ತಮ್ಮ ಚೇತನದ ಪ್ರತ್ಯಂಗದಲ್ಲಿಯೂ ಭಗವಂತನಿಗೆ ಅರ್ಪಿಸಿಕೊಳ್ಳುವರೋ ಅವರಿಗೆ ಭಗವಂತನು ತನ್ನನ್ನೆ ಕೊಟ್ಟುಕೊಳ್ಳುವನು. ಅವರಿಗೆ ಸ್ವಾಯತ್ತವಾಗಿರುವವು ಆ ಪ್ರಶಾಂತಿ, ಆ ಪ್ರಕಾಶ, ಆ ಶಕ್ತಿ, ಆ ಅನುಪಮ ಸುಖ, ಆ ಸ್ವಾತಂತ್ರ್ಯ, ಆ ವೈಶಾಲ್ಯ, ಆ ಜ್ಞಾನದ ಉತ್ತುಂಗತೆಗಳು, ಆನಂದದ ಸಾಗರಗಳು."

***

(ಇನ್ನು ಮುಂದಿನ ಯೌಗಿಕ ವಚನಗಳನ್ನು ಶ್ರೀ ಬೇಂದ್ರೆಯವರ 'ಶ್ರೀಮಾತಾ' ಕೃತಿಯಿಂದ ಆಯ್ದುಕೊಳ್ಳಲಾಗಿದೆ.)

ಅಪವಾದಾತ್ಮಕವಾಗಿ ಬರುವ ಅನುಭವವನ್ನು ನಿರಂತರ ನಿಯಮ–ವಾಗುವಂತೆಯೂ, ಆಚೆಗಿನದನ್ನು ಈಚೆಗೆ ದಿನಬಳಕೆಯ ನಿದಿಧ್ಯಾಸ ರೂಪಕ್ಕೂ ತರುವುದೇ ನಮ್ಮೀ ಯೋಗದ ಸಾರವಾಗಿದೆ.

***

ಜೀವನ ತ್ಯಾಗ ಮಾಡದೆ, ಹಿಂಸೆ ನಡೆಯಿಸದೆ, ಜೀವಾನಂದವನ್ನು ಧಿಕ್ಕರಿಸದೆ, ಪ್ರಾಣಶಕ್ತಿಯನ್ನು ಹಣಿಯದೆ ಈ ಯೋಗಸಾಧನೆ ನಡೆಯುವುದು.

***

ಸಕಲ ಭಾವಗಳಿಂದಲೂ ತನ್ನ ಪರಮೋಚ್ಚವನ್ನು ಪಡೆಯುವುದು – ಇದೇ 'ಯೋಗ'.

***

ದಿವ್ಯಪ್ರಜ್ಞೆಯ ವೃದ್ಧಿಯನ್ನು ಪಡೆಯುವುದೇ ನಮ್ಮ ಯೋಗದ ಸಕಲಾರ್ಥ.

***

ನಮ್ಮ ಯೋಗವು ನಮಗಾಗಿ ಅಲ್ಲ; ಅದು ಭಗವಂತನ ಪ್ರೀತ್ಯರ್ಥವಾಗಿ ಇದೆ.

***

ಪರಿಮಿತವೂ, ಬಾಹ್ಯ ದೃಷ್ಟಿ ವಿಶಿಷ್ಟವೂ ಆದ ಅಹಂಕಾರವನ್ನು ಪಟ್ಟದಿಂದ ತಳ್ಳಿ, ಭಗವಂತನನ್ನು ಪ್ರಕೃತಿಯ ಆವಾಸಕ ಈಶ್ವರನನ್ನಾಗಿ ಪಟ್ಟಗಟ್ಟುವುದು ನಮ್ಮ ಯೋಗದ ಉದ್ದೇಶವಾಗಿದೆ.

***

ಮಾನವಹೃದ್ಗತನಾದ ಭಗವಂತನನ್ನು ತನ್ನ ಭಾವದಿಂದಲೂ, ತನ್ನ ಬುದ್ಧಿಯಿಂದಲೂ, ತನ್ನ ಸರ್ವೇಂದ್ರಿಯಗಳಿಂದಲೂ ಆಧ್ಯಾತ್ಮಿಕವಾಗಿ ಆಶ್ರಯಿಸುವುದು – ಇದೇ ಯೋಗ.

ಭಗವತ್–ಸಂಬಂಧಗಳಲ್ಲಿ ಪ್ರವೇಶಿಸುವುದು ಯೋಗ. ಅದೇ ಪರಮ ಧ್ಯೇಯ, ಉತ್ತಮ ಉಪಯೋಗ.

***

ಮಾನಸಿಕ ನಿಯಾಮಕತ್ವ ಬಿಟ್ಟು ಊರ್ಧ್ವದ ನಿಯಾಮಕತ್ವ ಸ್ವೀಕರಿಸಬೇಕು.

***

ಸದ್ಯಃಕಾಲಕ್ಕೆ ಮಾನವಮಾತ್ರರೆಲ್ಲರೂ 'ಯೋಗ'ವನ್ನೇ ಪ್ರಕಾಶಗೊಳಿಸಬೇಕಾಗಿದೆ. ಯಾಕೆಂದರೆ ಮಾನವ ಪ್ರಕೃತಿಯಾಚೆಗಿನ ಪುರುಷಾವತಾರದತ್ತ ಹೆಜ್ಜೆ ಹಾಕಲು 'ಯೋಗಶಕ್ತಿ'ಯೇ ಬೇಕು.

***

ಸನಾತನದೊಡನೆ ಒಂದಾಗುವುದೇ ಯೋಗದ ಧ್ಯೇಯ; ಬೇರೆ ಇನ್ನಾವುದೂ ಇಲ್ಲ. ಈ ದಿವ್ಯಸಿದ್ಧಿಯಲ್ಲಿಯೇ ಉಳಿದ ಎಲ್ಲ ಉದ್ದೇಶಗಳು ಅಡಕವಾಗುವವು.

***

ಸ್ವಭಾವತಃ ಎಲ್ಲ ಯೋಗವು ನೂತನ ಜನ್ಮವೆ.

***

ಸಾತ್ತ್ವಿಕ ಉಲ್ಲಾಸ, ಶಮ, ವಿಶ್ವಾಸ ಇವು ಈ ಯೋಗದ ಸ್ಥಾಯಿವೃತ್ತಿಯಾಗಬೇಕು.

***

ಬರಲಿರುವ ಮಾನವ ಧರ್ಮ, ತತ್ಪ್ರೇರಣೆಯಿಂದ ತಲೆಯೆತ್ತುವ ಜಾಗತಿಕ ರಾಜ್ಯವ್ಯವಸ್ಥೆ, ಪರಿವರ್ತಿತ ಮಾನವ ಕುಲದ ಲಕ್ಷಣಗಳು ಎನ್ನುವದನ್ನು ಕುರಿತು ಶ್ರೀ ಅರವಿಂದರ ಕೆಲವು ಉಕ್ತಿಗಳು ಹೀಗಿವೆ:

"ಸ್ವಾತಂತ್ರ್ಯ, ಸಮತ್ವ, ಐಕ್ಯ ಇವು ಆತ್ಮನ ಸನಾತನ ಲಕ್ಷಣಗಳು. ಈ ಸತ್ಯವನ್ನು ವ್ಯಾವಹಾರಿಕವಾಗಿ ಒಪ್ಪಿಕೊಳ್ಳಬೇಕು; ಮಾನವನ ಜೀವಾತ್ಮ (Soul) ಎಚ್ಚರಾಗಬೇಕು, ಮಾನವನು ತನ್ನೀ ಅಂತರಾತ್ಮನ ಪ್ರೇರಣೆಯಂತೆ – ತನ್ನ ಅಹಂಕಾರದ ಪ್ರೇರಣೆಯಂತಲ್ಲ – ಬಾಳುವಂತಾಗಲು ಪ್ರಯತ್ನಿಸಬೇಕು; ಇದುವೆ ಧರ್ಮದ ಅಂತರಾರ್ಥ. ಈ ಮೆಟ್ಟಿಗೆ 'ಮಾನವ ಧರ್ಮ' ಬರಬೇಕು; ಆ ಮೇಲೆ ಈ ಧರ್ಮತತ್ತ್ವ ಮಾನವ ಕುಲದ ಜೀವನದಲ್ಲಿಯೂ ತನ್ನ ಸಾಫಲ್ಯ ಕಂಡುಕೊಳ್ಳುವುದು."

"ಮೊದಲು ಮಾನವ ಕುಲ ಆಧ್ಯಾತ್ಮಿಕ ಐಕ್ಯಾನುಭೂತಿಯನ್ನು ಹೊಂದಬೇಕು; ಅದು ಮಾನಸಿಕ ಐಕ್ಯಕ್ಕೆ ದಾರಿ ಮಾಡಿಕೊಡುವುದು. ಈ ಮಾನಸಿಕ ಐಕ್ಯ ಯಾವುದೇ ಬೌದ್ಧಿಕ ಅಥವಾ ಬಾಹ್ಯ ಏಕರೂಪತೆಯ ಮೇಲೆ ಅವಲಂಬಿಸದು. ಆ ಆಧ್ಯಾತ್ಮಿಕ ಐಕ್ಯಭಾವವು ಮಾನವ ಜಾತಿಯ ಏಕೀಕರಣದ ಯಾಂತ್ರಿಕ ಉಪಕರಣಗಳೊಡನೆ ನಿಗದಿತವಾಗಕೂಡದು; ಆದರೆ ವಿಮುಕ್ತವಾದ ಆಂತರಿಕ ವೈವಿಧ್ಯವನ್ನು ವಿರಚಿಸಿಕೊಂಡು, ಮತ್ತದರಂತೆಯೇ ವಿಮುಕ್ತ ವೈವಿಧ್ಯಮಯ ಬಾಹ್ಯ ಸ್ವಾಭಿವ್ಯಕ್ತಿಯನ್ನು ಸಾಧಿಸಿಕೊಂಡು ತನ್ನ ಸುಭದ್ರ ಏಕತೆಯನ್ನು ಸಮೃದ್ಧಗೊಳಿಸಲು ಅದು ಯಾವಾಗಲೂ ಸಿದ್ಧವಾಗಿರುವುದು. ಈ ರೀತಿ ಮಾನವೀಯ ಜೀವನದ ಏಕತೆ ತಾನಾಗಿ ಬಂದೇ ತೀರುವಂತಾಗುವುದು. ಇದು ಉಚ್ಚತರ ಮಾನವೀಯ ಜೀವನ ಸರಣಿಯು ಉದ್ಭೂತವಾಗಲು ತಳಹದಿಯನ್ನೊದಗಿಸುವುದು."

"ಕೊನೆಯ ಪರಿಣಾಮ ಜಾಗತಿಕ ಸರಕಾರದ ರಚನೆ. ಪರದಾಸ್ಯ, ಒತ್ತಾಯದಿಂದ ಹೇರಿದ ವಿಷಮತೆ, ಒಬ್ಬರು ಇನ್ನೊಬ್ಬರಿಗೆ ಬಗ್ಗಿಕೊಂಡಿರುವುದು

ಇವಾವುವೂ ಇರದ ಸ್ವತಂತ್ರ ರಾಷ್ಟ್ರಗಳ ಸಂಯುಕ್ತ ರಾಜ್ಯವ್ಯವಸ್ಥೆಯು ಇಂತಹ ಸರಕಾರದ ರೂಪವಾದರೆ ಅದು ಅತಿ ಗಮನಾರ್ಹ ಸಾಧನೆಯೆನ್ನಬಹುದು. ಇದರಲ್ಲಿ ಕೆಲವು ರಾಷ್ಟ್ರಳು ತಮ್ಮ ಸ್ವಾಭಾವಿಕ ವರ್ಚಸ್ಸು ಹೆಚ್ಚಿನ ಪ್ರಮಾಣದಲ್ಲಿರಲು ಬಯಸಬಹುದು; ಆದರೆ ಎಲ್ಲ ರಾಷ್ಟ್ರಗಳಿಗೂ ಇಲ್ಲಿ ಸಮಾನಸ್ಕಂಧತೆ ಇರುವುದು."

"(ಜಗದ್ವಲಯದಲ್ಲಿ) ಈಗ ಮೂಡುತ್ತಿರುವ ಬೆಳಕು ಹೆಚ್ಚಿದರೆ, ದಿವ್ಯಜೀವನದ ಸಾಧ್ಯತೆಯನ್ನು ತಮ್ಮಲ್ಲಿ ಹಾಗೂ ವಿಶ್ವ ಜೀವನದಲ್ಲಿ ಪ್ರತ್ಯಕ್ಷೀಕರಿಸಬೇಕೆಂಬ ಆಕಾಂಕ್ಷೆಯುಳ್ಳ ವ್ಯಕ್ತಿಗಳ ಸಂಖ್ಯೆ ಬೆಳೆದರೆ, ಮತ್ತಿವರು ಯೋಗ್ಯ ಮಾರ್ಗದ ಹತ್ತಿರ ಹತ್ತಿರಕ್ಕೆ ಬಂದರೆ, ಆಗ ಮಾನವನ ಆತ್ಮಚೈತನ್ಯ – ಯಾವುದು ಈಗ ಒಳಗಡಗಿಕೊಂಡ ದಿವ್ಯತೆಯಾಗಿದ್ದು ಬೆಳೆವಣಿಗೆ ಹೊಂದುವ ಪ್ರಕಾಶ ಹಾಗೂ ಶಕ್ತಿಯಾಗಿರುವುದೋ ಅದು – ಇನ್ನೂ ಅದೃಶ್ಯವಾಗಿರುವ – ಅನೂಹ್ಯವಾಗಿರುವ ದೇವಶಕ್ತಿಯ ಅವತಾರವಾಗಿ ಹೆಚ್ಚು ಪೂರ್ಣತೆಯಿಂದ ಮೇಲಿನಿಂದ ಕೆಳಕ್ಕಿಳಿದು, ಮಾನವ ಕುಲದ ಆತ್ಮವನ್ನೂ, ಅದರಂತೆಯೆ ಯಾರಲ್ಲಿ ಆ ಪ್ರಕಾಶ ಮತ್ತು ಆ ಶಕ್ತಿ ಅತ್ಯಂತ ಬಲಶಾಲಿಯಾಗಿರುವವೋ ಅಂತಹ ಧನ್ಯ ವ್ಯಕ್ತಿಗಳನ್ನೂ ಪ್ರವೇಶಿಸುವುದು. ಆಗ ಆ ಪ್ರತೀಕ್ಷಿತ ಪರಿವರ್ತನೆ ಪೂರ್ತಿಗೊಳ್ಳುವುದು; ಅದು, ಮಾನವ ಜೀವಿತವು ತನ್ನ ಇಂಗಿತ ಇತಿಮಿತಿಗಳಿಂದ ಹೊರಬಿದ್ದು ಆ ವಿಶಾಲತರ–ಪವಿತ್ರತರ ಕ್ಷಿತಿಜಗಳಲ್ಲಿ ಅಡಿಯಿಡುವಂತೆ ಪೂರ್ವ ಸಿದ್ಧತೆಯನ್ನು ಮಾಡುವುದು; ಆಗ ಈ ಪಾರ್ಥಿವ ಜೀವನದ ಉತ್ಕ್ರಾಂತಿ ತುಂಬಾ ಶಕ್ತಿಯಿಂದ ಊರ್ಧ್ವ ಗತಿಯಲ್ಲಿ ಸಾಗಿ, ದಿವ್ಯಜೀವನದ ಸಾಕ್ಷಾತ್ಕರಣದಲ್ಲಿ ಒಂದು ನಿಶ್ಚಿತ ಹೆಜ್ಜೆಯನ್ನು ಇಡಲು ಶಕ್ತವಾಗುವುದು; ಆಗ ಹೊಳೆಯುವುದು – ಕೇವಲ ಪಾಶವೀ ಜೀವನ ಸ್ವಭಾವದಿಂದ (ಮಾನವ್ಯವು) ಹೊರಬಿದ್ದು ಬಂದುದು ದೂರದ ಭವಿಷ್ಯತ್ತಿನ ಆ ಭವ್ಯ–ದಿವ್ಯ ಪ್ರಗಮನ–ಸಂಕ್ರಮಣದ ಅಸ್ಪಷ್ಟ ಸೂಚನೆಯಾಗಿತ್ತೆಂಬುದು."

***

ಈ ಮಹಾಪರಿವರ್ತನೆಯ ದಿವ್ಯದರ್ಶನದ ಕೆಲವಾದರೂ ರೂಪರೇಷೆಗಳನ್ನು ನಾವಿದೀಗ ಕಂಡುಕೊಂಡಿರುವೆವು. ಈ ನವ ಆಧ್ಯಾತ್ಮಿಕ ಸ್ವಾತಂತ್ರ್ಯ–ಸಮತೆ–ಐಕ್ಯಗಳನ್ನು ವ್ಯವಹಾರ ಸೃಷ್ಟಿಯಲ್ಲಿ ತರುವವರು ಯಾರು? – ಭಾರತವಲ್ಲದೆ ಇನ್ನಾರು? ಏಕೆಂದರೆ ಅನೂಚಾನ ಕಾಲದಿಂದ 'ಜಗತ್ತನ್ನು ರಕ್ಷಿಸುವ ಜ್ಞಾನವು

ಇಲ್ಲಿ ರಕ್ಷಿಸಲ್ಪಟ್ಟಿದೆ (Here is preserved the Knowledge that preserves the world).' ಊಹಿಸಲೂ ಅಸಾಧ್ಯವಾದ ಪ್ರಾಚೀನ ಕಾಲದಲ್ಲಿ ಭಾರತದ ಮಹರ್ಷಿಗಳು ಪಡೆದ ಆತ್ಮಾನುಭವದ ಬೆಳಕಿನಲ್ಲಿ ಇಲ್ಲಿಯವರ ರಾಷ್ಟ್ರೀಯ ಮಾನಸ ಮತ್ತದರ ಶೀಲ ರೂಪುಗೊಂಡಿತು. "ಆಧ್ಯಾತ್ಮಿಕ ಮನೋಭಾವ" ಎಂದದನ್ನು ಬಣ್ಣಿಸಬಹುದು. ಅಂತೆಯೆ ಪರಚಕ್ರಗಳ – ಪರಧರ್ಮ ಸಂಸ್ಕೃತಿಗಳ ದಾಳಿಗಳು ಒಂದರ ಹಿಂದೊಂದು ನಡೆದರೂ ಭಾರತದ 'ಆತ್ಮ' ನಷ್ಟವಾಗಲಿಲ್ಲ; ಅದರ 'ಹೃದಯ' ಸುದೃಢ – ನಿರೋಗಿಯಾಗಿದ್ದಿತು, 'ಮಸ್ತಕ' ಉನ್ನತ ತತ್ತ್ವಚಿಂತನ ಕ್ಷಮವಾಗಿದ್ದಿತು. ಹತ್ತೊಂಬತ್ತನೆಯ ಶತಮಾನದ ದ್ವಿತೀಯಾರ್ಧದಲ್ಲಿ ಭಾರತೀಯ ಆತ್ಮಜಾಗೃತಿಯು ರಾಷ್ಟ್ರೀಯತೆಯ ರೂಪದಲ್ಲಿ ಪ್ರಕಟವಾಗುವುದಕ್ಕೆ ನಿರಕ್ಷರಿ ಶ್ರೀ ರಾಮಕೃಷ್ಣರ ದಿವ್ಯಾನುಭವಗಳು, ಪರೋಕ್ಷವಾಗಿಯೇ ಆಗಲಿ, ಕಾರಣವಾದವೆಂದು ಹೇಳಿದರೆ ಅದು ಆಶ್ಚರ್ಯಕರವಾದರೂ ವಾಸ್ತವಿಕ ಸತ್ಯವಾಗಿರುವುದು. ನರೇಂದ್ರ (ಮುಂದಿನ ವಿವೇಕಾನಂದ) ಹಾಗೂ ಆತನ ಸಂಗಡಿಗ ಯುವಕರು ಶ್ರೀ ರಾಮಕೃಷ್ಣರ ವಾಣಿಯಿಂದ ಮಂತ್ರಮುಗ್ಧರಾದರು. ಇವರಲ್ಲಿ ಬುದ್ಧಿಶಕ್ತಿಯಿಂದ ಮುಂದಾಳಾದ ನರೇಂದ್ರ ಭಾರತದ ಜೀವನ ಮೌಲ್ಯಗಳನ್ನು ಕುರಿತು ನಾಸ್ತಿಕ್ಯವನ್ನಲ್ಲದಿದ್ದರೂ ಅವಿಶ್ವಾಸದ ಭಾವವನ್ನು ತಾಳಿದ್ದ. ಆದರೆ ಶ್ರೀ ರಾಮಕೃಷ್ಣರ ದೃಢ ಗಾಢಾನುಭೂತಿಯ ಸೂರ್ಯಪ್ರಕಾಶದ ಮುಂದೆ ಆ ಅಪನಂಬಿಕೆಯ ಮಂಜು ಕರಗಿಹೋಯಿತು. ದಿವ್ಯಜ್ಞಾನಭರಿತೆಯಾದ ಭಾರತಮಾತೆ ಪರದಾಸ್ಯಕ್ಕೆ ಸಹಜವಾದ ಆತ್ಮಿಕ – ಭೌತಿಕ ದುಃಸ್ಥಿತಿಯ ಹುದಲೊಳಗಿಂದ ಹೊರಬಿದ್ದು, ಮತ್ತೆ ಪ್ರಕಾಶಮಯಳಾಗಿ, ಭೌತ ವಿಜ್ಞಾನದ ತೋರಿಕೆಯ ಬಾಹ್ಯ ಪ್ರಗತಿಯ ಅಂಧಕಾರದಲ್ಲಿ ತಡವರಿಸುತ್ತ ಎಡವಿಬೀಳುತ್ತಿರುವ ಜಗತ್ತಿಗೆ ತನ್ನ ದಿವ್ಯಜ್ಞಾನದ ಸಂಜೀವನವನ್ನು ನೀಡಬೇಕೆಂಬ ದುರ್ದಮನೀಯ ಆಕಾಂಕ್ಷೆ ಆತನಲ್ಲುದಿಸಿತು. (ಶ್ರೀ ರಾಮಕೃಷ್ಣರ ಸಾನ್ನಿಧ್ಯದಲ್ಲಿ ಅವರ ದಿವ್ಯಬೋಧದ ಅಮೃತಪಾನ ಮಾಡಿದ, ಸಮಾಧಿ ಸುಖವೆಂದರೇನೆಂಬುದನ್ನು ಸ್ವಾನುಭವದಿಂದ ಕಂಡುಂಡ ನರೇಂದ್ರನು ವಿವೇಕಾನಂದನಾಗಿ, ತನ್ನ ಜೊತೆಗಾರರ ತಂಡ ಕಟ್ಟಿ, ಎಲ್ಲರೂ ಸಂನ್ಯಾಸ ದೀಕ್ಷಾಬದ್ಧರಾಗುವಂತೆ ಮಾಡಿ, ತಾನು ಭಾರತದ ನಿಜಸ್ಥಿತಿಯ ಜ್ಞಾನ ಮಾಡಿಕೊಳ್ಳಲು ಹಿಮಾಚಲದಿಂದ ಕನ್ಯಾಕುಮಾರಿಯವರೆಗೆ ಪಾದಚಾರಿಯಾಗಿ ದೇಶವನ್ನು ಸುತ್ತಿ, ದೇವಿಯ ಅರ್ಚನೆಮಾಡಿ ಸಮುದ್ರದಲ್ಲಿ ಜಿಗಿದು ಈಜಿಹೋಗಿ

ದೂರದ ಒಂದು ಕಿರು ನಡುಗಡ್ಡೆಯ ಶಿಲಾತಲದ ಮೇಲೆ ಧ್ಯಾನಸ್ಥನಾಗಿ ತನ್ನ ಕಾರ್ಯದ ಪರಮೋದ್ದೇಶವನ್ನು ಸಾಕ್ಷಾತ್ಕರಿಸಿಕೊಂಡು, ಅಲ್ಲಿಂದ ಅಮೆರಿಕೆಗೆ ಹೋಗಿ ವಿಶ್ವಧರ್ಮ ಪರಿಷತ್ತಿನಲ್ಲಿ ಭಾರತದ ಸನಾತನ ಧರ್ಮದ ವಿಶಾಲತೆ–ಗಂಭೀರತೆ–ಉತ್ತುಂಗತೆಗಳನ್ನು ಹೃದಯಂಗಮವಾಗಿ ವ್ಯಾಖ್ಯಾನಿಸಿದುದನ್ನು ಎಲ್ಲರೂ ಬಲ್ಲರು. ಆಗಿನ ಹಾಗೂ ಮುಂದಿನ ಲೋಕನೇತಾರರೆಲ್ಲ ಭಾರತದ ಪಾವನ ಪರಂಪರೆಯಿಂದ ಪ್ರಭಾವಿತರಾಗಿದ್ದರೆಂಬುದು ಉಲ್ಲೇಖಿಸಬೇಕಾದ ಸಂಗತಿ. ಲೋಕಮಾನ್ಯ ತಿಲಕ, ಅನಿ ಬೆಜಂಟ್, (ಗುಪ್ತವಾಗಿ) ಭಗಿನೀ ನಿವೇದಿತಾ, (ಶ್ರೀ ಅರವಿಂದರು, ಬಿಪಿನ ಚಂದ್ರ ಪಾಲ, ದೇಶಬಂಧು ದಾಸ, ಲಾಲಾ ಲಜಪತರಾಯ, ಪಂಡಿತ ಮದನ ಮೋಹನ ಮಾಳವೀಯ, ಸುಭಾಸ ಚಂದ್ರ ಬೋಸ, ಗಾಂಧೀಜಿ, ವಿನೋಬಾಜಿ – ಎಲ್ಲರೂ ಶ್ರೇಷ್ಠ ಚಾರಿತ್ರ್ಯ ಸಂಪನ್ನರು; ಭಾರತೀಯ ಪುಣ್ಯಪರಂಪರೆಯ ಸಲಿಲದಲ್ಲಿ ಮಿಂದವರು; ಹಲವರು ಭಗವದ್ಗೀತೆಯಿಂದ ಪ್ರೇರಣೆ ಪಡೆದವರು; ಕೆಲವರಂತೂ ಶ್ರೇಷ್ಠ ಧಾರ್ಮಿಕ–ನೈತಿಕ–ಆಧ್ಯಾತ್ಮಿಕ ಚಿಂತಕರು. ಅಂತೆಯೆ ಕಾಂಗ್ರೆಸ್ ಧುರೀಣರಾದ ಇವರ ಮಾರ್ಗದರ್ಶನದಲ್ಲಿ ಭಾರತೀಯ ಜನಕೋಟಿ ಸಾಮಾನ್ಯವಾಗಿ ಸರಿ ದಾರಿಯಲ್ಲಿಯೇ ನಡೆಯುತ್ತ ಬಂದಿತು. ಈಚೆಗೆ ಪಾಶ್ಚಾತ್ಯ, ತತ್ರಾಪಿ ಅಮೆರಿಕನ್–ರಶಿಯನ್ (ಪರಸ್ಪರ ವಿರುದ್ಧವಾಗಿ ತೋರುವ) ಪ್ರಭಾವಗಳು ಭಾರತೀಯ ಜೀವನ ದೃಷ್ಟಿಯನ್ನು ಕಿಂಚಿತ್ ಮಂಕುಗೊಳಿಸಿವೆ; ಸ್ವಾತಂತ್ರ್ಯದ ಭೌತಿಕ ಫಲಗಳನ್ನು ಹೊಟ್ಟೆ ತುಂಬ ಹೊಡೆಯಬೇಕೆನ್ನುವ ಮುಖಂಡರೆನಿಸಿಕೊಂಡವರು. ರಾಜಕೀಯ–ಸಾಮಾಜಿಕ–ಆರ್ಥಿಕ ರಂಗಗಳಲ್ಲಿ ನಡೆಯಿಸಿರುವ ಭ್ರಷ್ಟಾಚಾರ–ದುರಾಚಾರ–ಅಧಿಕಾರದಾಹ ಪ್ರೇರಿತ ಅನಾಚಾರಗಳು, ಯುವಕರ ಅವಿಧೇಯತೆ–ಸ್ವೈರತೆ–ಭೋಗ ಪ್ರವೃತ್ತಿ, ಹಿರಿಯರ ನಿಷ್ಕ್ರಿಯತೆ–ಪ್ರವಾಹ ಪತಿತತೆ ಇವೆಲ್ಲವೂ ರಾಷ್ಟ್ರ ವಿಘಾತಕ ಅಂಶಗಳಾಗಿ ಹೆಡೆಯೆತ್ತಿವೆ. ಇಷ್ಟೆಲ್ಲ ಗಂಡಾಂತರಗಳಿದ್ದರೂ ಒಟ್ಟಿನಲ್ಲಿ ಸ್ವಾಮಿ ವಿವೇಕಾನಂದರು ಹಾಗೂ ಶ್ರೀ ಅರವಿಂದರು ಹೇಳುವಂತೆ 'ಈ ಸನಾತನ ಮಾತೆ ಎದ್ದೇಳುವಳು ಹಾಗೂ ತನ್ನ ಜಾಗತಿಕ ಆಧ್ಯಾತ್ಮಿಕ ಕಾರ್ಯವನ್ನು ಮುಂದುವರಿಸಿ ಯಶಸ್ವಿಗೊಳಿಸುವಳು' ಎಂಬಲ್ಲಿ ಯಾವ ಸಂಶಯವೂ ಇಲ್ಲ.

ಶ್ರೀ ಅರವಿಂದರು ಬಡೋದೆಯಲ್ಲಿಯ ದೊಡ್ಡ ಸರಕಾರಿ ನೌಕರಿ ಬಿಟ್ಟು ಬಂಗಾಳಕ್ಕೆ ಆಗಮಿಸಿ, ಅಲ್ಲಿಯ ರಾಷ್ಟ್ರೀಯ ಚಳವಳಿಯ ಮಾರ್ಗದರ್ಶನ ಕೈಕೊಂಡರು. 'ರಾಷ್ಟ್ರೀಯತೆಯು ಅನ್ಯ ರಾಷ್ಟ್ರಗಳ ಧರ್ಮವಾಗಿದ್ದರೆ, ಧರ್ಮವೇ

ಭಾರತದ ರಾಷ್ಟ್ರೀಯತೆಯಾಗಿದೆ'ಯೆಂದು ಸಾರಿ, ನಮ್ಮ ಉಜ್ವಲ ಪರಂಪರೆಯ ಸೂತ್ರವಾಕ್ಯವನ್ನೇ ಹೇಳಿದರು. "ಭಾರತದ ಭಾಗ್ಯಸೂರ್ಯ ಮೂಡುವನು, ಅಖಿಲ ಭಾರತವನ್ನು ತನ್ನ ಪ್ರಕಾಶದಿಂದ ತುಂಬುವನು, ಮತ್ತು ಆ ಪ್ರಕಾಶವು ಭಾರತದ ಹೊರಗೆ ಏಶಿಯಾದ ತುಂಬ ಹಬ್ಬಿ ಜಗತ್ತಿನಲ್ಲೆಲ್ಲ ವ್ಯಾಪಿಸುವುದು" ಎಂದು ಭವಿಷ್ಯ ನುಡಿದರು. ಭಾರತೀಯ ಸ್ವಾತಂತ್ರ್ಯ ಆಂದೋಲನದ ಒಳಗುರಿ ಶ್ರೀ ಅರವಿಂದರ ದೃಷ್ಟಿಯಲ್ಲಿ ಎಷ್ಟು ಉಚ್ಚವಾಗಿತ್ತೆಂಬುದಕ್ಕೆ ಈ ಮಾತುಗಳೊಂದು ನಿದರ್ಶನೆ. ಅಂತೆಯೆ ವಿಶ್ವಕವಿ ರವೀಂದ್ರರು "ಭಾರತಾತ್ಮದ ವಿಮುಕ್ತ ಮೂರ್ತಿವೆತ್ತ ವಾಣಿ" ಎಂದು ಶ್ರೀ ಅರವಿಂದರನ್ನು ಗೌರವಿಸಿದರು, ಲೋಕಮಾನ್ಯರ ರಾಜಕೀಯ ಸಹಕಾರಿಗಳಾಗಿ, ಬಂಗಾಳದ ಹಾಗೂ ಬೇರೆ ಕಡೆಯ ಕ್ರಾಂತಿಕಾರೀ ತೀವ್ರವಾದೀ ರಾಷ್ಟ್ರೀಯ ಚಲನವಲನೆಗಳ ತೆರೆಮರೆಯ ಸೂತ್ರಧಾರರಾಗಿ, ರಾಷ್ಟ್ರೀಯ ಶಿಕ್ಷಣ – ಸ್ವದೇಶಿ – ಬಹಿಷ್ಕಾರ ಎಂಬ ತ್ರಿಸೂತ್ರಿಯ ಪ್ರವಕ್ತಾರರಾಗಿ, ಮೊದಲು 'ಯುಗಾಂತರ' ಎಂಬ ಬಂಗಾಳಿ ವಾರಪತ್ರಿಕೆಯ ಮೂಲಕ, ಅನಂತರ 'ಬಂದೇ ಮಾತರಂ' ಎಂಬ ಇಂಗ್ಲೀಷ್ ದಿನಪತ್ರಿಕೆಯ ಮೂಲಕ, ಅದಕ್ಕೂ ಮುಂದೆ 'ಕರ್ಮಯೋಗಿನ್' ಎಂಬ ಇಂಗ್ಲೀಷ್ ವಾರಪತ್ರಿಕೆಯ ಮೂಲಕ ಭಾರತದ 'ರಾಷ್ಟ್ರಧರ್ಮ' ಕಲ್ಪನೆಯ ಭೌತಿಕ–ದೈವಿಕ–ಆಧ್ಯಾತ್ಮಿಕ ಅಂಗಗಳನ್ನು ಹಾಗೂ ಅದರ ವಿಶ್ವ ಸ್ವರೂಪವನ್ನು ಕುರಿತು ಉದ್ಬೋಧಕ ವಿಚಾರಶ್ರೀಯನ್ನು ನಾಡಿಗೆ ಅನುಗ್ರಹಿಸಿದರು, ನಾಡಿಗರ ರಾಷ್ಟ್ರಾಭಿಮಾನವನ್ನು ಉದ್ದೀಪಿಸುವ ಈ ರಾಷ್ಟ್ರೀಯ ಚಟುವಟಿಕೆಗಳು ನಡೆಯುತ್ತಿರುವಾಗಲೇ ಒಳಗಿಂದೊಳಗೇ ಅವರಲ್ಲೊಂದು ಯೌಗಿಕ ಮನೋಭಾವ ತಾನಾಗಿ ಅರಳುತ್ತಿತ್ತು. ನರ್ಮದಾ ತೀರದಲ್ಲಿಯ ಯೋಗಿಜನರ ಬೆಟ್ಟಿ, ಶ್ರೀ ಲೇಲೆ ಮಹಾರಾಜರ ಪ್ರತ್ಯಕ್ಷ ಯೌಗಿಕ ಮಾರ್ಗದರ್ಶನ – ಇವೆಲ್ಲ ಅವರಲ್ಲೊಂದು ಆಂತರಂಗಿಕ ಕ್ರಾಂತಿಯನ್ನೇ ಜರುಗಿಸಿದವು. ಭಾರತದ ಋಷಿ – ಮುನಿಗಳು, ಅಧ್ಯಾತ್ಮ ಸಾಹಿತ್ಯ, ಯೋಗದರ್ಶನಗಳು ತೋರಿದ ದಾರಿಯಲ್ಲಿ ನಡೆದು ಗಾಢ ಪಾರಮಾರ್ಥಿಕ ಅನುಭೂತಿಯನ್ನು ಪಡೆಯದ ಹೊರತು ಭಾರತದ ಅಂತರ್ಬಾಹ್ಯ ಸರ್ವಾಂಗೀನ ಪ್ರಗತಿ – ಉನ್ನತಿಯ ನಿಶ್ಚಿತ ಮಾರ್ಗವನ್ನು ತೋರುವುದು ತಮಗಾಗದು ಎಂಬ ನಿರ್ಣಯ ಒಳಗಿಂದೊಳಗೇ ಅಚ್ಚೊತ್ತಿದಂತೆ ಅವರಲ್ಲಿ ರೂಪುಗೊಳ್ಳುತಿತ್ತು. ಇದು ಆಂತರಿಕವಾದ ದೃಢಾನುಭವವಾಗಲು ಅನುಕೂಲವಾದ ಮಹತ್ತ್ವದ ರಾಜಕೀಯ ಘಟನೆಯೊಂದು ನಡೆಯಿತು. ಅವರ ತಮ್ಮ ಬಾರೀಂದ್ರನ ನೇತೃತ್ವದಲ್ಲಿ ಯುವಕ

ಕ್ರಾಂತಿಕಾರರು ನಡೆಯಿಸಿದ ರಹಸ್ಯ ಚಟುವಟಿಕೆಗಳು ಪತ್ತೆಯಾಗಿ, ಬ್ರಿಟಿಷ್ ಆಳರಸರು ಅವರನ್ನೆಲ್ಲ (ಅವರ 'ಮೆದುಳು' ಎಂದು ಭಾವಿಸಿದ ಶ್ರೀ ಅರವಿಂದರೊಡನೆ) ಸೆರೆಹಿಡಿದು (1908 ರ ಮೇ 2 ತಾರೀಖು ಮಧ್ಯರಾತ್ರಿ), ಅಲಿಪೂರ ಕಾರಾಗೃಹದಲ್ಲಿರಿಸಿ, 'ರಾಜನ ವಿರುದ್ಧ ಯುದ್ಧ ಮಾಡುವ (waging war against the King)' ಆರೋಪವನ್ನು ಅವರ ಮೇಲೆ ಹೊರಿಸಿ ಮೊಕದ್ದಮೆ ಹೂಡಿದರು. 36 ಜನ ಆರೋಪಿಗಳು, 206 ಸಾಕ್ಷಿದಾರರು, 4,000 ದಸ್ತಾವೇಜುಗಳು (documents), 5,000 ಪುರಾವೆಯ ವಸ್ತುಗಳು (exhibits) ಎಂದರೆ ಬಾಂಬು, ರಿವಾಲ್ವರು, ಮದ್ದುಗುಂಡು, ವಿಷಮಯ ಆ್ಯಸಿಡ್ ಇತ್ಯಾದಿಗಳನ್ನು ಒಳಗೊಂಡ ಈ ಚರಿತ್ರಾರ್ಹ ಮೊಕದ್ದಮೆ ಪೂರ್ತಿ ಒಂದು ವರ್ಷ ಕಾಲ ನಡೆಯಿತು. ಶ್ರೀ ಅರವಿಂದರಿಗೆ ಅಂತರ್ಯಾಮಿ ಭಗವಂತನಿಂದ ಸ್ಪಷ್ಟ ಆದೇಶ ಬಂದಿತು – "ನೀನು ಸುಮ್ಮನಿರು. ನೀನು ಬಿಡುಗಡೆ ಮಾಡಲ್ಪಡುವಿ. ನಿನ್ನ ಪರವಾಗಿ ವಕಾಲತ್ತು ಹಿಡಿದವ ನಿನ್ನ ಕಾಲೊಡಕುಗಳನ್ನು ಕತ್ತರಿಸಿಹಾಕಲು ಸಹಾಯಕನಾಗುವನು. ನಾನು ಆತನಿಗೆ ಆವಶ್ಯಕ ಮಾಹಿತಿ ಪೂರೈಸುತ್ತೇನೆ. ನೀನು ನಿನ್ನ ಬಿಡುಗಡೆಯ ಪ್ರಯತ್ನದ ಗೋಜಿಗೇನೇ ಹೋಗಬೇಡ!" ದೇಶಬಂಧು ಚಿತ್ತರಂಜನ ದಾಸರೇ ಆ ಖ್ಯಾತಿವೆತ್ತ ನ್ಯಾಯವಾದಿಗಳು. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಎಡ್ಮಂಡ್ ಬರ್ಕರು ಭಾರತದ ಪರವಾಗಿ ಮಾಡಿದ ಭಾಷಣಗಳು, ಜಗತ್ತಿನ ಸ್ವಾತಂತ್ರ್ಯ ಸಂಗ್ರಾಮಗಳ ಕಾಲದಲ್ಲಿ ವಿಶ್ವವಿಖ್ಯಾತಿ ಪಡೆದ ನ್ಯಾಯವಾದಿಗಳ ಸಮರ್ಥನೆಗಳಂತೆಯೇ – ಇವುಗಳ ಮಾಲಿಕೆಯಲ್ಲಿ, ಈ ದೇಶಬಂದು ಚಿತ್ತರಂಜನ ದಾಸ್ ಶ್ರೀ ಅರವಿಂದರ ಪರವಾಗಿ ಮಂಡಿಸಿದ ವಾದಗಳು ಗಮನಾರ್ಹವಾಗಿವೆ. ಅಲಿಪೂರ ಕಾರಾಗೃಹ ವಾಸದಲ್ಲಿ ಶ್ರೀ ಅರವಿಂದರಿಗೆ ಭಗವಂತನ ಸಾಕ್ಷಾತ್ ದರ್ಶನ–ಸ್ಪರ್ಶನಗಳ ಅನುಭವ ಬಂದಿತು. ಗೀತೆ ಹೇಳುವ 'ವಾಸುದೇವಃ ಸರ್ವಂ' ಎಂಬ ದಿವ್ಯ ಬ್ರಹ್ಮಸಂಸ್ಪರ್ಶ ಅವರ ನಿತ್ಯ ಪ್ರತೀತಿಯಾಯಿತು. ಕೋರ್ಟಿನ ನಿರ್ಣಯ ಕೊನೆಗೊಮ್ಮೆ ಹೊರಬಿದ್ದಿತು: ಅದರಲ್ಲಿ ಕೆಲವರಿಗೆ ಗಲ್ಲು, ಕೆಲವರಿಗೆ ಕರಿನೀರು, ಕೆಲವರಿಗೆ ದೀರ್ಘ ಕಾರಾಗೃಹವಾಸ, ಶ್ರೀ ಅರವಿಂದರಿಗೆ ಬಿಡುಗಡೆ!

1909 ರ ಮೇ 5 ತಾರೀಖಿನಂದು ಶ್ರೀ ಅರವಿಂದರು ಜೇಲಿನಿಂದ ಹೊರಬಂದರು. ಉತ್ತರಪಾರಾ ಎಂಬಲ್ಲಿ ಅವರಿಗಾಗಿ ಏರ್ಪಡಿಸಿದ ಸಾರ್ವಜನಿಕ ಸತ್ಕಾರ ಸಭೆಯಲ್ಲಿ ಅವರು ಮಾಡಿದ ಭಾಷಣದಲ್ಲಿ ತಮ್ಮಲ್ಲಾದ ಆಂತರಿಕ

ಪರಿವರ್ತನೆಯನ್ನು ವಿವರಿಸಿ ಹೇಳಿದರು. ಕಾರಾಗೃಹವಾಸದಲ್ಲಿ ಭಗವಂತನಿಂದ ಅವರಿಗೆ ಬಂದ ಆದೇಶವೇನಿತ್ತು? ಎನ್ನುವದನ್ನು ಅವರೇ ತಿಳಿಸಿರುವಂತೆ "ಈ ನಿನ್ನ ಒಂದು ವರ್ಷದ ಏಕಾಂತ ಕಾಲದಲ್ಲಿ ನಿನಗೆ ಕೆಲವೊಂದು ಅನುಭವಗಳನ್ನು ಕೊಡಲಾಗಿದೆ. ಆ ಬಗ್ಗೆ ನಿನಗೆ ಕೆಲ ಸಂದೇಹಗಳಿದ್ದವು, ಅವುಗಳ ನಿವಾರಣೆ ಮಾಡಲಾಯಿತು. ಹಿಂದೂ ಧರ್ಮದ ನಿತ್ಯಸತ್ಯತೆಯನ್ನು ನಿನಗೆ ತೋರಿಸಲಾಯಿತು. ಈ ಧರ್ಮವನ್ನು ನಾನು ಜಗತ್ತಿನೆದುರಿಗೆ ಉದ್ಧರಿಸಿ ಪ್ರದರ್ಶಿಸಲಿದ್ದೇನೆ. ಇದನ್ನು ಋಷಿಗಳ–ಸಂತರ–ಅವತಾರಿಗಳ ಮೂಲಕ ನಾನು ಬೆಳೆಸಿದ್ದೇನೆ, ಪರಿಪೂರ್ಣಗೊಳಿಸಿದ್ದೇನೆ; ಅದೀಗ ಜಗತ್ತಿನ ರಾಷ್ಟ್ರ ಸಮೂಹದಲ್ಲಿ ಕಾರ್ಯವೆಸಗಲು ಹೊರಡುವುದಿದೆ. ನನ್ನ ಶಬ್ದದಿಂದ (ಧ್ವನಿಯಿಂದ) ಈ ರಾಷ್ಟ್ರ ಎದ್ದೇಳುವಂತೆ ಮಾಡುತ್ತಿದ್ದೇನೆ.... ನೀನು ಹೊರಹೊರಟು ನಿನ್ನ ರಾಷ್ಟ್ರಕ್ಕೆ ನನ್ನೀ ವಾಣಿಯನ್ನು ಹೇಳು, – 'ಸನಾತನ ಧರ್ಮಕ್ಕಾಗಿ ನೀವು ಎಚ್ಚತ್ತು ಎದ್ದೇಳುತ್ತಿದ್ದೀರಿ, ಜಗತ್ತಿಗಾಗಿ, ನಿಮಗಾಗಿ ಅಲ್ಲ, ನೀವು ಏಳುತ್ತಿದ್ದೀರಿ. ಜಗತ್ತಿನ ಸೇವೆಗಾಗಿ ನಿಮಗೆ ಸ್ವಾತಂತ್ರ್ಯವನ್ನು ಲಭ್ಯವಾಗುತ್ತದೆ."

(ಶ್ರೀ ಅರವಿಂದರು ಮತ್ತೆ ರಾಜಕೀಯ ರಂಗವನ್ನು ಪ್ರವೇಶಿಸಿ ಚದರಿಹೋದ ರಾಷ್ಟ್ರೀಯ ಶಕ್ತಿ–ವ್ಯಕ್ತಿಗಳನ್ನು ಸಂಘಟಿಸಲು ಹೆಣಗಿದರು. ಇದನ್ನು ಮಾಡುತ್ತಿರುವಾಗ ಭಾರತದ ತ್ರಿಕಾಲಾಬಾಧಿತ ಮನೋಧರ್ಮವಾದ 'ಆಧ್ಯಾತ್ಮಿಕತೆ'ಯನ್ನು ಒತ್ತಿ ಹೇಳಿದರು, "ನಾವು ನಮ್ಮ ಮುಂದೆ ಇರಿಸಿಕೊಂಡಿರುವ ಕಾರ್ಯ ಯಾಂತ್ರಿಕವಾಗಿರದೆ ನೈತಿಕ ಮತ್ತು ಆಧ್ಯಾತ್ಮಿಕವಾಗಿದೆ. ಸರಕಾರದ ಬಾಹ್ಯ ರೂಪವನ್ನು ಬದಲಿಸುವದು ನಮ್ಮ ಗುರಿಯಲ್ಲ, ಆದರೆ ಒಂದು ರಾಷ್ಟ್ರವನ್ನು ಕಟ್ಟುವುದು, ಬರೀ ರಾಜಕೀಯ, ಬರೀ ಸಾಮಾಜಿಕ, ಬರೀ ಧರ್ಮಶಾಸ್ತ್ರ–ತತ್ತ್ವಜ್ಞಾನ–ಸಾಹಿತ್ಯ–ವಿಜ್ಞಾನ (science) ವಿಷಯಕ ಚಟುವಟಿಕೆಗಳಿಗೆ ನಮ್ಮನ್ನು ನಾವು ನಿವೇದಿಸಿಕೊಳ್ಳುವುದಿಲ್ಲ; ಆದರೆ ಇವೆಲ್ಲವುಗಳನ್ನೆಲ್ಲ ಒಳಗೊಂಡ 'ಧರ್ಮ'ವನ್ನು, ವಿಶ್ವವ್ಯಾಪಕ ದೃಷ್ಟಿಯುಳ್ಳ ರಾಷ್ಟ್ರ ಧರ್ಮವನ್ನು ಪುನರುದ್ಧರಿಸಲು ನಾವು ನಮ್ಮನ್ನು ಅರ್ಪಿಸಿಕೊಳ್ಳುತ್ತಿರುವೆವು. ಜೀವನದ ಒಂದು ಮಹಾನ್ ಧರ್ಮವಿದೆ, ಮಾನವೀಯ ಉತ್ಕ್ರಾಂತಿಯ ಮಹಾನ್ ತತ್ತ್ವವೊಂದಿದೆ. ಭಾರತವೇ ಯಾವುದನ್ನು ರಕ್ಷಿಸಿ – ಅದರ ಜೀವಂತ ಉದಾಹರಣೆಯಾಗಿ – ಪ್ರತಿಪಾದನೆ ಮಾಡಬಲ್ಲುದೋ ಅಂತಹ ಜ್ಞಾನಾನುಭೂತಿಯ ನಿಧಿಯೊಂದಿದೆ. ಅದುವೇ 'ಸನಾತನ ಧರ್ಮ', 'ನಿತ್ಯ ಶಾಶ್ವತ ಧರ್ಮ'. 'ನಾವು ನಾವಾಗಬೇಕು',

'ಯುರೋಪ್' ಆಗಬಾರದು, – ಇದು ಭಗವಂತನ ಸಂಕಲ್ಪ. ನಾವು ನಮ್ಮ ರಾಷ್ಟ್ರದ 'ಸ್ವಧರ್ಮ'ವನ್ನು ತೊರೆದು 'ಅನ್ಯಧರ್ಮ'ವನ್ನು ಅನುಷ್ಠಿಸಿ ಜೀವನದ ಅನುಭವವನ್ನು ಉಣ್ಣಬಯಸುತ್ತಿರುವೆವು. ನಾವು ಹಿಂದಿರುಗಿ ಜೀವನದ–ಶಕ್ತಿಯ ಸ್ರೋತವನ್ನು ನಮ್ಮೊಳಗೇ ಹುಡುಕಿಕೊಳ್ಳಬೇಕಾಗಿದೆ. ನಾವು ಭೂತಕಾಲದ ಘನತೆಯನ್ನು ಮನದಟ್ಟು ಮಾಡಿಕೊಂಡು ಭವಿಷ್ಯತ್ತನ್ನು ರೂಪಿಸಿಕೊಳ್ಳಲು ಅದನ್ನು ಬಳಸಬೇಕಾಗಿದೆ. ನಾವು ಮೊದಲು ನಮ್ಮನ್ನೆ ಸಾಕ್ಷಾತ್ಕರಿಸಿಕೊಂಡು, ಭಾರತದ ಸನಾತನ ಜೀವನದ ಹಾಗೂ ಸ್ವಧರ್ಮದ ಸತ್–ತತ್ತ್ವಗಳ ಪ್ರಕಾರವಾಗಿ ಪ್ರತಿ ಮಾತನ್ನೂ ಚಟುವಟಿಕೆಯನ್ನೂ ಮಾರ್ಪಡಿಸಿಕೊಳ್ಳಬೇಕಾಗಿದೆ. ಇದಕ್ಕಾಗಿ "ಮೊದಲು ಒಳಗಿನ ರಾಜ್ಯವನ್ನು ಅಂತಃಸ್ವರಾಜ್ಯವನ್ನು ಪುನಃ ಗೆದ್ದುಕೊಳ್ಳಿರಿ, ಹೊರಗಿನ ಸಾಮ್ರಾಜ್ಯವನ್ನು ಜಯಿಸುವ ಮೊದಲು ಇದನ್ನು ಸಾಧಿಸಿರಿ." "ಯೋಗವನ್ನು ಮಾನವ ಜೀವಿತದ ಪರಮಾದರ್ಶವನ್ನಾಗಿ ಮಾಡಲೆಂದೇ ಭಾರತ ಎದ್ದೇಳುತ್ತಿದೆ. ಯೋಗದಿಂದಲೆ ಭಾರತಾಂಬೆ ಸ್ವಾತಂತ್ರ್ಯ ಪಡೆಯುವ ಶಕ್ತಿಯನ್ನು–ಐಕ್ಯವನ್ನು–ಘನತೆಯನ್ನು ಸಂಪಾದಿಸುವಳು; ಅದನ್ನು ಕಾಪಾಡಲು ಬಲವನ್ನೂ ಸಂಪಾದಿಸುವಳು. ಆಧ್ಯಾತ್ಮಿಕ ಕ್ರಾಂತಿ ಬರುತ್ತಿದೆ; ಭೌತಿಕವು ಅದರ ನೆರಳು, ಪ್ರತಿಬಿಂಬ ಮಾತ್ರ – ಇದು ನಮಗೆ ಸ್ಪಷ್ಟವಾಗಿ ಗೋಚರವಾಗುತ್ತಿದೆ." "ಭಾರತದ ಕಾರ್ಯ ಜಗತ್ತಿನ ಕಾರ್ಯ, ದೇವರ ಕಾರ್ಯ." "ಇದೋ! ಇದೋ! ಭಗವಂತನ ಆದೇಶ ಕೇಳಿಸುವುದಿಲ್ಲವೇ? – ಒಗ್ಗೂಡಿರಿ, ಸ್ವತಂತ್ರರಾಗಿರಿ, ಒಂದಾಗಿರಿ, ಶ್ರೇಷ್ಠರಾಗಿರಿ!".

ಈ ರೀತಿ 'ಭಾರತ ಧರ್ಮ' ನಿರೂಪಣ ಮಾಡುತ್ತ ಚದರಿದ ರಾಷ್ಟ್ರ ಶಕ್ತಿಗಳನ್ನು ಸಂಘಟಿಸಲು ಪ್ರಯತ್ನಿಸುತ್ತಿದ್ದಾಗ ಶ್ರೀ ಅರವಿಂದರನ್ನು ದೇಶದ ಹೊರಕ್ಕೆ ಹಾಕುವ ಬ್ರಿಟಿಷ್ ಸರಕಾರದ ಉದ್ದೇಶದ ಸುದ್ದಿ ಭಗಿನೀ ನಿವೇದಿತಾ ಅವರಿಂದ ರಹಸ್ಯವಾಗಿ ತಿಳಿದುಬಂದಿತು. ಮುಂದೆ ಅವರ ಕಚೇರಿಯ ಕಾಗದ ಪತ್ರಾದಿಗಳನ್ನು ಶೋಧಿಸಿ ಅವರನ್ನು ಬಂಧಿಸಬೇಕೆಂಬ ಸತ್ಕಾರದ ಗುಪ್ತ ಯೋಜನೆಯೂ ಅವರಿಗೆ ಗೊತ್ತಾಯಿತು. ಕೂಡಲೆ ಅವರು ಗುಪ್ತವಾಗಿ ಹೊರಬಿದ್ದು, ಚಂದ್ರನಗರಕ್ಕೆ ಆಗಮಿಸಿ, ಅಲ್ಲಿಂದ ಹಡಗಿನಲ್ಲಿ, 1910 ಏಪ್ರಿಲ್ 4 ರಂದು ಪಾಂಡಿಚೇರಿಗೆ ಬಂದರು.

... ಮುಂದುವರೆಯುತ್ತದೆ

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್

## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ವೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 1ನೇ ಫೆಬ್ರವರಿ 2020 ಶನಿವಾರ ಸಂಜೆ 5.30 ರಿಂದ 6.30 ರವರೆಗೆ ಡಾ॥ ಶ್ರೀನಿವಾಸಮೂರ್ತಿ, ನಿವೃತ್ತ ಮನೋವೈದ್ಯರು, ನಿಮ್ಹ್ಯಾನ್ಸ್, ಬೆಂಗಳೂರು ಇವರಿಂದ "ಎಕ್ಸರ್‌ಸೈಜ್ – ಮಿರಾಕಲ್ ಮೆಡಿಸನ್" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

ದಿನಾಂಕ 8ನೇ ಫೆಬ್ರವರಿ 2020 ಶನಿವಾರ ಸಂಜೆ 5.30 ರಿಂದ 6.30 ರವರೆಗೆ ಡಾ॥ ಪ್ರಕಾಶ್, ಅಧ್ಯಕ್ಷರು, ಲೈಫ್ ಸೆಲೆಬ್ರೇಷನ್ಸ್, ಬೆಂಗಳೂರು ಇವರಿಂದ "ಕ್ರಿಟಿಕಲ್ ಡೆತ್ ಈಜ್ ನಾಟ್ ದಿ ಎಂಡ್ ಆಫ್ ಲೈಫ್" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

ದಿನಾಂಕ 15ನೇ ಫೆಬ್ರವರಿ 2020 ಶನಿವಾರ ಸಂಜೆ 5.30 ರಿಂದ 6.30 ರವರೆಗೆ ಶ್ರೀ ಆರ್. ಶೈಲೇಶ್‌ಚಂದ್ರ ಗುಪ್ತ, ವೆಟರನ್ ಜರ್ನಲಿಸ್ಟ್, ಬೆಂಗಳೂರು ಇವರಿಂದ "ಎಕನಾಮಿಕ್ ಸೆನಾರಿಯೋ ಆಫ್ ದಿ ಕಂಟ್ರಿ" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

ದಿನಾಂಕ 21ನೇ ಫೆಬ್ರವರಿ 2020 ಶುಕ್ರವಾರದಂದು ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್‌ವತಿಯಿಂದ ಶ್ರೀಮಾತೆಯವರ ಜನ್ಮದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 10.00 ರಿಂದ 10.20 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರ ಮತ್ತು ಪ್ರಸಾದವನ್ನು ವಿತರಿಸಲಾಯಿತು. ಬೆಳಿಗ್ಗೆ 10.30 ರಿಂದ 12.00 ಗಂಟೆಯವರೆಗೆ ಶ್ರೀ ರಾಜೀವ್ ಎಂ. ನಾಡಿಗ್, ಬೆಂಗಳೂರು ಇವರಿಂದ "ಮಂತ್ರಾಸ್, ಇನ್ ದಿ ಲೈಟ್ ಆಫ್ ಶ್ರೀ ಅರವಿಂದೋ" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ತತ್ಸಂಬಂಧ 21ನೇ ಫೆಬ್ರವರಿಯಿಂದ 20ನೇ ಏಪ್ರಿಲ್‌ರವರೆಗೂ "The Mother's Paintings" ಎಂಬ ವಿಷಯದ ಬಗ್ಗೆ ವಸ್ತುಪ್ರದರ್ಶನವನ್ನು ಆಯೋಜಿಸಲಾಗಿದೆ.

ದಿನಾಂಕ 29ನೇ ಫೆಬ್ರವರಿ 2020 ಶನಿವಾರದಂದು ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್‌ವತಿಯಿಂದ ಸುವರ್ಣ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ

7.00 ರಿಂದ 7.30 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರ ಮತ್ತು ಪ್ರಸಾದವನ್ನು ವಿತರಿಸಲಾಯಿತು. ಸಂಜೆ 5.30 ರಿಂದ 6.30 ರವರೆಗೆ ಡಾ॥ ಅಜಿತ್ ಸಬ್ನೀಸ್, ಕಾರ್ಯನಿರ್ವಾಹಕ ಧರ್ಮದರ್ಶಿ, ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್, ಬೆಂಗಳೂರು ಇವರಿಂದ "ದಿ ಗೋಲ್ಡನ್ ಡೇ" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ನಂತರ ಶ್ರೀಮತಿ ಅನ್ನಪೂರ್ಣ ಸಕ್ರೋಜಿ ಮತ್ತು ಶ್ರೀ ಸುಭಾಷ್‌ಚಂದ್ರ ಜಿ. ಸಕ್ರೋಜಿ ಇವರಿಂದ "ಭವಾನಿ ಭಾರತಿ" ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು. ತತ್ಸಂಬಂಧ 29ನೇ ಫೆಬ್ರವರಿಯಿಂದ 20ನೇ ಏಪ್ರಿಲ್‌ರವರೆಗೂ "The Supramental Flowers" ಎಂಬ ವಿಷಯದ ಬಗ್ಗೆ ವಸ್ತುಪ್ರದರ್ಶನವನ್ನು ಆಯೋಜಿಸಲಾಗಿದೆ.

ಈ ಕಾರ್ಯಕ್ರಮಗಳಿಗೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

## STATEMENT ABOUT OWNERSHIP AND OTHER PARTICULARS ABOUT NEWSPAPER AKHIL BHARAT PATRIKA

### FORM IV

| | | |
|---|---|---|
| 1. Place of Publication | : | Bangalore |
| 2. Periodicity of its Publication | : | Monthly |
| 3. Printer's Name | : | Dr. Ajit Sabnis |
| Nationality | : | Indian |
| Address | : | No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078. |
| 4. Publisher's Name | : | Dr. Ajit Sabnis |
| Nationality | : | Indian |
| Address | : | No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078. |
| 5. Editor's Name | : | Sri Puttu Parashuram Kulkarni |
| Nationality | : | Indian |
| Address | : | No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078. |

6. Names and addresses of individuals who own the newspaper and partners or shareholders holding More than one per cent of the total capital.

| | | |
|---|---|---|
| Name | : | Sri Aurobindo Society |
| Nationality | : | |
| Address | : | No. 11, Saint Martin Street, Puducherry - 605 001. |

I, Dr. Ajit Sabnis, hereby declare that the particulars given above are true to the best of my knowledge and belief.

Sd/-

Date : 29-02-2020

Dr. Ajit Sabnis



ಅವಳಂಗಗಳಲಿ ರೂಪ–ರೂಪಗಳ ವರ್ಣನಾತೀತ ಸೃಷ್ಟಿ
ಮೂರ್ತಗೊಳ್ಳಲೆನೆ ಮೈದಾಳಿಕೊಂಡ ಅವತಾರ ರೂಪ–ವೃಷ್ಟಿ
ಅನಂತಾನಂತ ತೋಷ–ಸರ್ವಸ್ವ ಸರ್ವಾಪ್ತದಲ್ಲಿ ನೆಲೆಸಿ
ಈ ಅಂಧ–ಲೋಕ–ಶಕ್ತಿಗಳು ಅದನೆ ತಮಗಾಗಿ ಪಡೆಯ ಬಯಸಿ

ಮುಂಚೂಣಿಯಲ್ಲಿ ಅವಳಿದೋ ಸ್ಥಿತವು ಜನನ–ಸರಣಿಗಳಿಗಾಗಿ
ಮತ್ತಿದೋ ಸತತ ಪರಿಶ್ರಮಿಸುತಿಹಳು ಜೊತೆಜೊತೆಗೆ ದೈವವಾಗಿ
ಅವಳ ಆ ಹಸ್ತಗಳು ಮಾತ್ರ ಶಕ್ತ, ಪರಿವರ್ತಗೊಳಿಸೆ ಪರ್ವ
ಕಾಲನಾ ರಾಹು–ಸರ್ಪಕಿಹ ಭಿತ್ತಿ ರಿಕ್ತಗೊಳಿಸಲೆನೆ ಸರ್ವ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 2 ರೇಣು 3 ಪುಟ 120)**

**RNI No. 22511/1971**
No. of Pages **56 + 4 (Cov. Page)**
KAR Reg No.: RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2020
Licensed to Post at BG PSO, Mysore Road, Bengaluru - 560 026



ಅವತಾರಗಳು ಸರ್ವ ಪರಿಪೂರ್ಣ ಬದುಕ ಬದುಕಿದ್ದರೂನು ಸಹಿತ
ಲಯಗೊಂಡು ಮತ್ತೆ ನಿಷ್ಫಲದ ಫಲದ ಬರಿ ಶುಷ್ಕ ಬದುಕು ಸತತ,
ತಿರುಳಿಲ್ಲವೆಂದು ಋಷಿಯ ಚಿಂತನವು, ಪ್ರವಾದಿಯಾ ಧ್ವನಿಯು ತಾನು
ನಿಷ್ಫಲದ ಮಧ್ಯೆ ಜಾಜ್ವಲ್ಯಮಾನ ಆ ಊರ್ಧ್ವಪಥವು ಇನ್ನು

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 10 ರೇಣು 2 ಪುಟ 609–10)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.